ಜನವರಿ 25, 2026
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ|| ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2021
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ರಾಮನಿಗೆ ಇನ್ನಿಲ್ಲ ಪರಮೇಶ್ವರನ ಕೃಪೆ!



## ಚಿನ್ನದ ಕಳ್ಳಿ ಮಗಳು ಜೈಲಲ್ಲಿ ಮಗಳ ವಯಸ್ಸಿನ ಮಳ್ಳಿ ಜೊತೆ ಕಚೇರಿಯಲ್ಲಿ ಲವಿಡವಿ!!





ಇದು ನಾನಲ್ಲ 'AI'!



## ಅತ್ತಿಗೆ ಜೊತೆ ಝುಮ್ಮ ಮಾಡ್ತಿದ್ದ ತಮ್ಮನ ಹತ್ಯೆ!

## ಜ್ಯೋತಿಷಿ ಮಾತು ಸುಳ್ಳಾಯ್ತು ಜಗ್ಗೇಶ್ ಮಾತು ನಿಜವಾಯ್ತು!



## ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಫ್ಲಾಪ್!



## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

## 'ಪೊಲೀಸ್ ನ್ಯೂಸ್' ಮೊದಲ ವಾರ್ಷಿಕೋತ್ಸವಕ್ಕೆ ಅಂದಿನ ಸಿಎಂ ಆರ್. ಗುಂಡೂರಾವ್ ಆಗಮಿಸಿದ್ರು!

**07.06.1986.** 'ಪೊಲೀಸ್ ನ್ಯೂಸ್' ಬಳಗ ಎಂದೂ ಮರೆಯದ ದಿವಸ. ಅಂದು ನಮ್ಮ ಹೆಮ್ಮೆಯ ಪತ್ರಿಕೆಯ ಮೊಟ್ಟ ಮೊದಲ ವಾರ್ಷಿಕೋತ್ಸವ ಸಂಭ್ರಮ ನಡೆದಿತ್ತು. ಬೆಂಗಳೂರಿನ ಕ್ವೀನ್ಸ್ ರಸ್ತೆಯಲ್ಲಿರೋ ಅಗ್ರಿಕಲ್ಚರ್ ಅಂಡ್ ಟೆಕ್ನೋಲಜಿಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಅದ್ದೂರಿಯಾಗಿ ಆಚರಿಸಲ್ಪಟ್ಟಿತು. ಕರ್ನಾಟಕ ರಾಜ್ಯದ ಮೊಟ್ಟ ಮೊದಲ ಕ್ರೈಂ ವಾರಪತ್ರಿಕೆ 'ಪೊಲೀಸ್ ನ್ಯೂಸ್'ನ ಜನಪ್ರಿಯತೆ ಅದೆಷ್ಟಿತ್ತು ಎಂದರೆ, ನಮ್ಮ ಸಂಪಾದಕರಾದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು ಆಮಂತ್ರಣ ನೀಡಿದ ತಕ್ಷಣ ಅಂದಿನ ಮುಖ್ಯಮಂತ್ರಿ ಶ್ರೀ ಆರ್. ಗುಂಡೂರಾವ್ ಅವರು ಸಮಾರಂಭಕ್ಕೆ ಬರಲು ಒಪ್ಪಿಗೆ ಸೂಚಿಸಿದ್ದರು. ಮಾತ್ರವಲ್ಲ, ಕೊಟ್ಟ ಮಾತಿನಂತೆ ಎಲ್ಲರಿಗೂ ಮೊದಲೇ ಆಗಮಿಸಿದ್ದರು. ನಮ್ಮ ಸಂಪಾದಕರ ಆಪ್ತಮಿತ್ರರಾದ ಕೆ.ವಿ.ಆರ್. ಟ್ಯಾಗೋರ್ ಅವತ್ತು ಸಮಾರಂಭದ ಹೊಣೆ ಹೊತ್ತಿದ್ದು ನಮ್ಮ ಸುಕೃತ. ಉಳಿದಂತೆ, ಅಂದಿನ ಡಿಸಿಪಿ ಕೆ.ಸಿ. ರಾಮಮೂರ್ತಿಯವರು, ಬಿದರಿಯವರು, ನಮ್ಮ ಹಿರಿಯ ವರದಿಗಾರರಾದ ಎ. ಶ್ರೀನಿವಾಸಯ್ಯ, ಟೆಕ್ನಿಸಿಯನ್ಸ್ ಮತ್ತಿತರೆ ಆಪ್ತರು ಅಭಿಮಾನಿಗಳು ನೆರೆದು ಸಮಾರಂಭವನ್ನ ಅತ್ಯಂತ ಯಶಸ್ವಿಗೊಳಿಸಿದರು. ಇದೆಲ್ಲಾ ಈಗ ಸವಿನೆನಪು....












# ಮಾನವ ಕಳ್ಳ ಸಾಗಾಣಿಕೆ ನಿಲ್ಲಬೇಕು... ಮೋಸದ ಬಲೆಯಲ್ಲಿ ಅಮಾಯಕ ಜೀವಗಳು



ಸಂಪಾದಕ
**ಎಂ. ರಾಹುಲ್**

ಮಾನವ ಕಳ್ಳಸಾಗಣೆ ತಡೆ ಮತ್ತು ನಿಷೇಧ ಕಾಯ್ದೆಯಡಿ ಶಿಕ್ಷೆ ನೀಡಲಾಗುತ್ತಿದ್ದು, ಇಂತಹ ಕಠಿಣ ಕಾಯ್ದೆ ಇದ್ದರೂ ಈ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ಮಾನವ ಕಳ್ಳಸಾಗಾಣಿಕೆ ಎಂಬುದು ಇತ್ತೀಚಿನ ದಿನಗಳಲ್ಲಿ ಮಿತಿ ಮೀರಿ ನಡೆಯುತ್ತಿದೆ. ಅಪ್ರಾಪ್ತರು, ಮಹಿಳೆಯರು ಮತ್ತು ಯುವಕರು ಈ ಸಮಸ್ಯೆಗೆ ಒಳಗಾಗುತ್ತಿರುವುದು ಅತ್ಯಂತ ನೋವಿನ ಸಂಗತಿ. ದಂಧೆಯಾಗಿ ಮಾರ್ಪಾಟಾಗಿರುವ ಈ ಜಾಲದಲ್ಲಿ ಅಮಾಯಕ ಜೀವಗಳು ಮೋಸದ ಬಲೆಗೆ ಬಿದ್ದು, ಅದರಿಂದ ಬಿಡಿಸಿಕೊಂಡು ಹೊರ ಬರಲಾಗದೆ ನರಳಾಡುತ್ತಿವೆ.

ಮಾನವ ಕಳ್ಳಸಾಗಾಣಿಕೆ ಮತ್ತು ಮಾರಾಟ ದೇಶದಲ್ಲಿ ಶಿಕ್ಷಾರ್ಹ ಅಪರಾಧ ಮತ್ತು ಹೀನಕೃತ್ಯ. ಮಾನವ ಕಳ್ಳಸಾಗಣೆ ತಡೆ ಮತ್ತು ನಿಷೇಧ ಕಾಯ್ದೆಯಡಿ ಶಿಕ್ಷೆ ನೀಡಲಾಗುತ್ತದೆ. ಇಂತಹ ಕಠಿಣ ಕಾಯ್ದೆ ಇದ್ದರೂ ಈ ದಂಧೆ ಅವ್ಯಾಹತವಾಗಿ ನಡೆಯುತ್ತಿರುವುದು ನಾಚಿಕೆಗೇಡು. ಅಂತಾರಾಷ್ಟ್ರೀಯ ಜಾಲವೇ ಇದರ ಹಿಂದೆ ಇದ್ದು, ಕೋಟ್ಯಂತರ ವಹಿವಾಟು ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ.

ಬಲವಂತದ ಮದುವೆ, ಕೆಲಸ ಮತ್ತು ಲೈಂಗಿಕ ದಾಸ್ಯದ ವಿಚಾರಕ್ಕೆ ಮಹಿಳೆಯರು ಮತ್ತು ಮಕ್ಕಳನ್ನು ಸಾಗಿಸಲಾಗುತ್ತಿದೆ. ಅದರಲ್ಲಿ 18 ವರ್ಷದ ಕೆಳಗಿನ ಹೆಣ್ಣು ಮಕ್ಕಳೇ ಹೆಚ್ಚು. ವಿಮಾನ ನಿಲ್ದಾಣದ ಮೂಲಕವೂ ಈ ಕಾರ್ಯ ಸಕ್ರಿಯವಾಗಿದೆ. ಆದರೆ, ಪೊಲೀಸರಿಗೆ ಗೊತ್ತೇ ಆಗುವುದಿಲ್ಲ. ಅಲ್ಲದೆ, ಯಾರೊಬ್ಬರೂ ಮೇಲೂ ಕ್ರಮ ಜರುಗಿಸಿಲ್ಲ. ಇದು ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದ್ದು, ಕೂಲಂಕುಶವಾಗಿ ತನಿಖೆ ನಡೆಸುವಂತೆ ಗೃಹ ಇಲಾಖೆ ಚಾಟಿ ಬೀಸಿದೆ. ಇನ್ನು ಹಳ್ಳಿಯ ಕೆಲ ಶಾಲೆಗಳಿಂದ ಮಕ್ಕಳನ್ನು ಸಾಗಿಸುತ್ತಿದ್ದರೂ ಪೊಲೀಸ್ ಇಲಾಖೆ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿಲ್ಲ.

ಇದೇ ವಿಚಾರವಾಗಿ ಜನವರಿ 1ರಂದು ಎಲ್ಲ ಇಲಾಖೆಗಳ ಜೊತೆ ಸಭೆ ನಡೆಸಿದ ಸಿಎಂ ಗಂಭೀರವಾಗಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸದ್ಯ ರೈಲು ನಿಲ್ದಾಣಗಳಲ್ಲಿ ಹಾಗೂ ಬಸ್ ನಿಲ್ದಾಣಗಳಲ್ಲಿ ಮಾನವ ಕಳ್ಳ ಸಾಗಣೆ ಹೆಚ್ಚಾಗುತ್ತಿದೆ. ಆದರೆ, ಇದು ಪೊಲೀಸರ ಕಣ್ಣಿಗೆ ಯಾಕೆ ಕಾಣುತ್ತಿಲ್ಲ ಎಂಬುದು ಯಕ್ಷ ಪ್ರಶ್ನೆಯಾಗಿದೆ.

**ದಾಖಲಾದ ಪ್ರಕರಣಗಳು ಮತ್ತು ಮಾನವ ರಕ್ಷಣೆ**

ಐಪಿಸಿ ಸೆಕ್ಷನ್ ಅಡಿ 34, 344, 363ಎ, 366, 366ಎ, 366ಬಿ, 370, 370ಎ, 371, 372, 373, 375, 376 ಅಡಿ 8 ಪ್ರಕರಣ ದಾಖಲು, 17 ಮಂದಿ ರಕ್ಷಣೆ, ಆರು ಮಂದಿ (4 ಮಹಿಳೆಯರು, ಇಬ್ಬರು ಪುರುಷರು) ಬಂಧನ. ಪ್ರಿವೆಷನ್ ಆ್ಯಕ್ಟ್ ಐಪಿಸಿ 3, 4, 5, 5ಎ, 5ಬಿ, 5ಸಿ, 6, 7, 18 ಅಡಿಯಲ್ಲಿ 43 ಪ್ರಕರಣ ದಾಖಲು. 112 ಮಹಿಳೆಯರು, ಎರಡು ಪುಟ್ಟ ಹೆಣ್ಣು ಮಕ್ಕಳು ಸೇರಿ 114 ಮಂದಿ ರಕ್ಷಣೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 117 ಮಂದಿ (87 ಪುರುಷರು, 39 ಮಹಿಳೆಯರು) ಬಂಧನ.

ಬಾಲ ಕಾರ್ಮಿಕರಿಗೆ ಸಂಬಂಧಿಸಿದಂತೆ 5 ಪ್ರಕರಣ ದಾಖಲು, 6 ಬಂಧನ, ವೇಶ್ಯಾವಾಟಿಕೆಗೆ ಮಕ್ಕಳ ಬಳಕೆ ಸಂಬಂಧ 6 ಪ್ರಕರಣ ದಾಖಲು, 13 ಬಂಧನ, ರೈಲು ಮೂಲಕ ಬಸ್ಸಿನಲ್ಲಿ ಕರೆತಂದ 2 ಪ್ರಕರಣ ದಾಖಲು, ಇಬ್ಬರು ಅಪ್ರಾಪ್ತೆಯರ ರಕ್ಷಣೆ, ಒಬ್ಬನ ಬಂಧನ.



**ಒಟ್ಟು ಪ್ರಕರಣಗಳು**

2020ರಲ್ಲಿ ನೋಡುವುದಾದರೆ ಈವರೆಗೆ 65 ಪ್ರಕರಣ ದಾಖಲಾಗಿದ್ದು, 100 ಪುರುಷರು, 196 ಮಹಿಳೆಯರು, 21 ಅಪ್ರಾಪ್ತ ಬಾಲಕರು, 34 ಅಪ್ರಾಪ್ತ ಬಾಲಕಿಯರು ಸೇರಿ 345 ಮಂದಿಯನ್ನು ರಕ್ಷಿಸಲಾಗಿದೆ. ಹೀಗೆ ಮಾನವ ಕಳ್ಳ ಸಾಗಾಣಿಕೆ ಮಾಡುತ್ತಿದ್ದ 147 ಜನರನ್ನು (111 ಪುರುಷರು, 36 ಮಹಿಳೆಯರು) ಬಂಧಿಸಲಾಗಿದೆ.

ಮಾನವ ಸಾಗಾಟ ಮಾರಾಟ ಎಲ್ಲೆಡೆ ಸರಪಳಿಯಾಗಿದ್ದು, ಬಡತನ, ಅಮಾಯಕ, ಅಸಯಾಕತೆ, ಮಕ್ಕಳನ್ನು ಈ ಜಾಲಕ್ಕೆ ಬಳಸುತ್ತಾರೆ. ಶೇ. 95 ಮಂದಿ ವೇಶ್ಯಾವಾಟಿಕೆಗೆ ಬಳಕೆ, ಭಿಕ್ಷಾಟನೆ ಹೀಗೆ ಬೇರೆ ಬೇರೆ ಕಾರಣಕ್ಕೆ ಈ ಸಾಗಾಟ ನಡೆಯುತ್ತದೆ. ಅದರ ಕಡಿವಾಣಕ್ಕೆ ದೇಶದಲ್ಲಿ ಕಾನೂನು ಇದ್ದರೂ ಪ್ರಯೋಜನ ಇಲ್ಲವಾಗಿದೆ ಎಂದು ಸಂಶೋಧಕಿ ಡಾ. ಲೀಲಾ ಸಂಪಿಗೆ ತಿಳಿಸಿದ್ದಾರೆ. ಮಾನವ ಕಳ್ಳ ಸಾಗಾಣಿಕೆ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ ಸಂಶೋಧಕಿ ಮತ್ತು ಸಾಮಾಜಿಕ ಕಾರ್ಯಕರ್ತೆ ಸಾಮಾಜಿಕ ಕಾರ್ಯಕರ್ತೆ ಕೆ.ಎಸ್.ವಿಮಲಾ ಅವರು, ಮಾನವ ಕಳ್ಳಸಾಗಾಣಿಕೆ ಇದು ಶಿಕ್ಷಾರ್ಹ ಅಪರಾಧ, ಆದರೂ ನಿರಂತರವಾಗಿ ನಡೆಯುತ್ತಿದೆ. ಒಂದು ಸಮಾಜ, ಮತ್ತೊಂದು ಸರ್ಕಾರ ಮತ್ತು ಪೊಲೀಸ್ ಇಲಾಖೆ ವಿಫಲತೆಯೇ ಅದಕ್ಕೆ ಕಾರಣ. ಪೊಲೀಸರಿಗೆ ಮೊದಲೇ ಈ ಕುರಿತು ಮಾಹಿತಿ ಇರುತ್ತದೆ. ಆದರೂ ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿದು ಪ್ರಕರಣ ಮುಚ್ಚಿ ಹಾಕುತ್ತಾರೆ ಎಂದು ಮಾಹಿತಿ ನೀಡಿದ್ದಾರೆ.



ಇನ್ನೊಂದು ಮುಖ್ಯ ವಿಷಯ..

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊನ್ನೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಆರಕ್ಷಕ ಮಹಾ ನಿರೀಕ್ಷಕರ ಕಚೇರಿಯಲ್ಲಿ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮ್ಮೇಳನ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ. ಸಲೀಮ್, ಒಳಾಡಳಿತ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಮುಖ್ಯಮಂತ್ರಿಯವರ ಕಾರ್ಯದರ್ಶಿ ಬಿ.ಬಿ. ಕಾವೇರಿ ಮತ್ತಿತರರು ಉಪಸ್ಥಿತರಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮ್ಮೇಳನ ಉದ್ಘಾಟಿಸಿ ಭಾಷಣ ಮಾಡಿದರು.

★ ಸಮಾಜದಲ್ಲಿ ಶಾಂತಿ ನೆಮ್ಮದಿ ಕಾಪಾಡುವ ಗುರುತರವಾದ ಕಾರ್ಯವನ್ನು ಪೊಲೀಸ್ ಇಲಾಖೆ ಪರಿಣಾಮಕಾರಿಯಾಗಿ ನಡೆಸುತ್ತಿದೆ.

★ ಸಂವಿಧಾನ ಪ್ರತಿಯೊಬ್ಬರಿಗೂ ಸಮಾನ ಅವಕಾಶ, ರಕ್ಷಣೆಯನ್ನು ಒದಗಿಸಿದೆ. ಎಲ್ಲರಿಗೂ ಕಾನೂನು ಒಂದೇ. ಯಾರು ತಪ್ಪು ಮಾಡಿದರೂ ಅದು ತಪ್ಪೇ. ಬಲಾಢ್ಯರು, ಸಮಾಜ ಘಾತುಕಶಕ್ತಿಗಳಿಗೆ ಯಾವುದೇ ಕಾರಣಕ್ಕೂ ಮಣೆ ಹಾಕಬಾರದು. ದುರ್ಬಲರು, ಪರಿಶಿಷ್ಟ ಜಾತಿ, ವರ್ಗದ ಜನರು, ಧಾರ್ಮಿಕ ಅಲ್ಪಸಂಖ್ಯಾತರು ರಕ್ಷಣೆ ಎಲ್ಲರ ಹೊಣೆ. ದುರ್ಬಲರು ಯಾವುದೇ ಕಾರಣಕ್ಕೂ ಅನ್ಯಾಯಕ್ಕೆ ಒಳಗಾಗಬಾರದು. ಪ್ರತಿಯೊಬ್ಬರಿಗೂ ಸಮಾನ ನ್ಯಾಯ ಒದಗಿಸುವುದು ಪೊಲೀಸರ ಕರ್ತವ್ಯವಾಗಿದೆ. ತಹಶೀಲ್ದಾರ್ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಸರಿಯಾಗಿ ಕರ್ತವ್ಯ ನಿರ್ವಹಿಸಿದರೆ ಆ ತಾಲೂಕಿನಲ್ಲಿ ಜನರು ನೆಮ್ಮದಿಯಿಂದ ಇರಲು ಸಾಧ್ಯ. ಇದೇ ರೀತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ, ಎಸ್ಪಿ ಮತ್ತು ಸಿಇಒ ಸರಿಯಾಗಿ ಕರ್ತವ್ಯ ನಿರ್ವಹಿಸಿದರೆ ಆ ಜಿಲ್ಲೆಯ ಜನರು ನೆಮ್ಮದಿಯಿಂದ ಇರಲು ಸಾಧ್ಯ. ಆದರೆ ಕೆಲವು ಪೊಲೀಸ್ ಠಾಣೆಗಳಲ್ಲಿ ಕೆಲವು ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದ ಕಾರಣಕ್ಕೆ ಜನರು ತೊಂದರೆ ಅನುಭವಿಸಬೇಕಾಗುತ್ತದೆ.

★ ಕೊಲೆ, ಸುಲಿಗೆ, ಡಕಾಯಿತಿ, ದರೋಡೆ ಪ್ರಕಣಗಳ ಸಂಖ್ಯೆಯಲ್ಲಿ ಕಳೆದ ಒಂದು ವರ್ಷದಲ್ಲಿ ಕಡಿಮೆಯಾಗಿದೆ. ಆದರೆ ಸೈಬರ್ ಅಪರಾಧ, ಡ್ರಗ್ಸ್ ಚಟುವಟಿಕೆಗಳು ಹೆಚ್ಚಾಗಿದ್ದು, ಅದನ್ನು ಮಟ್ಟ ಹಾಕಲು ಕಠಿಣ ಕ್ರಮಗಳನ್ನು ಜರುಗಿಸಬೇಕು.

★ ನಮ್ಮ ರಾಜ್ಯದಲ್ಲಿ ಕ್ರಿಮಿನಲ್ ಪ್ರಕರಣಗಳಲ್ಲಿ ಕನ್ವಿಕ್ಷನ್ ದರ ಕಡಿಮೆಯಿದೆ. ಅಪರಾಧ ಪ್ರಕರಣಗಳಲ್ಲಿ ಭಾಗಿಯಾದವರಿಗೆ ಶಿಕ್ಷೆಯನ್ನು ಖಾತ್ರಿಪಡಿಸುವಲ್ಲಿ ಪೊಲೀಸರ ಪಾತ್ರ ಮುಖ್ಯವಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ ಕನ್ವಿಕ್ಷನ್ ಪ್ರಮಾಣ ಕಳೆದ ವರ್ಷ ಶೇ.3ರಷ್ಟಿತ್ತು ಈಗ ಶೇ.12 ಕ್ಕೆ ಸುಧಾರಿಸಿದ್ದು, ಇದನ್ನು ಇನ್ನಷ್ಟು ಉತ್ತಮಪಡಿಸಬೇಕಿದೆ.

★ ಅಪರಾಧವನ್ನು ಸಂಪೂರ್ಣವಾಗಿ ನಿಲ್ಲಿಸಲು ಸಾಧ್ಯವಿಲ್ಲದಿದ್ದರೂ, ಅಪರಾಧ ಪ್ರಮಾಣ ಕಡಿಮೆ ಮಾಡಲು ಸಾಧ್ಯವಿದೆ. ಆದರೆ ಕಳೆದ ಸಾಲಿನಲ್ಲಿ 88 ಕ್ರಿಮಿನಲ್ ಪ್ರಕರಣಗಳಲ್ಲಿ ಪೊಲೀಸರೇ ಭಾಗಿಯಾಗಿರುವುದು ನಾಚಿಗೇಡಿನ ವಿಷಯ.

★ ಪೊಲೀಸರು ಜಾಗರೂಕರಾಗಿದ್ದರೆ ಅನೇಕ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯವಿದೆ. ಎಟಿಎಂ ದರೋಡೆ ಪ್ರಕರಣಗಳು, ಬಳ್ಳಾರಿಯಲ್ಲಿ ನಡೆದ ಬ್ಯಾನರ್ ಗಲಾಟೆ ಪ್ರಕರಣಗಳನ್ನು ಪೊಲೀಸರು ಮುಂಜಾಗರೂಕತೆ ಮೂಲಕ ತಪ್ಪಿಸಬಹುದಾಗಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸರಿಯಾದ ಮುಂಜಾಗರೂಕತೆ ಕೈಗೊಂಡಿದ್ದರೆ, ಅಮಾಯಕರು ಕಾಲ್ತುಳಿತಕ್ಕೆ ಬಲಿಯಾಗುವುದನ್ನು ತಪ್ಪಿಸಲು ಸಾಧ್ಯವಿತ್ತು.

★ ಜೈಲುಗಳಲ್ಲಿ ಅವ್ಯವಸ್ಥೆ ಪ್ರಕರಣಗಳನ್ನು, ಮಾದಕ ವಸ್ತು ಜಾಲ ನಿಯಂತ್ರಣದಲ್ಲಿ ಯಾವುದೇ ಲೋಪವನ್ನು ಸಹಿಸಲು ಸಾಧ್ಯವಿಲ್ಲ. ಮಾದಕ ವಸ್ತು ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಲು ಮುಂದಿನ ಅಧಿವೇಶನದಲ್ಲಿ ಹೊಸ ಕಾನೂನು ಜಾರಿಗೊಳಿಸಲು ಸರ್ಕಾರ ಸಿದ್ಧವಿದೆ.

★ ಇದೇ ರೀತಿ ಸೈಬರ್ ಅಪರಾಧಗಳು ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದ್ದು, ಇದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಆಧುನಿಕ ತಂತ್ರಜ್ಞಾನದ ಸಮರ್ಪಕ ಬಳಕೆ ಮಾಡಬೇಕಿದೆ.

★ ಕಾನೂನು ಸುವ್ಯವಸ್ಥೆ ಮತ್ತು ರಾಜ್ಯದ ಅಭಿವೃದ್ಧಿ ಪರಸ್ಪರ ಪೂರಕವಾಗಿವೆ. ಕಾನೂನು ಸುವ್ಯವಸ್ಥೆ ಚೆನ್ನಾಗಿದ್ದರೆ ಮಾತ್ರ ಬಂಡವಾಳ ಹೂಡಿಕೆ ಹೆಚ್ಚಾಗಿ ಅಭಿವೃದ್ಧಿ ಸಾಧಿಸಲು ಸಾಧ್ಯವಿದೆ.

★ ಪ್ರತಿಯೊಬ್ಬರಿಗೂ ರಕ್ಷಣೆ ಒದಗಿಸುವುದು, ನ್ಯಾಯ ಒದಗಿಸುವುದು ಸರ್ಕಾರದ ಬದ್ಧತೆಯಾಗಿದೆ.

ಇವು ಸಿಎಂ ಸಿದ್ದರಾಮಯ್ಯನವರ ಭಾಷಣದ ಮುಖ್ಯಾಂಶಗಳು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಶ್ರೀ ಎಂ.ಎ. ಸಲೀಮ್ ಹಾಗೂ ಸಮಸ್ತ ಪೊಲೀಸ್ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಇಂಥ ಭಾಷಣ ಮಾಡಿದ ಮೇಲೂ ಉನ್ನತ ಹುದ್ದೆಯಲ್ಲಿರೋ ಅಧಿಕಾರಿಯೊಬ್ಬರ ಅನಾಚಾರದ ವಿಡಿಯೋ ಒಂದು ಬಹಿರಂಗವಾಗಿ ನಮ್ಮ ರಾಜ್ಯವಷ್ಟೇ ಅಲ್ಲ, ನೆರೆ ಹೊರೆಯ ರಾಜ್ಯಗಳು ಆಡಿಕೊಂಡು ನಗುವಂತಾಗಿದೆ! (ಈ ಬಗ್ಗೆ ಇದೇ ಸಂಚಿಕೆಯಲ್ಲಿ ಮುಖ್ಯ ವರದಿ ಇದೆ, ಓದಿಕೊಳ್ಳಿ) ಇದೆಂಥ ಕರ್ಮಾ ನೋಡಿ.....ಮುಖ್ಯವಾಗಿ, ಗೃಹ ಸಚಿವರೇ ಸರಿಯಿಲ್ಲ ಅಂತಿದ್ದಾರೆ, ಜನ...

-ಸಂ.



ಜವಾಬ್ದಾರಿಯ ಭಾರವನ್ನು ನೆನಪಿಸುತ್ತಿರುತ್ತದೆ. ಆದರೆ, ಜನವರಿ 19, 2026ರಂದು ಹೊರಬಂದ ನಾಗರೀಕ ಜಾರಿ ನಿರ್ದೇಶನಾಲಯ (DCRE) ಡಿಜಿಪಿ ಡಾ. ರಾಮಚಂದ್ರರಾವ್ ಅವರ ವಿಡಿಯೋ ಹಗರಣವು ಈ ಎಲ್ಲಾ ನಂಬಿಕೆಗಳನ್ನು ಪುಡಿಪುಡಿ ಮಾಡಿದೆ! ರಕ್ಷಕನೇ ಭಕ್ಷಕನಾಗುವುದು ಹಳೆಯ ಮಾತು, ಆದರೆ ರಕ್ಷಕನೇ ತನ್ನ ಘನತೆಯನ್ನು ಮರೆತು ನೈತಿಕ ಪತನದ ಪ್ರಪಾತಕ್ಕೆ ಇಳಿದಾಗ ಇಡೀ ವ್ಯವಸ್ಥೆ ಎಷ್ಟು ದುರ್ಬಲಗೊಳ್ಳುತ್ತದೆ ಎನ್ನುವುದಕ್ಕೆ ಈ ಘಟನೆಯೇ ಸಾಕ್ಷಿ...

**ಸಮವಸ್ತ್ರದ ಘನತೆ ಮತ್ತು ಕಚೇರಿಯ ಪಾವಿತ್ರ್ಯತೆಗೆ ಬಡಿದ ಪೆಟ್ಟು...**

ಈ ಹಗರಣದಲ್ಲಿ ಸಾರ್ವಜನಿಕರನ್ನು ಅತ್ಯಂತ ತೀವ್ರವಾಗಿ ಕೆರಳಿಸಿರುವುದು ಅಧಿಕಾರಿಯು ಖಾಸಗಿ



**ಮಗಳು ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಪ್ರಕರಣದಲ್ಲಿ ಜೈಲು ಸೇರಿ ವರ್ಷವಾಗುತ್ತಿದೆ... ಆಕೆ ಬೇಲ್ ಕೂಡ ಸಿಗದ ಪರಿಸ್ಥಿತಿಯಲ್ಲಿ ಜೈಲ್ ಒಳಗೆ ವಿಲ ವಿಲ ಒದ್ದಾಡ್ತಾ ಇದ್ದರೆ, ಇತ್ತ ಅಪ್ಪನ ರತಿ ವಿಡಿಯೋ ಒಂದು 'ಸಂಕ್ರಾಂತಿ ಸ್ಪೆಷಲ್' ಎನ್ನುವಂತೆ ಬಿಡುಗಡೆಯಾಗಿ ರಾರಾಜಿಸುತ್ತಿದೆ! ಇದು ನಿಜವಲ್ಲ, AI ಸೃಷ್ಟಿ ಅನ್ನೋದು ಒಂದು ವಾದವಾದರೆ, ರಾಮಚಂದ್ರ ರಾಯರು ಪುರಾಣ ಪುಣ್ಯಕತೆಗಳ ಶ್ರೀರಾಮಚಂದ್ರರಲ್ಲ, ಇಂಥವು ಎಷ್ಟೋ... ಸದ್ಯ ಒಂದು ಬಂದಿದೆ ಅಷ್ಟೇ... ಅನ್ನೋರು ತುಂಬಾ ಇದ್ದಾರೆ!! ಯಾರ ಮಾತು ನಿಜ? ಸದ್ಯ, ಸಸ್ಪೆಂಡ್ ಆಗಿರೋ ಡಿಜಿಪಿ ಡಾ. ರಾಮಚಂದ್ರ ರಾವ್, 'ಗೃಹ ಸಚಿವ' ಜಿ. ಪರಮೇಶ್ವರರ ಮನೆಗೆ ಬಂದು ಮೀಡಿಯಾ ಮಂದಿ ಕೆಂಗಣ್ಣಿಗೆ ಬಿದ್ದು, ಇದು 8 ವರ್ಷದ ಹಿಂದೆ ಬೆಳಗಾವಿಯಲ್ಲಿ ನಡೆದಿದ್ದ ಘಟನೆ... ಯಾರೋ ಬೇಕಂತಲೇ ತಿರುಚಿದ್ದಾರೆ... ಎಂದು ತೇಪೆ ಸಾರಿಸಿದ್ದಾರೆ!!!**

# DCRE ಡಿಜಿಪಿ ರಾಮಚಂದ್ರರಾವ್ 'ಸುರತಿ' ವಿಡಿಯೋ ಹಗರಣದ ಸುತ್ತಾ ಬೆಳಗಾವಿ 'ರತಿ' ಹನಿಟ್ರ್ಯಾಪ್ ಹುತ್ತ!!

✍ ಹೆಚ್.ಕೆ. ಮಹದೇವ್

ಪೊಲೀಸ್ ಸಮವಸ್ತ್ರ ಎನ್ನುವುದು ಕೇವಲ ಸರ್ಕಾರ ನೀಡುವ ಬಟ್ಟೆಯಲ್ಲ; ಅದು ರಾಜ್ಯದ ಸಾರ್ವಭೌಮತೆ, ಕಾನೂನಿನ ಶಕ್ತಿ ಮತ್ತು ಸಾರ್ವಜನಿಕ ನಂಬಿಕೆಯ ಅತ್ಯುನ್ನತ ಸಂಕೇತ. ಆ ಸಮವಸ್ತ್ರದ ಮೇಲೆ ಧರಿಸುವ ಪ್ರತಿಯೊಂದು ನಕ್ಷತ್ರವೂ ಒಬ್ಬ ಅಧಿಕಾರಿಗೆ ನೀಡಿದ ಬದುಕಲ್ಲ, ಬದಲಿಗೆ ಆ ಕೃತ್ಯ ನಡೆದ ಸ್ಥಳ ಮತ್ತು ಅವರು ಇದ್ದ ಸ್ಥಿತಿ. ಸಾರ್ವಜನಿಕರ ತೆರಿಗೆ ಹಣದಲ್ಲಿ ನಡೆಯುವ ಸರ್ಕಾರಿ ಕಚೇರಿ, ಅಲ್ಲಿನ ಪೀಠೋಪಕರಣಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ರಾಜ್ಯದ ಅತ್ಯುನ್ನತ ಪೊಲೀಸ್ ಸಮವಸ್ತ್ರವನ್ನು ಧರಿಸಿರುವಾಗಲೇ ಈ ರಾಸಲೀಲೆಗಳು ನಡೆದಿವೆ. ಪೊಲೀಸ್ ಇಲಾಖೆಯು 'ಶಿಸ್ತು, ಘನತೆ ಮತ್ತು ಗೌರವ'ಕ್ಕೆ (Discipline, Dignity, and Respect) ಹೆಸರಾದದ್ದು. ಆ ಶಿಸ್ತಿನ ಆವರಣದೊಳಗೆ, ಕರ್ತವ್ಯದ ಅವಧಿಯಲ್ಲಿ ಇಂತಹ ಅಸಭ್ಯ ವರ್ತನೆ ತೋರಿರುವುದು ಇಡೀ ಪೊಲೀಸ್ ಪಡೆಯ ನೈತಿಕ ಸ್ಥೈರ್ಯವನ್ನು ಕುಗ್ಗಿಸುವಂತಹದ್ದು. ಇದು ಪೊಲೀಸ್ ಇಲಾಖೆಯ ಶಿಸ್ತು, ಘನತೆ, ಗೌರವಕ್ಕೆ ಧಕ್ಕೆ ತರುವ ವಿಷಯ. ಮಹಿಳೆಯರನ್ನು ಬಲವಂತ ಮಾಡಿಲ್ಲದೇ ಇದ್ದರೂ, ಕಚೇರಿಯ ವೇಳೆಯಲ್ಲಿ ಪೊಲೀಸ್ ಡ್ರೆಸ್ ಧರಿಸಿ ರಾಮಚಂದ್ರ ರಾವ್ ರಾಸಲೀಲೆ ನಡೆಸಿರುವುದು ತೀವ್ರ ಟೀಕೆಗೆ ಗುರಿಯಾಗಿದೆ.

**ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಜವಾಬ್ದಾರಿಯ ಅಣಕ!**

ಡಾ. ರಾಮಚಂದ್ರರಾವ್ ಅವರು ನಿರ್ವಹಿಸುತ್ತಿರುವ ಹುದ್ದೆ ಸಾಮಾನ್ಯವಾದುದಲ್ಲ. ಅವರು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (Civil Rights Enforcement Directorate) ಡಿಜಿಪಿ. ಸಮಾಜದ ಶೋಷಿತ ವರ್ಗಗಳ, ದೀನದಲಿತರ ಮತ್ತು ನಾಗರಿಕರ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸಬೇಕಾದ ಅತ್ಯಂತ

☞ 5

## ಆಡಿಯೋ ಬೇರೆ ರಿಲೀಸ್ ಆಗಿದೆ ಕಣ್ರೀ...!!

ಮಹಿಳೆಯ ಜತೆ ಸರಸವಾಡಿರುವ ವಿಡಿಯೊ ಬಿಡುಗಡೆಯಾದ ಬೆನ್ನಲ್ಲೇ ಆಕೆಯ ಜೊತೆ ಮಾತನಾಡಿದ್ದಾರೆ ಎನ್ನಲಾದ ಆಡಿಯೊಗಳು ಕೂಡ ರಿಲೀಸ್ ಆಗಿವೆ! ಇದರಲ್ಲಿ ಅಬ್ಬಬ್ಬಾ... ಅದೇನು ರೋಮ್ಯಾಂಟಿಕ್ ಟಾಕಿಂಗ್ ಅಂತೀರಿ...ರಸಿಕತೆ ಇರಬೇಕು ನಿಜ, ಆದ್ರೆ ಈ ಪರಿ ಇರಬಾರದು...! ತೊಡೆ ಮೇಲೆ ಕೂರಿಸಿಕೊಂಡು ಮಾತಾಡಬೇಕಂತೆ, ಮುದ್ದಾಡ್ತ ಮುದ್ದಾಡ್ತ... ಮಾತಾಡಬೇಕಂತೆ!!

ಡಿಜಿಪಿ ಕಚೇರಿಯಲ್ಲೇ ಪೊಲೀಸ್ ಸಮವಸ್ತ್ರದಲ್ಲಿಯೇ ಮಹಿಳೆಯನ್ನು ಮುದ್ದಾಡಿ, ಚುಂಬಿಸಿರುವ ನಲವತ್ತೇಳು ಸೆಕೆಂಡ್‌ಗಳ ವಿಡಿಯೊ ವೈರಲ್ ಆಗಿ ಪೊಲೀಸ್ ಇಲಾಖೆ ತೀವ್ರ ಮುಜುಗರ ಅನುಭವಿಸುತ್ತಿದೆ. ಮೂರು ಮೂರು ಪ್ರತ್ಯೇಕ ವಿಡಿಯೊಗಳನ್ನು ಕೂಡಿಸಿ 47 ಸೆಕೆಂಡ್‌ಗಳ ವಿಡಿಯೊ ಮಾಡಲಾಗಿದ್ದು,ಮೂರು ವಿಡಿಯೊಗಳು ಸರಕಾರಿ ಕಚೇರಿ ಕೊಠಡಿಯಲ್ಲಿ ಮೊಬೈಲ್ ಬಳಸಿ ಸೆರೆಹಿಡಿದಿರುವ ಅನುಮಾನವಿದ್ದು, ಒಂದು ವಿಡಿಯೊದಲ್ಲಿ ರಾಮಚಂದ್ರ ರಾವ್ ಪೊಲೀಸ್ ಸಮವಸ್ತ್ರ ಧರಿಸಿದ್ದಾರೆ.

ಸದರಿ ವಿಡಿಯೊ ಹಳೆಯದ್ದೆ ಅಂತಾದರೂ ಅದನ್ನು ಯಾವಾಗ ಸೆರೆಹಿಡಿಯಲಾಗಿದೆ ಎಂಬುದರ ಬಗ್ಗೆ ಸ್ಪಷ್ಟತೆಯಿಲ್ಲ! ಈ ವಿಡಿಯೊದ ಸಾಚಾತನ ಖಡಕ್ ತನಿಖೆಯಿಂದಲೇ ತಿಳಿಯಬೇಕಿದೆ. ಈ ಬೆನ್ನಲ್ಲೇ ಘಟನೆ ಸಂಬಂಧ ತನಿಖೆ ನಡೆಸಿ ವರದಿ ಬಂದ ಬಳಿಕ ಡಿಜಿಪಿ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ''ಯಾವ ಹಿರಿಯ ಪೊಲೀಸ್ ಅಧಿಕಾರಿಯು ಕೂಡ ಕಾನೂನಿಗಿಂತ ದೊಡ್ಡವರಲ್ಲ'' ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ.

ಮೊನ್ನೆ ಸೋಮವಾರ ಮಧ್ಯಾಹ್ನದ ಹೊತ್ತು ವಿಡಿಯೊ ವೈರಲ್ ಆಗುತ್ತಿದ್ದಂತೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ತಮ್ಮ ಕಚೇರಿಯುನ್ನು ದಿಢೀರ್ ತೊರೆದ ಡಾ.ರಾಮಚಂದ್ರರಾವ್, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಭೇಟಿಯಾಗಲು ಪ್ರಯತ್ನಿಸಿದ್ದಾರೆ. ಆದರೆ, ಗೃಹ ಸಚಿವರು ಅನಾರೋಗ್ಯದ ಕಾರಣ ಹೇಳಿ ಭೇಟಿಗೆ ಅವಕಾಶ ನೀಡಲಿಲ್ಲ! ಈ ವೇಳೆ ಮಾಧ್ಯಮಗಳ ಕೈಗೆ ಸಿಕ್ಕಿಬಿದ್ದ ರಾಮಚಂದ್ರರಾವ್, 'ವಿಡಿಯೊ ಕಂಡು ಆಘಾತವಾಗಿದೆ, ವೈರಲ್ ಆದ ವಿಡಿಯೊವನ್ನ ಕೃತಕವಾಗಿ ಸೃಷ್ಟಿಸಲಾಗಿದೆ, ಈ ಬಗ್ಗೆ ತನಿಖೆಯಾಗಬೇಕಿದೆ... ಷಡ್ಯಂತ್ರ ರೂಪಿಸಿ ನಕಲಿ ವಿಡಿಯೊ ಹರಿಬಿಡಲಾಗಿದೆ, ಈ ಬಗ್ಗೆ ವಕೀಲರ ಜತೆ ಚರ್ಚೆ ನಡೆಸಿ ಕಾನೂನು ಹೋರಾಟ ನಡೆಸುತ್ತೇನೆ...' ಎಂದು ಒಂದೇ ಸಮನೆ ವದರಿದ್ದಾರೆ. ಅಲ್ಲದೆ, 'ಇದು ಹಳೆಯ ವಿಡಿಯೊ... ಎಂಟು ವರ್ಷಗಳ ಹಿಂದೆ ಬೆಳಗಾವಿಯಲ್ಲಿ ಕೆಲಸ ಮಾಡಿದ್ದೆ...' ಎಂದು ಹಿಂಟ್ ಬಿಟ್ಟುಕೊಟ್ಟು... ಹೆಚ್ಚಿನ ವಿವರ ನೀಡಲು ನಿರಾಕರಿಸಿ ಅಲ್ಲಿಂದ ಕಾಲ್ಕಿತ್ತಿದ್ದಾರೆ!! ಹಿಂದೆಯೇ ಸಸ್ಪೆಂಡ್ ಆದೇಶ ಹೊರಬಿದ್ದಿದೆ!!!



ಮಾಧ್ಯಮಗಳ ಮುಂದೆ ತೊದಲುತ್ತಿರೋ ಸಸ್ಪೆಂಡೆಡ್ ಡಿಜಿಪಿ

ಮುಂದೇನಾಗಲಿದೆ? ಅಂತೀರಾ..... ಸರಕಾರಿ ಕಚೇರಿಯನ್ನು ದುರ್ಬಳಕೆ ಮಾಡಿಕೊಂಡು ಮಹಿಳೆ ಜತೆ ರಾಮಚಂದ್ರರಾವ್ ಖಾಸಗಿ ಕ್ಷಣಗಳನ್ನು ಕಳೆದಿದ್ದಾರೆ ಎಂಬ ಆರೋಪದ ಹಿನ್ನಲೆಯಲ್ಲಿ ರಾಜ್ಯ ಸರಕಾರವು ಡಿಜಿಪಿ ರಾಮಚಂದ್ರ ರಾವ್ ಅಲ್ಲದೆ ಇಡೀ ಘಟನೆ ಸಂಬಂಧ ತನಿಖೆಗೆ ಆದೇಶಿಸಬಹುದು! ಒಂದು ವೇಳೆ ಈ ವಿಡಿಯೊವನ್ನ ಕೃತಕವಾಗಿ ಸೃಷ್ಟಿಸಲಾಗಿದೆ ಎನ್ನುತ್ತಿರೋ ಡಾ. ರಾಮಚಂದ್ರ ರಾವ್, ಈ ಬಗ್ಗೆ ತನಿಖೆ ನಡೆಸಬೇಕೆಂದು ಕೋರಿ ದೂರು ನೀಡಿದರೆ ಪ್ರತ್ಯೇಕ ಪ್ರಕರಣ ದಾಖಲಾಗಿ, ವಿಡಿಯೊ ಸೆರೆಹಿಡಿದಿರುವವರು ಹಾಗೂ ವೈರಲ್ ಮಾಡಿದವರು ಕಾನೂನು ಉರುಳಿಗೆ ಸಿಲುಕಬಹುದು...!!

4 ☞

ಸೂಕ್ಷ್ಮ ವಿಭಾಗದ ಮುಖ್ಯಸ್ಥರಾಗಿ ಇಂತಹ ನಡವಳಿಕೆ ತೋರಿರುವುದು ದೊಡ್ಡ ವ್ಯಂಗ್ಯ. ಯಾವ ಅಧಿಕಾರಿಯು ಅನ್ಯಾಯದ ವಿರುದ್ಧ ದನಿಯಾಗಬೇಕಿತ್ತೋ, ಅವರೇ ಇಂದು ತಮ್ಮ ಹುದ್ದೆಯ ಮರ್ಯಾದೆಯನ್ನು ಹರಾಜು ಹಾಕಿದ್ದಾರೆ. ಇದು ಕೇವಲ ಒಬ್ಬ ವ್ಯಕ್ತಿಯ 'ಸೇವೆಯ ನಿಯಮಗಳ ಉಲ್ಲಂಘನೆ' (Service Rule Violation) ಮಾತ್ರವಲ್ಲ, ಆ ಪವಿತ್ರ ಪೀಠಕ್ಕೆ ಮಾಡಿದ ಅಪಚಾರ. ರಾಜಕೀಯ ಹಗರಣಗಳಿಗಿಂತಲೂ ಇಂತಹ ಆಡಳಿತಾತ್ಮಕ ಹಗರಣಗಳು ಸಾರ್ವಜನಿಕರಲ್ಲಿ ವ್ಯವಸ್ಥೆಯ ಬಗ್ಗೆ ಹೆಚ್ಚು ಅವಿಶ್ವಾಸವನ್ನು ಮೂಡಿಸುತ್ತವೆ.

**ರಹಸ್ಯ ಕ್ಯಾಮರಾ ಮತ್ತು ವ್ಯವಸ್ಥಿತ ದುರ್ನಡತೆಯ ಜಾಲ...**

ಈ ಪ್ರಕರಣವು ಕೇವಲ ಒಂದು ಆಕಸ್ಮಿಕ ತಪ್ಪಲ್ಲ ಎಂಬುದು ಲಭ್ಯವಿರುವ ಸಾಕ್ಷ್ಯಗಳಿಂದ ಸಾಬೀತಾಗುತ್ತಿದೆ. ಸೀಕ್ರೆಟ್ ಕ್ಯಾಮರಾದಲ್ಲಿ ಸೆರೆಯಾಗಿರುವ ದೃಶ್ಯಗಳನ್ನು ಗಮನಿಸಿದರೆ, ಇದು ಒಂದು ಸರಣಿ ಪ್ರಕ್ರಿಯೆಯಂತೆ ಕಾಣುತ್ತಿದೆ. ಪುನರಾವರ್ತಿತ ಕೃತ್ಯ: ವಿಡಿಯೋದಲ್ಲಿ ವಿವಿಧ ಮಹಿಳೆಯರು ಬೇರೆ ಬೇರೆ ಬಟ್ಟೆಗಳನ್ನು ಧರಿಸಿ ಕಚೇರಿಗೆ ಭೇಟಿ ನೀಡಿರುವುದು ಕಂಡುಬಂದಿದೆ. ಇದು ಈ ಅಸಭ್ಯ ವರ್ತನೆಯು ಬೇರೆ ಬೇರೆ ದಿನಗಳಲ್ಲಿ, ನಿರಂತರವಾಗಿ ನಡೆಯುತ್ತಿತ್ತು ಎಂಬುದನ್ನು ಪುಷ್ಟೀಕರಿಸುತ್ತದೆ. ವೃತ್ತಿಪರ ದುರ್ನಡತೆಯ ಪರಾಕಾಷ್ಠೆ: ಇಲ್ಲಿ ಮಹಿಳೆಯರ ಮೇಲೆ ಬಲವಂತ ನಡೆದಿಲ್ಲದಿರಬಹುದು, ಆದರೆ ಕರ್ತವ್ಯದ ಸಮಯದಲ್ಲಿ ಕಚೇರಿಯನ್ನು ಇಂತಹ ಖಾಸಗಿ ಚಟುವಟಿಕೆಗಳಿಗೆ ಬಳಸಿಕೊಂಡಿರುವುದು ಗಂಭೀರವಾದ 'ವೃತ್ತಿಪರ ದುರ್ನಡತೆ' (Professional Misconduct). ಮಹಿಳೆಯರನ್ನು ಅಪ್ಪಿಕೊಂಡು, ಮುತ್ತು ನೀಡುವ ದೃಶ್ಯಗಳು ಒಬ್ಬ ಡಿಜಿಪಿ ದರ್ಜೆಯ ಅಧಿ ಕಾರಿಯ ವಿವೇಚನೆ ಮತ್ತು ಸ್ವರಕ್ಷಣೆ ಎರಡೂ ಹಳಿ ತಪ್ಪಿರುವುದನ್ನು ತೋರಿಸುತ್ತವೆ.




**ಸರ್ಕಾರದ ಕಠಿಣ ನಿಲುವು ಮತ್ತು ಮುಖ್ಯಮಂತ್ರಿಗಳ ಅಸಮಾಧಾನ...**

ಈ ಹಗರಣವು ರಾಜ್ಯ ರಾಜಕಾರಣದಲ್ಲಿ ಬಿರುಗಾಳಿ ಎಬ್ಬಿಸಿದೆ. ಐಪಿಎಸ್ ಅಧಿಕಾರಿಯೊಬ್ಬರ ಈ ಕೃತ್ಯದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಕೋಪಗೊಂಡಿದ್ದು, ತಕ್ಷಣದ ಗಮನ ಹರಿಸಿದ್ದಾರೆ ಎಂದು ವರದಿಯಾಗಿದೆ. ರಾಜ್ಯದ ಆಡಳಿತ ಯಂತ್ರದ ಮೇಲೆ ಹಿಡಿತ ಹೊಂದಿರುವ ಸರ್ಕಾರಕ್ಕೆ, ಇಂತಹ ಉನ್ನತ ಮಟ್ಟದ ಅಧಿಕಾರಿಯ ಅಶಿಸ್ತು ದೊಡ್ಡ ಮುಜುಗರವನ್ನು ತಂದಿಟ್ಟಿದೆ. ಇಡೀ ರಾಜ್ಯದ ಕಣ್ಣು ಈಗ ಸರ್ಕಾರದ ಮುಂದಿನ ನಡೆಯ ಮೇಲಿದೆ. ಶಿಸ್ತಿನ ಇಲಾಖೆಯ ಉನ್ನತ ಹುದ್ದೆಯಲ್ಲಿ ಕುಳಿತು ನೈತಿಕ ಅಧಃಪತನಕ್ಕೆ ಇಳಿದ ಅಧಿಕಾರಿಯ ಮೇಲೆ ಸರ್ಕಾರ ಯಾವ ರೀತಿಯ ಕಠಿಣ ಕ್ರಮ ಕೈಗೊಳ್ಳಲಿದೆ ಎಂಬುದು ಮುಂದಿನ ದಿನಗಳಲ್ಲಿ ಇತರ ಅ ಕಾರಿಗಳಿಗೆ ಪಾಠವಾಗಬೇಕಿದೆ.

ಡಿಜಿಪಿ ರಾಮಚಂದ್ರರಾವ್ ಅವರ ಈ ಪ್ರಕರಣವು ನಮಗೆ ಒಂದು ಕಹಿ ಸತ್ಯವನ್ನು ನೆನಪಿಸುತ್ತಿದೆ: ಅಧಿಕಾರವು ಒಬ್ಬ ವ್ಯಕ್ತಿಗೆ ಜವಾಬ್ದಾರಿಯನ್ನು ನೀಡಬೇಕೇ ಹೊರತು ಅತಿರೇಕದ ವರ್ತನೆಗೆ ಪರವಾನಗಿಯನ್ನಲ್ಲ. ಪೊಲೀಸ್ ಇಲಾಖೆಯಂತಹ ಶಿಸ್ತಿನ ಸಂಸ್ಥೆಯಲ್ಲಿ ನೈತಿಕತೆಯೇ ಅಡಿಪಾಯ. ಆ ಅಡಿಪಾಯವೇ ಕುಸಿದರೆ ಇಡೀ ಗೋಪುರ ಕುಸಿಯಲು ಸಮಯ ಬೇಕಿಲ್ಲ.

ಸಾರ್ವಜನಿಕರ ಹಕ್ಕುಗಳನ್ನು ರಕ್ಷಿಸುವ ಹೊಣೆ ಹೊತ್ತವರು ತಮ್ಮ ಆತ್ಮಸಾಕ್ಷಿಯನ್ನು ಮತ್ತು ವೃತ್ತಿಪರ ನೈತಿಕತೆಯನ್ನು ಮಾರಿಕೊಂಡರೆ, ಜನಸಾಮಾನ್ಯರು ನ್ಯಾಯಕ್ಕಾಗಿ ಯಾರ ಬಾಗಿಲು ತಟ್ಟಬೇಕು? ಅಧಿಕಾರದ ಪರಮೋಚ್ಚ ಸ್ಥಾನದಲ್ಲಿ ಕುಳಿತವರಿಂದ ನಾವು ನಿರೀಕ್ಷಿಸುವ ಕನಿಷ್ಠ ನೈತಿಕ ಮಾನದಂಡಗಳಾದರೂ ಏನು? ಈ ಪ್ರಶ್ನೆಗಳು ಇಂದಿನ ಆಡಳಿತ ವ್ಯವಸ್ಥೆಯನ್ನು ಕಾಡುತ್ತಿವೆ ಮತ್ತು ಇವುಗಳಿಗೆ ಸ್ಪಷ್ಟ ಹಾಗೂ ಕಠಿಣ ಉತ್ತರದ ಅವಶ್ಯಕತೆಯಿದೆ. ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ತಡೆಯುವುದು ಕೇವಲ ಶಿಕ್ಷೆಯಿಂದ ಮಾತ್ರವಲ್ಲ, ಆಡಳಿತಾತ್ಮಕ ಆತ್ಮಾವಲೋಕನದಿಂದ ಮಾತ್ರ ಸಾಧ್ಯ.....

**ಸಸ್ಪೆಂಡ್ ಮಾಡಿದ್ರೆ ಸಾಲದು, ಡಿಸ್ಮಿಸ್ ಮಾಡಬೇಕು....**

ಅದು ಉನ್ನತ ಮಟ್ಟದ ಅಧಿ ಕಾರಿ ಆಗಲಿ, ಕನಿಷ್ಠ ಕಾನ್ಸ್‌ಟೇಬಲ್ ಆಗಲಿ, ಇಂಥ ತಪ್ಪುಗಳು ಆದಾಗ, ತನಿಖೆಯಲ್ಲಿ ಸತ್ಯ ಅಂತ ಕಂಡುಬಂದರೆ... ನಿರ್ದಾಕ್ಷಿಣ್ಯವಾಗಿ ಕೆಲಸದಿಂದ ತೆಗೆದುಮನೆಗೆ ಕಳುಹಿಸಬೇಕು. ಸಸ್ಪೆಂಡ್ ಮಾಡಿದರೆ ಅದನ್ನು ಶಿಕ್ಷೆ ಅನ್ನಲಾಗದು. ಅದು ಕೇವಲ ಕಣ್ಣೊರೆಸುವ ತಂತ್ರವಷ್ಟೇ! ಜನ ಮರುಳೋ ಜಾತ್ರೆ ಮರುಳೋ. ನಾಳೆ ನಾಳಿದ್ದು ಇನ್ನೊಂದು ಘಟನೆ ಬ್ಲಾಸ್ಟ್ ಆದರೆ ಜನ ಇದನ್ನ ಮರೆತು ಅದಕ್ಕೇ ಜೋತು ಬೀಳುತ್ತಾರೆ! ಆಮೇಲೆ... ಇನ್ನೊಂದು!!

ನಿಮಗೆ ಗೊತ್ತಿಲ್ಲ ಅನ್ಸುತ್ತೆ, ಒಂದು ಘಟನೆ ಮಧ್ಯಮಗಳಲ್ಲಿ ವಿಜೃಂಭಿಸುವಾಗ, ಅದನ್ನು ಮರೆ ಮಾಚಲು ಇನ್ನೊಂದು ಘಟನೆಯನ್ನು (ಸುದ್ದಿಯನ್ನು) ಬ್ಲಾಸ್ಟ್ ಮಾಡಿಸುವ ಕಿಲಾಡಿಗಳಿದ್ದಾರೆ.ಅದಕ್ಕಾಗಿ ಕೋಟಿ ಕೋಟಿ ಚಲ್ಲಲಾಗುತ್ತದೆ! ಅದನ್ನೇ 'ಮೀಡಿಯಾ ಮಾಫಿಯಾ' ಅನ್ನೋದು!! ಈ ವಿಚಾರ, ಒತ್ತಟ್ಟಿಗಿರಲಿ, ಡಿಜಿಪಿ ರಾಮಚಂದ್ರ ರಾವ್ ವಿಡಿಯೋ ಸತ್ಯ/ಅಸತ್ಯತೆ ತನಿಖೆಯಿಂದ ಹೊರಬರಲಿ. ಸರ್ಕಾರ ಮತ್ತು ಸರ್ಕಾರಿ ನೌಕರರಿಗೆ ಸಂಬಳ ಕೊಡುತ್ತಿರುವ ತೆರಿಗೆದಾರ ಪ್ರಜೆಗಳಿಗೆ ಸತ್ಯ ತಿಳಿಯಲಿ.

## ಮಗನ ಮದುವೆ ಆಗಿ ವರ್ಷವಾಗಿಲ್ಲ....







ರನ್ಯಾ ರಾವ್

ಡಾ. ರಾಮಚಂದ್ರ ರಾವ್ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಯಷ್ಟೇ ಅಲ್ಲ, ಅತ್ಯಂತ ಪ್ರಭಾವಿ ವ್ಯಕ್ತಿ ಕೂಡ. ಅವರಿಗೆ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರೇ ಆಪ್ತರು. ಸಿ.ಎಂ ಸಿದ್ದರಾಮಯ್ಯ ಕೂಡ ಸ್ನೇಹಿತರೆ. ಇಷ್ಟಿದ್ದರೂ.... ಕಾನೂನಿನ ಮುಂದೆ ಏನೂ ಅಲ್ಲ ಅನ್ನೋದು ಅವರ ಮಗಳು ನಟಿ ರನ್ಯಾ ರಾವ್ ಪ್ರಕರಣದಲ್ಲಿ ಪ್ರೂವ್ ಆಗಿರೋದು ನಿಮ್ಮ ಕಣ್ಮುಂದೆಯೇ ಇದೆ!

ಈಗಲೂ ಅಷ್ಟೇ, ಕಾನೂನು ತನ್ನ ಕೆಲಸವನ್ನ ತಾನು ಮಾಡುತ್ತದೆ. ಅದಿರಲಿ, ಡಾ. ರಾಮಚಂದ್ರ ರಾವ್ ತಮ್ಮ ಮಗನಾದ ರಿಷಬ್‌ಗೆ ನಟಿ ಜಯಮಾಲಾ ಅವರ ಮಗಳು ಸೌಂದರ್ಯಳನ್ನು ತಂದು ಮದುವೆ ಮಾಡಿ ವರ್ಷ ಕೂಡ ಮುಗಿದಿಲ್ಲ... ಮಗ ಸೊಸೆ ಹನಿಮೂನ್ ಹಂತದಲ್ಲಿ ವಿಹರಿಸುತ್ತಿರುವಾಗಲೇ, ಇತ್ತ ಇವರ ಈಸ್ಟ್‌ಮನ್ ಕಲರ್ 'ಕಿರುಚಿತ್ರ' ಬಹಿರಂಗವಾಗಿದೆ!! ಮಗಳು-ಅಳಿಯ, ಮಗ-ಸೊಸೆ ಏನಂದುಕೊಳ್ತಾರೋ ಅನ್ನೋ ಭಯ ಇಲ್ಲದ 'ದೊಡ್ಡ' ಮನುಷ್ಯರು ಇವರು!!!

# ಜ್ಯೋತಿಷಿ ನುಡಿದ ಭವಿಷ್ಯ ಸುಳ್ಳಾಯ್ತು! ಜಗ್ಗೇಶಣ್ಣನ ಮಾತು ನಿಜವಾಯ್ತು!!

✍ ಮಹದೇವ್ ಕೆಂಪಯ್ಯ

'ಬಿಗ್ ಬಾಸ್ ಕನ್ನಡ 12' ಗ್ರ್ಯಾಂಡ್ ಫಿನಾಲೆಗೆ ತೆರೆ ಬಿದ್ದು ವೇದಿಕೆ ಮೇಲೆ ಐತಿಹಾಸಿಕ ಗೆಲುವು ಸಾಧಿಸಿ ಕಪ್ ಎತ್ತಿಕೊಂಡು ರಾಜ್‌ಕುಮಾರ್ ಶೈಲಿಯಲ್ಲಿ ಕೈ ಧನ್ಯವಾದ ಅರ್ಪಿಸಿದ್ದಾರೆ ಗಿಲ್ಲಿ ನಟ... 'ಬಿಗ್ ಬಾಸ್' ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರು ರನ್ನರ್ ಅಪ್ ಸ್ಥಾನವನ್ನ ಅಲಂಕರಿಸಿದ್ದಾರೆ. ಈ ಗೌರವ ರಕ್ಷಿತಾ ಶೆಟ್ಟಿ ಅವರಿಗೆ ಸಲ್ಲಿದೆ. ಈ ಗೆಲುವಿನ ಲೆಕ್ಕಾಚಾರಗಳು ಸಾಕಷ್ಟು ಚರ್ಚೆ ಹುಟ್ಟುಹಾಕಿದ್ದವು. ಗಿಲ್ಲಿಗೆ ಗೆಲುವು ಶತಸಿದ್ದ ಎಂದು ಅಭಿಮಾನಿಗಳು, ವೀಕ್ಷಕರು ನಿಖರವಾಗಿ ಅಚಲತೆಯಿಂದ ಗಿಲ್ಲಿ ಗೆಲುವನ್ನು ಕಣ್ತುಂಬಿಕೊಳ್ಳೋಕೆ ಕಾಯ್ತಾ ಇದ್ದರು. ಆದರೆ ಇಲ್ಲೊಬ್ಬ ಜ್ಯೋತಿಷಿ, ವಿರೋಧ ಕಟ್ಟಿಕೊಂಡು ಗಿಲ್ಲಿ ಗೆಲುವು ಸಾಧ್ಯವೇ ಇಲ್ಲ.... ಎಂದು ಭವಿಷ್ಯ ನುಡಿದ್ದರು! ಅವರ್ಯಾರು ಅನ್ನೋದನ್ನ ಮುಂದೆ ಓದಿಕೊಳ್ಳುವಿರಂತೆ.




ಬಿಗ್ ಬಾಸ್ ಇತಿಹಾಸದಲ್ಲಿಯೇ ಅತ್ಯಂತ ಹೆಚ್ಚಿನ ಕುತೂಹಲ ಹುಟ್ಟಿಸಿ, ಅಸಂಖ್ಯಾತ ಅಭಿಮಾನಿಗಳನ್ನು ಹೊಂದಿ, ಕೋಟ್ಯಂತರ ವೋಟ್‌ಗಳನ್ನ ಪಡೆದು ಗೆದ್ದು ಬೀಗಿದ್ದಾರೆ, ಮಳವಳ್ಳಿ ಹೈದ ನಟರಾಜ್ ಅಲಿಯಾಸ್ ಗಿಲ್ಲಿ ನಟ! ಗ್ರ್ಯಾಂಡ್ ಫಿನಾಲೆ ದಿವಸ ಗಿಲ್ಲಿಯನ್ನ ನೋಡೋಕೆ ಸಾವಿರಾರು ಸಂಖ್ಯೆಯಲ್ಲಿ ಜಾಲಿವುಡ್ ಸ್ಟುಡಿಯೋಸ್ ಮುಂದೆ ಅಭಿಮಾನಿಗಳು ನೆರೆದಿದ್ದರು. ಪೊಲೀಸರು ಅಭಿಮಾನಿಗಳನ್ನ ನಿಯತ್ರಿಸಲು ಲಾಠಿ ಚಾರ್ಜ್ ಸಹ ಮಾಡಬೇಕಾಯಿತು. ಜೊತೆಗೆ ಕಂಟೆಸ್ಟಂಟ್‌ಗಳನ್ನ ಬೆಳಗ್ಗೆ ಮನೆಗೆ ಕಳುಹಿಸಿ ಎಂದು 'ಬಿಗ್ ಬಾಸ್' ಆಯೋಜಕರಿಗೆ ಸೂಚನೆ ಕೂಡ ನೀಡಿದ್ದರು. ಕೊನೆಗೂ ಖಾಲಿ ಕಾರುಗಳು ಬಿಗ್ ಬಾಸ್ ಮನೆಯಿಂದ ಹೊರಡುವುದನ್ನ ನೋಡುತ್ತಾ....ಪ್ರತಿ ಕಾರ್‌ನಲ್ಲೂ ಗಿಲ್ಲಿಯನ್ನ ಹುಡುಕುತ್ತಾ ಅಭಿಮಾನಿಗಳು ಕಾಯುತ್ತಿದ್ದಿದ್ದು ಬಿಗ್ ಬಾಸ್ ಮನೆಯ ಮುಂದೆ ಕಂಡು ಬಂದಿತ್ತು. ಇದೆಲ್ಲದರ ನಡುವೆ ಖ್ಯಾತ ಜ್ಯೋತಿಷಿಯೊಬ್ಬರು ನುಡಿದಿದ್ದ ಭವಿಷ್ಯ ಸುಳ್ಳಾಗಿದೆ!




'ಬಿಗ್ ಬಾಸ್' ಅಲೆಯಲ್ಲಿ ಗಿಲ್ಲಿ ಗೆಲುವು ಖಚಿತ... ಖಚಿತ... ಅಂತ ಕಾಯುತ್ತಿದ್ದ ಅಸಂಖ್ಯಾತ ಅಭಿಮಾನಿಗಳಿಗೆ ನಿರಾಸೆಯ ಭಾವ ಮೂಡಿಸಿದ್ದರು ಬುರುಡೆ ಜ್ಯೋತಿಷಿ ಪ್ರಶಾಂತ್ ಕಿಣಿ! 'ಗಿಲ್ಲಿಗೆ ಗೆಲುವು ಸಾಧ್ಯವಿಲ್ಲ. ಏನಿದ್ದರೂ ಓರ್ವ ಮಹಿಳೆ ಟ್ರೋಫಿ ಎತ್ತಿ ಹಿಡಿಯುತ್ತಾರೆ' ಎಂದು ಜ್ಯೋತಿಷಿ ಪ್ರಶಾಂತ್ ಕಿಣಿ ಟ್ವೀಟ್ ಮಾಡಿದ್ದರು! ಹಾಗೆ ಮುಂದುವರೆದು 'ಟಾಪ್ 3 ಸ್ಥಾನದಲ್ಲಿ ಗಿಲ್ಲಿ ನಟ, ಕಾವ್ಯ ಶೈವ, ರಕ್ಷಿತಾ ಶೆಟ್ಟಿ ಇರುತ್ತಾರೆ' ಎಂದು ಬ್ಯಾಕ್ ಟು ಬ್ಯಾಕ್ ಸೋಷಿಯಲ್ ಮೀಡಿಯಾ ಮೂಲಕ ತಮ್ಮ ಭವಿಷ್ಯ ವಾಣಿಗಳನ್ನ ತೆರೆದಿಟ್ಟದ್ದರು!! ಇದರ ಬಗ್ಗೆ ಭಾರಿ ಟೀಕೆ ಕೇಳಿ ಬಂದಿತ್ತು. ಗಿಲ್ಲಿ ಅಭಿಮಾನಿಗಳು ರೊಚ್ಚಿಗೆದ್ದಿದ್ದರು. ನಾವಾ? ನೀವಾ? ನೋಡಿಯೇ ಬಿಡೋಣ ಎಂಬ

☞14

### ಹುಬ್ಬಳ್ಳಿ : ನವನಗರ ಪೊಲೀಸ್ ಇನ್ಸ್‌ಪೆಕ್ಟರ್ ಜಯಂತ ಗೌಳಿ ಮತ್ತು ತಂಡದ ಯಶಸ್ವಿ ಕಾರ್ಯಾಚರಣೆ

# ಅನೈತಿಕ ಸಂಬಂಧ ಹೊಂದಿದ್ದ ಗುತ್ತಿಗೆದಾರನ 'ಕಥೆ ಮುಗಿಸಿ' ಕಥೆ ಕಟ್ಟಿದ್ದ ಕಿಲಾಡಿ ಹಂತಕರಾದ ಗಂಡ, ಹೆಂಡತಿ, ಮಗ ಸೇರಿ ಮೂವರ ಬಂಧನ!


ಅಕ್ರಮ ಸಂಬಂಧಕ್ಕೆ ಬಲಿಯಾದ ವಿಠ್ಠಲ ರಾಠೋಡ

**ಆತ 62 ವರ್ಷದ ವಿಧುರ ಇಂಜನೀಯರ್ ಹಾಗೂ ಗುತ್ತಿಗೆದಾರನಾಗಿದ್ದನು. ತಾನು ಕೆಲಸ ಮಾಡುತ್ತಿದ್ದ ಕಟ್ಟಡ ನಿರ್ಮಾಣ ಕಂಪನಿ ನಿರ್ಮಿಸುತ್ತಿದ್ದ ಕಟ್ಟಡ ಕಾಮಗಾರಿಗಳನ್ನು ಹೊರ ರಾಜ್ಯದ ಕಾರ್ಮಿಕರನ್ನು ಬಳಸಿಕೊಂಡು ಕೆಲಸ ಮಾಡಿಸುತ್ತಿದ್ದನು. ಒಬ್ಬಂಟಿ ವಿಧುರನಾಗಿದ್ದ ಇಂಜನೀಯರ್‌ಗೆ ಹೆಂಗಸೊಬ್ಬಳ ಸಹವಾಸ ಬೇಕಾಗಿತ್ತು. ಇದಕ್ಕಾಗಿ ಛತ್ತೀಸಗಡದ 42 ವರ್ಷದ ಸುಂದರಿ ಕಾರ್ಮಿಕಳಿಗೆ ಆಕರ್ಷಿತನಾಗಿ ಕಳೆದ ನಾಲ್ಕೈದು ವರ್ಷದಿಂದ ಆಕೆಯೊಡನೆ ಅನೈತಿಕ ಸಂಬಂಧ ಹೊಂದಿದ್ದನು. ಇತ್ತೀಚೆಗೆ ಇಂಜನೀಯರ್ ಮತ್ತು ಸುಂದರಿಯ ಸಂಬಂಧ ಆಕೆಯ ಗಂಡ ಮತ್ತು ಮಗನಿಗೆ ಗೊತ್ತಾಗಿ ಉರಿದುಬಿದ್ದರು. ಆದರೂ ಕೂಡಾ ಇಂಜನೀಯರ್ ಸುಂದರಿಯ ಸಂಗ ಬಿಟ್ಟಿರಲಿಲ್ಲ. ಇತ್ತೀಚೆಗೆ ಅದೊಂದು ದಿನ ರಾತ್ರಿ ಸುಂದರಿಯೊಡನೆ ಸಲುಗೆಯಿಂದ ಇದ್ದಾಗಲೇ ಗಂಡ ಮತ್ತು ಮಗ ಪ್ರತ್ಯಕ್ಷರಾಗಿ ಇಂಜನೀಯರ್ ಜತೆಗೆ ಜಗಳ ಕಾಯ್ದಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ತಿರುಗಿ ತಂದೆ-ಮಗ ಕಬ್ಬಿಣದ ಸನಿಕೆಯಿಂದ ತಲೆಗೆ ಬಲವಾಗಿ ಥಳಿಸಿದ್ದಾರೆ. ವಿಪರೀತ ರಕ್ತಸ್ರಾವಗೊಂಡು ಗಂಭೀರವಾಗಿ ಗಾಯಗೊಂಡಿದ್ದ ಇಂಜನೀಯರ್ ಉಪಚಾರ ಫಲಿಸದೇ ಆಸ್ಪತ್ರೆಯಲ್ಲಿ ಮೃತಪಟ್ಟನು. ಪ್ರಕರಣ ದಿಕ್ಕು ತಪ್ಪಿಸಲು ಗಂಡ, ಹೆಂಡತಿ, ಮಗ ಸೇರಿಕೊಂಡು ಕುಡಿದು ನಶೆಯಲ್ಲಿ ಕಟ್ಟಡದ ಮೇಲಿಂದ ಕಾಲು ಜಾರಿ ಬಿದ್ದಿರುವ ಕಥೆ ಕಟ್ಟಿದ್ದರು. ಚಾಣಾಕ್ಷ ಮತ್ತು ಧಾಡಸಿ ಪೊಲೀಸ್ ಇನ್ಸ್‌ಪೆಕ್ಟರ್ ಜಯಂತ ಗೌಳಿ ಮತ್ತವರ ತಂಡ ಇಂಜನೀಯರ್ ಕೊಲೆ ಪ್ರಕರಣ ಭೇದಿಸಿ ಗಂಡ, ಹೆಂಡತಿ, ಮಗ ಸೇರಿದಂತೆ ಮೂವರನ್ನು ಬಂಧಿಸಿ ಜೈಲಿಗಟ್ಟಿರುವ ರೋಚಕ ಘಟನೆ ಹುಬ್ಬಳ್ಳಿಯ ಎಪಿಎಂಸಿಯ ನವನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜರುಗಿದೆ.**


ಆರೋಪಿ ವಿಮಲಾ ಸತನಾಮಿ


ಕಮೀಷನರ್ ಎನ್. ಶಶಿಕುಮಾರ್


ಡಿಸಿಪಿ (ಕಾ.ಸು) ಮಹಾನಿಂಗ ನಂದಗಾಂವಿ


ಎಸಿಪಿ ಶಿವಪ್ರಕಾಶ್ ನಾಯಕ್


ಪೊಲೀಸ್ ಇನ್ಸ್‌ಪೆಕ್ಟರ್ ಜಯಂತ ಗೌಳಿ

ಹುಬ್ಬಳ್ಳಿ
✍ ಮನ್ನಾಪೂರ

ಅನೈತಿಕ ಸಂಬಂಧ ಅದೆಂತಹ ಅನಾಹುತವನ್ನು ಸೃಷ್ಟಿಸಬಲ್ಲದು ಎಂಬುದನ್ನು ಅದ್ಯಾರು ಊಹಿಸಲಾರರು. ಅನೈತಿಕ ಸಂಬಂಧದ ಸುಳಿಯಲ್ಲಿ ಸಿಲುಕಿದವರು ಯಾರೇ ಆಗಿರಲಿ ಅಷ್ಟು ಸಲಿಸಾಗಿ ಹೊರ ಬಂದವರು ಅತೀ ವಿರಳ. 'ಹೆಣ್ಣು-ಗಂಡು' ತಮ್ಮ ತೀರಲಾರದ ತೀಟೆಗೆ ಇಲ್ಲಿ ಒಂದಾಗುತ್ತಾರೆ. ಕೊನೆಗೆ ಇಲ್ಲಿ ಒಬ್ಬರನ್ನೊಬ್ಬರು ಬಿಟ್ಟಿರಲಾರದೇ ಹಾಳಾಗಿ ಹೋಗುತ್ತಾರೆ. ಇವರನ್ನೇ ನಂಬಿದ ಕುಟುಂಬಗಳಿಂದು ಅಕ್ಷರಶಃ ಇದ್ದ-ಬಿದ್ದ ಮರ್ಯಾದೆಯನ್ನೆಲ್ಲ ಕಳೆದುಕೊಂಡು ಬಿಡುತ್ತಾರೆ. ಇಂತಹುದೇ ಪ್ರಕರಣವೊಂದು ವಾಣಿಜ್ಯ ನಗರಿ ಹುಬ್ಬಳ್ಳಿಯ ನವನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಜರುಗಿದೆ.

ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಅರಕೇರಿ ತಾಂಡಾದ ನಿವಾಸಿ ವಿಠ್ಠಲ ರಾಠೋಡ (62 ವ) ಎಂಬ ಇಂಜನೀಯರ್/ಗುತ್ತಿಗೆದಾರನೊಬ್ಬನು ಛತ್ತೀಸಗಡ ಮೂಲದ ವಿಮಲಾ ಸತನಾಮಿ (42 ವ) ಎಂಬ ವಿವಾಹಿತೆ ಸುಂದರಿಯೊಡನೆ ಅನೈತಿಕ ಸಂಬಂಧ ಇಟ್ಟುಕೊಂಡು ಕೊನೆಗೆ ಆಕೆಯ ಗಂಡ ಮೇಘವ, ಮಗ ಭಗವಾನದಾಸನ ಆಕ್ರೋಶದ ಕಿಚ್ಚಿಗೆ ಭೀಕರವಾಗಿ ಕೊಲೆಯಾಗಿ ಹೋಗಿದ್ದಾನೆ. ಈತನೊಡನೆ ಅಕ್ರಮ ಸಂಬಂಧ ಇರಿಸಿಕೊಂಡ ಹರಾಮಿ ಹೆಂಗಸು ವಿಮಲಾ ಗಂಡ-ಮಗನೊಡನೆ ಸೇರಿಕೊಂಡು ಜೈಲು ಸೇರಿದ್ದಾಳೆ. ಇಡೀ ಕುಟುಂಬವೇ ಇಂದು ಜೈಲಿನಲ್ಲಿ ಮುರಿಯುತ್ತಿವೆ. ಹೇಗಿದೆ ನೋಡಿ ಅನೈತಿಕ ಸಂಬಂಧದ ಅನಾಹುತ...

**ನತದೃಷ್ಟ ವಿಠ್ಠಲ ರಾಠೋಡ...**

ಬದುಕಬೇಕೆಂಬ ಅದಮ್ಯ ಛಲದ ಮನುಷ್ಯ ವಿಠ್ಠಲ ರಾಠೋಡ. ತುಂಬಾ ಶೋಕಿಲಾಲನು ಹೌದು. ಈತನಿಗೆ ವಯಸ್ಸು ಅದಾಗಲೇ 62 ಆಗಿದ್ದರೂ ಇನ್ನೂ ಯಂಗ್ ಆಗಿ ಕಾಣಿಸುತ್ತಲಿದ್ದನು. ಕಳೆದ ಹತ್ತು-ಹನ್ನೆರಡು ವರ್ಷಗಳ ಹಿಂದೆ ಹೆಂಡತಿಯನ್ನು ಕಳೆದುಕೊಂಡು ವಿಧುರನಾಗಿದ್ದನು. ಸದಾಕಾಲ ಗುಂಡು... ತುಂಡು... ತೊಡೆಗಳ ಶೋಕಿಯಲ್ಲಿ ದಿವಿನನಾಗಿದ್ದನು. ಇದ್ದೊಬ್ಬ ಮಗ ಸುನೀಲನಿಗೂ ಕೂಡಾ ತನ್ನದೇ ಉದ್ಯೋಗವನ್ನು ಕಲಿಸಿದ್ದನು. ಇಂತಹ ವಿಠ್ಠಲ ರಾಠೋಡ ಬದುಕಿನಲ್ಲಿ ತುಂಬಾ ನತದೃಷ್ಟನೇ ಎಂದು ಹೇಳಬೇಕು. ತೊಡೆ ಸಂದಿಯ ಕಾಮಕ್ಕಾಗಿ ಛತ್ತೀಸಗಡ ಮೂಲದ ಸುಂದರಿ. ತನಗಿಂತ 20 ವರ್ಷ ಚಿಕ್ಕವಳ ಸಂಗ ಮಾಡಿ ಆಕೆಯ ಗಂಡ ಮತ್ತು ಮಗನಿಂದಲೇ ಭೀಕರ ಕೊಲೆಯಾಗಿ ಹಾದಿಯ ಹೆಣವಾಗಿದ್ದಾನೆ.

**ಬೆಂಗಳೂರಿನ ಕಂಪನಿಯಲ್ಲಿದ್ದನು...**

ವಿಠ್ಠಲ ರಾಠೋಡ ತುಂಬಾ ಕಠಿಣ ಪರಿಶ್ರಮ ಜೀವಿಯಾಗಿದ್ದನು. ಬೆಂಗಳೂರಿನ ಕಟ್ಟಡದ ನಿರ್ಮಾಣ ಕಂಪನಿಯೊಂದರಲ್ಲಿ ಇಂಜನೀಯರ್ ಮತ್ತು ಗುತ್ತಿಗೆದಾರನಾಗಿದ್ದನು. ಅದಕ್ಕಿಂತ ಮೊದಲು ಬಿಜಾಪುರ, ಗುಲಬರ್ಗಾಗಳಲ್ಲಿ ಸುಮಾರು ವರ್ಷಗಳ ಕಾಲ ಕಟ್ಟಡ ನಿರ್ಮಾಣ ಕಾರ್ಯಗಳ ಉಸ್ತುವಾರಿ ಮತ್ತು ನಿರ್ಮಾಣದ ಗುತ್ತಿಗೆ ಕೆಲಸವನ್ನು ಮಾಡಿದ ಅನುಭವವಿತ್ತು.

ಬೆಂಗಳೂರಿನ ಕಟ್ಟಡ ನಿರ್ಮಾಣ ಕಂಪನಿಯು ಕರ್ನಾಟಕ ರಾಜ್ಯದ ವಿವಿಧ ನಗರಗಳಲ್ಲಿ ಶಾಲಾ-ಕಾಲೇಜು ಸೇರಿದಂತೆ ಇನ್ನಿತರ ದೊಡ್ಡ ಕಾಮಗಾರಿಗಳನ್ನು ಗುತ್ತಿಗೆಗೆ ಪಡೆದು ತನ್ಮೂಲಕ ಅಲ್ಲಿ ಇಂಜನೀಯರ್ ಮತ್ತು ಉಸ್ತುವಾರಿಯ ಗುತ್ತಿಗೆದಾರನಾಗಿ ವಿಠ್ಠಲ ರಾಠೋಡನನ್ನು ನಿಯಮಿಸುತ್ತಿತ್ತು. ವಿಠ್ಠಲ ತಾನು ದುಡಿಯುವುದಲ್ಲದೇ ತನ್ಮೂರಿನ ಸಂಬಂಧಿಗಳು, ಯುವಕರನ್ನು ಕರೆ ತಂದು ಅವರಿಗೂ ಕೆಲಸ ಕೊಡಿಸುತ್ತಿದ್ದನು. ಇದರೊಂದಿಗೆ ತನ್ನ ಮಗ ಸುನೀಲನಿಗೂ ಕೂಡಾ ಗುತ್ತಿಗೆ ನೀಡುತ್ತ ಆತನನ್ನು ಬೆಳೆಸುತ್ತಲಿದ್ದನು. ಆದರೆ ವಿಠ್ಠಲ ಹೆಂಡತಿಯನ್ನು ಕಳೆದುಕೊಂಡು ಏಕಾಂಗಿಯಾಗಿ ನಿದ್ರೆ ಇಲ್ಲದ ರಾತ್ರಿಗಳನ್ನು ಕಳೆಯುತ್ತಿದ್ದನು. ಈ ಸಂದರ್ಭದಲ್ಲಿ ವಿಠ್ಠಲನಿಗೆ ಸಂಗಾತಿಯ ಅವಶ್ಯಕತೆ ಬಹಳಷ್ಟಿತ್ತು.

**ಆಕೆ ಛತ್ತೀಸಗಡದ ಸುಂದರಿ...**

ಆಕೆ ಆಗಿನ್ನು 38ರ ಹರೆಯದ ಸುಂದರಿ. ಮೈ-ಕೈ ತುಂಬಿಕೊಂಡು ಪೊಗದಸ್ತಾಗಿದ್ದಳು. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕು ಎನ್ನುವ ಕೆಂಪು ವರ್ಣದ ಬಳಕುವ ಮೈಮಾಟದ ಸುಂದರಿ ವಿಮಲಾ ಸತನಾಮಿ. ಈಕೆ ಮೂಲತಃ ಛತ್ತೀಸಗಡದವಳು. ಕಟ್ಟಡ ಕಾರ್ಮಿಕಳಾಗಿ ಗಂಡ ಮೇಘವ, ಮಗ ಭಗವಾನದಾಸನೊಡನೆ ಬೆಂಗಳೂರಿಗೆ ಬಂದಿದ್ದಳು. ಇವಳಂತೆ ಛತ್ತೀಸಗಡ, ಬಿಹಾರ ಕಡೆಯ ಕಾರ್ಮಿಕರು ಬಂದಿದ್ದರು. ಈಗ ನಾಲ್ಕೈದು ವರ್ಷಗಳ ಹಿಂದಿನ ಮಾತು. ಇಂಜನೀಯರ್/ಗುತ್ತಿಗೆದಾರನಾಗಿದ್ದ ವಿಠ್ಠಲ ರಾಠೋಡನು ಉಸ್ತುವಾರಿ ಮಾಡುತ್ತಿದ್ದ ಕಟ್ಟಡ ಕಾಮಗಾರಿ ಕೆಲಸಕ್ಕೆ ಕಾರ್ಮಿಕಳಾಗಿ ತನ್ನ ಕುಟುಂಬದೊಂದಿಗೆ ಕಾಲಿಟ್ಟಳು. ಅಂದಿನಿಂದ ವಿಠ್ಠಲ ಕೊಲೆಯಾಗುವತನಕ ಸುಂದರಿ ವಿಠ್ಠಲನ ಹತ್ತಿರವೇ ಇದ್ದಳು. ವಿಠ್ಠಲ ರಾಠೋಡ ಯಾವಲ್ಲಿಗೆ ಹೋದರೂ ಕೂಡಾ ಸುಂದರಿ ವಿಮಲಾಳ ಕುಟುಂಬ ಅಲ್ಲಿರುತ್ತಿತ್ತು.

**ಸುಂದರಿ ವಿಮಲಾಳ ಸಂಗದಲ್ಲಿ...**

ಇಲ್ಲಿ ಗುತ್ತಿಗೆದಾರ ವಿಠ್ಠಲ ರಾಠೋಡನ ಕಟ್ಟಡ ಕಾಮಗಾರಿಗಳಲ್ಲಿ ಕಾರ್ಮಿಕಳಾಗಿ ಕುಟುಂಬದೊಡನೆ ಸೇರಿದ್ದ ವಿಮಲಾಳ ಸೌಂದರ್ಯ ಕಂಡು ಅಕ್ಷರಶಃ ಹುಚ್ಚನಂತಾದನು. ಹೇಗೋ ತನಗೂ ಹೆಂಡತಿಯಿಲ್ಲ. ಇಂತಹುದರಲ್ಲಿ ವಿಮಲಾಳಿಗೆ ಕಾಳು ಹಾಕಬೇಕೆನಿಸಿತು. ಅದಕ್ಕಾಗಿ ವಿಠ್ಠಲ ವಿಮಲಾಳಿಗೆ ಹೆಚ್ಚೆಚ್ಚು ಎನ್ನುವಂತೆ ಎಲ್ಲವನ್ನೂ ನೀಡಹೊಗಿದನು. ಬಟ್ಟೆ... ಬರೆ... ಮೊಬೈಲ್... ಹಣ ಹೀಗೆ ಬೇಡ... ಬೇಡವೆಂದರೂ ಕೂಡಾ ನೀಡುತ್ತಲೇ ಆಕೆಯನ್ನು ಸದ್ದಿಲ್ಲದೇ ಬುಟ್ಟಿಗೆ ಹಾಕಿಕೊಳ್ಳುವಲ್ಲಿ ಯಶಸ್ವಿಯಾದನು. ಅದೊಂದು ದಿನ ಯಾರಿಲ್ಲದಾಗ ಅವಳ ಶೆಡ್‌ಗೆ ಎಂಟ್ರಿ ಕೊಟ್ಟ ವಿಠ್ಠಲ ನೇರವಾಗಿ ವಿಮಲಾಳಿಗೆ ತನ್ನ ಮನದಿಂಗಿತವನ್ನು ತಿಳಿಸಿ ಅವಳ ಕೈ ಹಿಡಿದು ಎಳೆದನು. ವಿಮಲಾಳಿಗೂ ಇದೇ ತಾನೇ ಬೇಕಾಗಿತ್ತು. 'ಅನ್ನ ಹಳಸಿತ್ತು ನಾಯಿ ಹಸಿದಿತ್ತು' ಎನ್ನುವ ತರಹ. ಹಣವಂತ ವಿಠ್ಠಲನ ಸಂಗ ಮಾಡಿದರೆ ನನ್ನ

☞ 5


ಹೆಂಡತಿಯ ಪ್ರಿಯಕರನನ್ನು ಕೊಲೆಗೈದ ಮೇಘವ ಸತನಾಮಿ, ಭಗವಾನದಾಸ ಸತನಾಮಿ

4 ☜

ಬಡತನ ತಪ್ಪುತ್ತದೆ ಎಂದು ಅರಿತಿದ್ದ ಆಕೆ ಕೂಡಾ ವಿಠ್ಠಲನಿಗೆ ಬಿಗಿದಪ್ಪಿ 'ನಿಮ್ಮನ ನಂಬಿ ನಿಮ ಜತೆ ಇರತೀನಿ ನನ್ನ ಕೈ ಬಿಡಬೇಡಿ' ಎಂದಳು. ಹೀಗೆ ಆರಂಭವಾದ ಈ ಜೋಡಿಯ ಪ್ರಣಯ ಹರೆಯದವರನ್ನು ನಾಚುವಂತೆ ಮಾಡಿತ್ತು. ತನ್ನ ಗಂಡನಿಗಿಂದ ಹೆಚ್ಚಾಗಿ ವಿಠ್ಠಲನ ಕಾಳಜಿ ಮಾಡುತ್ತ ಹಾಸಿಗೆಯಲ್ಲಿ ಚಿತ್ತಲೆಯಾಗಿ ಆತನನ್ನು ಉದ್ರೇಕಿಸುತ್ತ ಸುಖ ನೀಡತೊಡಗಿದಳು. ಅಂದಿನಿಂದ ವಿಠ್ಠಲನಿಗೆ ವಿಮಲಾ ಬೇರೆ ಪ್ರಪಂಚವಾದಳು. ಆತನಿಗೆ ಊಟ... ಉಪಚಾರ ಮಾಡುವುದಕ್ಕೆ ಹಾತೊರೆಯುತ್ತಿದ್ದಳು.

**ಅನೈತಿಕ ಸಂಬಂಧ ಗೊತ್ತಾಗಿ ಜಗಳ...**

ಇತ್ತೀಚಿಗೆ ಇಂಜನೀಯರ್ ವಿಠ್ಠಲ ರಾಠೋಡ ಮತ್ತು ವಿಮಲಾಳ ಅನೈತಿಕ ಸಂಬಂಧ ಎಲ್ಲರಿಗೂ ಗೊತ್ತಾಗಿತ್ತು. 'ತುರಿಕೆ ಮತ್ತು ಹಾದರ' ಯಾವತ್ತಿದ್ದರೂ ಮುಚ್ಚುವುದಿಲ್ಲ ಎನ್ನುವಂತೆ, ವಿಮಲಾಳ ಗಂಡ ಮೇಘವ, ಮಗ ಭಗವಾನದಾಸನಿಗೆ ಗೊತ್ತಾಗಿ ಎರಡು-ಮೂರು ಸಲ ವಿಠ್ಠಲ ರಾಠೋಡನ ಜತೆಗೆ ಜಗಳ ತೆಗೆದಿದ್ದರು. ಆದರೂ ವಿಮಲಾಳ ಸಂಗಕ್ಕಾಗಿ ವಿಠ್ಠಲ ಎಲ್ಲವನ್ನು ಸಹಿಸಿಕೊಂಡಿದ್ದನು. ಅತ್ತ ವಿಠ್ಠಲನ ಮಗ ಸುನೀಲನಿಗೂ ತನ್ನ ತಂದೆ ಮತ್ತು ಕಾರ್ಮಿಕಳಾಗಿದ್ದ ವಿಮಲಾಳ ಅನೈತಿಕ ಸಂಬಂಧದ ಬಗ್ಗೆ ತಿಳಿದೂ ಆತನೂ ವಿಮಲಾಳ ಕುಟುಂಬವನ್ನು ತನ್ನ ಜನರೊಡನೆ ಸೇರಿ ಥಳಿಸಿ ತನ್ನ ತಂದೆಯ ಹತ್ತಿರ ಕೆಲಸ ಬಿಡಿಸಿ ಕಳಿಸಿದ್ದನು. ತಂದೆಗೂ ಕೂಡಾ ಬುದ್ದಿವಾದ ಹೇಳಿ ಅಂತಹ ಹೆಂಗಸರ ಸಹವಾಸ ಸಾಕು ಎಂದಿದ್ದನು. ಬೇರೆ ಕಡೆಗೆ ಹೋಗಿದ್ದರೂ ವಿಮಲಾ ವಿಠ್ಠಲನಿಗೆ ಮೊಬೈಲ್ ಕರೆ ಮಾಡಿ ಮಾತನಾಡುವುದು ಮತ್ತು ಹಣಕ್ಕಾಗಿ ಕಿರಿ ಕಿರಿ ಮಾಡುವುದು ಮುಂದುವರೆಸಿದ್ದಳು.



ವಿಠ್ಠಲ ರಾಠೋಡನ ಮಗ ಸುನೀಲ

**ಕಾನೂನು ವಿ.ವಿ. ಕಟ್ಟಡ ನಿರ್ಮಿಸುತ್ತಿದ್ದನು...**

ಇತ್ತೀಚಿಗೆ ಇಂಜನೀಯರ್ ವಿಠ್ಠಲ ರಾಠೋಡ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದನು. ಹುಬ್ಬಳ್ಳಿಯ ಎಪಿಎಂಸಿಯ ನವನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಕಾನೂನು ವಿಶ್ವವಿದ್ಯಾಲಯದ ಅತ್ಯಾಧುನಿಕ ಕಟ್ಟಡವೊಂದನ್ನು ನಿರ್ಮಿಸಲಾಗುತ್ತಿತ್ತು. ಅದರ ಉಸ್ತುವಾರಿಯನ್ನು ಇಂಜನೀಯರ್ ವಿಠ್ಠಲ ರಾಠೋಡನಿಗೆ ವಹಿಸಲಾಗಿತ್ತು. ಸುಮಾರು ದಿನಗಳಿಂದ ನಡೆಯುತ್ತಿದ್ದ ಈ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಕೂಡಾ ತನ್ನ ಪ್ರೇಯಸಿ ಛತ್ತೀಸಗಡ ಮೂಲದ ವಿಮಲಾಳ ಕುಟುಂಬವನ್ನು ತೊಡಗಿಸಲಾಗಿತ್ತು. ವಿಠ್ಠಲ ರಾಠೋಡ ಎಲ್ಲೇ ಕೆಲಸ ಹಿಡಿದರೂ ಅಲ್ಲಿಗೆ ವಿಮಲಾಳ ಕುಟುಂಬ ಸ್ಥಳಾಂತರಗೊಳ್ಳುತ್ತಿತ್ತು. ಇತ್ತ ಬೆಳಗಾವಿ ನಗರದಲ್ಲೂ ಒಂದು ಕಟ್ಟಡ ನಿರ್ಮಿಸಲಾಗುತ್ತಿತ್ತು. ಅದರ ಉಸ್ತುವಾರಿಯನ್ನು ವಿಠ್ಠಲ ರಾಠೋಡ ತನ್ನ ಮಗ ಸುನೀಲನಿಗೆ ವಹಿಸಿದ್ದನು. ಇದರ ಜತೆಗೆ ಹುಬ್ಬಳ್ಳಿಯ ಕಾನೂನು ವಿಶ್ವವಿದ್ಯಾಲಯದ ಕಟ್ಟಡದ ಉಸ್ತುವಾರಿ ಕೂಡಾ ನೋಡಿಕೊಳ್ಳುತ್ತಿದ್ದನು. ಎರಡು ಕಡೆಗೆ ತನ್ನೂರಿನ ಸಂಬಂಧಿಕರನ್ನು ಕೆಲಸಕ್ಕೆ ವಿಠ್ಠಲ ತಂದಿರಿಸಿಕೊಂಡಿದ್ದನು. ಆದರೂ ಕೂಡಾ ವಿಠ್ಠಲ ತನ್ನ ಪ್ರೇಯಸಿಯನ್ನು ಬಿಟ್ಟಿರದೇ ಆಗಾಗ ಹುಬ್ಬಳ್ಳಿಗೆ ಬಂದು ಹೋಗುತ್ತಲಿದ್ದನು. ಈತನ ಮಗ ಸುನೀಲ ತಂದೆಯ ಪ್ರೇಯಸಿಗೆ ನೀನು ಇಲ್ಲಿಗ್ಯಾಕೆ ಬಂದಿರುವಿ ಎಂದು ಜಗಳ ಕಾಯ್ದಿದ್ದನು.

**ಪ್ರೇಯಸಿ ವಿಮಲಾಳ ಜತೆಗೆ ಇದ್ದಾಗಲೇ...**

ಅಂದು ಜನವರಿ 10ನೇ ತಾರೀಖು ಶನಿವಾರವಿತ್ತು. ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಕಾನೂನು ವಿ.ವಿ.ಯ ಆಡಳಿತ ಮಂಡಳಿಯ ಪಕ್ಕದಲ್ಲೇ ನಿರ್ಮಿಸಿದ್ದ ತಾತ್ಕಾಲಿಕ ಶೆಡ್‌ನಲ್ಲಿ ವಿಠ್ಠಲ ರಾಠೋಡನ ಪ್ರೇಯಸಿ ವಿಮಲಾ ಮತ್ತವಳ ಕುಟುಂಬ ವಾಸವಿತ್ತು. ವಿಮಲಾಳನ್ನು ಬಿಟ್ಟಿರದ ವಿಠ್ಠಲ ಆಗಾಗ ಬೆಂಗಳೂರಿನಿಂದ ಹುಬ್ಬಳ್ಳಿಗೆ ಬಂದು ಹೋಗುತ್ತಲಿದ್ದನು. ಶನಿವಾರ ರಾತ್ರಿ 9 ಗಂಟೆಯ ಸಮಯ ಮನೆಯಲ್ಲಿ ವಿಮಲಾ ಒಬ್ಬಳೇ ಇರುವುದಾಗಿ ತಿಳಿಸಿ ತಕ್ಷಣ ವಿಠ್ಠಲನಿಗೆ ಬರಲು ತಿಳಿಸಿದ್ದಳು. ಆಗಲೇ ವಿಠ್ಠಲ ಆತುರದಿಂದ ವಿಮಲಾಳ ಶೆಡ್‌ಗೆ ಹೋದನು. ಏಕಾಂತದಲ್ಲಿ ಪರಸ್ಪರರು ಒಬ್ಬರಿಗೊಬ್ಬರು ಮೈಗೆ... ಮೈ ತಗುಲಿಸಿಕೊಂಡು ಕಿಸ್ಸಿಂಗ್... ಟಚ್ಚಿಂಗ್ ನಡೆಸಿದ್ದರು. ಇಂತಹ ರಸಮಯ ಸನ್ನಿವೇಶದಲ್ಲಿಯೇ ಧುತ್ತನೇ ವಿಮಲಾಳ ಗಂಡ, ಮಗ ಬಂದು ನಿಂತುಬಿಟ್ಟರು. ಇಂಜನೀಯರ್ ವಿಠ್ಠಲ ರಾಠೋಡ ಮತ್ತು ವಿಮಲಾಳನ್ನು ಕಂಡು ಗಂಡ ಮತ್ತು ಮಗ ಉರಿದೆದ್ದು ಬಾಯಿಗೆ ಬಂದಂತೆ ಬಯ್ಯತೊಡಗಿದರು. ಪ್ರತಿಯಾಗಿ ವಿಠ್ಠಲ ಕೂಡಾ ಜೋರಾಗಿ ಬಾಯಿ ಮಾಡತೊಡಗಿದನು. ವಿಮಲಾ ಜಗಳ ಬಿಡಿಸಲು ಬಂದಾಗ ಆಕೆಯ ಮಗ ಅವಳನ್ನು ದೂರ ತಳ್ಳಿದ್ದನು.

**ಸನಿಕೆಯಿಂದ ಹೊಡೆದು ಗಾಯಗೊಳಿಸಿದನು...**

'ನಮ್ಮ ತಾಯಿಯ ಜತೆಗೆ ಸಲುಗೆಯಿಂದ ಇರುತ್ತಿ...? ಇದನ್ನು ಬಿಟ್ಟು ಬಿಡು ಎಂದು ಎಷ್ಟು ಸಲ ನಿನಗೆ ಹೇಳಬೇಕು' ಎಂದು ವಿಮಲಾಳ ಮಗ ಭಗವಾನದಾಸ ವಿಠ್ಠಲನಿಗೆ ಅಶ್ಲೀಲವಾಗಿ ಬೈದು ಅಲ್ಲೇ ಮೂಲೆಯಲ್ಲಿದ್ದ ಕಟ್ಟಡ ನಿರ್ಮಾಣಕ್ಕೆ ಬಳಸುವ ಸನಿಕೆಯಿಂದ ವಿಠ್ಠಲನ ತಲೆಗೆ ಬಲವಾಗಿ ಥಳಿಸಿದನು. ತಲೆಗೆ ಬಿದ್ದ ಸನಿಕೆಯ ಏಟಿನ ನೋವು ತಡೆಯಲಾರದೇ 'ಅಯ್ಯೋ... ಅಮ್ಮಾ... ಸತ್ತೆ' ಎಂದು ಕೆಳಗೆ ಬಿದ್ದು ವಿಲ... ವಿಲನೇ ಒದ್ದಾಡುತ್ತಲೇ ಪ್ರಜ್ಞೆ ಕಳೆದುಕೊಂಡನು. ತಲೆಗೆ ಬಿದ್ದ ಏಟಿನಿಂದ ವಿಪರೀತ ರಕ್ತಸ್ರಾವವಾಗಿತ್ತು. ನಡೆದ ಘಟನೆಯಿಂದ ವಿಮಲಾ ಆಕೆಯ ಗಂಡ, ಮಗ ತುಂಬಾ ಗಾಬರಿಗೊಂಡರು. ಆದದ್ದಾಗಿದೆ. ಪ್ರಕರಣ ಏನಾದರೂ ಮಾಡಿ ಮುಚ್ಚಿ ಹಾಕಲೇಬೇಕು ಎಂದು ತಮ್ಮೊಳಗೆ ಪ್ಲ್ಯಾನ್ ಮಾಡಿದ್ದಾರೆ.

**ಆಯತಪ್ಪಿ ಕಟ್ಟಡದ ಮೇಲಿಂದ...**

ಕಾನೂನು ವಿಶ್ವವಿದ್ಯಾಲಯ ಕಟ್ಟಡವನ್ನು ವೀಕ್ಷಣೆ ಮಾಡುತ್ತಿದ್ದ ಇಂಜನೀಯರ್ ವಿಠ್ಠಲ ರಾಠೋಡ ಆಯತಪ್ಪಿ ಮೇಲಿನಿಂದ ಕೆಳಗೆ ಬಿದ್ದಿದ್ದಾರೆ. ತಲೆಗೆ ಭಾರಿ ಗಾಯವಾಗಿದೆ ಬೇಗ ಬರಬೇಕು ಎಂದು ವಿಠ್ಠಲನ ಊರಿನ ಸಂಬಂಧಿಕರಿಗೆ ವಿಮಲಾ ಮತ್ತವಳ ಗಂಡ ತಿಳಿಸಿದರು. ಅದರಂತೆ ರಾತ್ರಿ ಧಾವಿಸಿ ಬಂದ ಸಂಬಂಧಿಕರು ಗಾಯಗೊಂಡಿದ್ದ ವಿಠ್ಠಲನನ್ನು ಧಾರವಾಡದ ಎಸ್‌ಡಿಎಂ ಆಸ್ಪತ್ರೆಗೆ ಧಾವಿಸಿದರು. ವಿಠ್ಠಲ ರಾಠೋಡನನ್ನು ಪರೀಕ್ಷಿಸಿದ ವೈದ್ಯರು 'ಕಂಡೀಶನ್ ತುಂಬಾ ಗಂಭೀರವಾಗಿದೆ ಈಗಲೇ ನಾವು ಏನನ್ನೂ ಹೇಳುವುದಿಲ್ಲ' ಎಂದಿದ್ದರು. ಆಸ್ಪತ್ರೆಯಲ್ಲೂ ವಿಮಲಾ ಮತ್ತು ಆಕೆಯ ಗಂಡ ಮತ್ತು ಮಗ 'ಕುಡಿದು ಕಟ್ಟಡದ ಮೇಲಿಂದ ಆಯತಪ್ಪಿ ಬಿದ್ದನೆಂದು' ಕಥೆ ಹೇಳಿದರು.



ತನ್ನ ತಂದೆ ಕೊಲೆಯಾಗಿರುವ ಆಸ್ಪತ್ರೆ ಎದುರಿಗೆ ನಿಂತಿರುವ ಪುತ್ರ ಸುನೀಲ ರಾಠೋಡ (ಮಧ್ಯದಲ್ಲಿರುವವನು) ಮತ್ತು ಸಂಬಂಧಿಕರು

**ಉಪಚಾರ ಫಲಿಸದೇ ಸಾವು...**

ಗಂಭೀರವಾಗಿ ಗಾಯಗೊಂಡಿದ್ದ ವಿಠ್ಠಲ ರಾಠೋಡ ತೀವ್ರ ರಕ್ತಸ್ರಾವಗೊಂಡು ಸಾವು-ಬದುಕಿನ ನಡುವೆ ಹೋರಾಟ ನಡೆಸಿದ್ದನು. ಇತ್ತ ವೈದ್ಯರು ಶತ ಪ್ರಯತ್ನಪಟ್ಟು ವಿಠ್ಠಲ ರಾಠೋಡನನ್ನು ಬದುಕಿಸಲು ಪ್ರಯತ್ನಿಸಿದರು. ಆದರೆ ವಿಠ್ಠಲ ಬದುಕುಳಿಯಲಿಲ್ಲ, ವೈದ್ಯರ ಅದ್ಯಾವ ಉಪಚಾರ ಫಲಿಸದೇ ಮೃತಪಟ್ಟನು. ಆತನ ಸಂಬಂಧಿಕರೆಲ್ಲ ಆಸ್ಪತ್ರೆಯ ಮುಂದೆ ಗೋಳಾಡಿದರು. ಇತ್ತ ಮೃತ ವಿಠ್ಠಲನ ಪ್ರೇಯಸಿ ವಿಮಲಾ ತನ್ನ ಗಂಡ ಮತ್ತು ಮಗನ ಜತೆಗೂಡಿ ಬೇರೆ ರೀತಿಯ ಕಥೆ ಕಟ್ಟಲು ತೊಡಗಿದ್ದಳು. ತಮ್ಮ ಕಣ್ಣ ಮುಂದೆ ಇಂಜನೀಯರ್ ವಿಠ್ಠಲ ಕಾನೂನು ವಿ.ವಿ. ಕಟ್ಟಡದ ಮೇಲಿಂದ ಆಯತಪ್ಪಿ ಬಿದ್ದು ಗಂಭೀರವಾಗಿ ಗಾಯಗೊಂಡನೆಂದು ಹೇಳತೊಡಗಿದ್ದರು.

**ಧಾವಿಸಿ ಬಂದ ಸುನೀಲ...**

ಅಂದು ಸುನೀಲನಿಗೆ ಇದ್ಯಾವ ಸಂಗತಿಯು ಗೊತ್ತಿರಲಿಲ್ಲ. ಆತ ಬೆಳಗಾವಿಯಲ್ಲಿ ಮಾಡಿದ ಕಟ್ಟಡ ಕಾಮಗಾರಿಯ ಸಂಬಳವನ್ನು ತರಲು ಹೋಗಿದ್ದನು. ಆತನ ಊರಿನವರು ಸುನೀಲನಿಗೆ ಕರೆ ಮಾಡಿ 'ನಿಮ್ಮ ತಂದೆ ಸಾರಾಯಿ ಕುಡಿದು ಕಟ್ಟಡದ ಮೇಲಿನಿಂದ ಬಿದ್ದು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿದ್ದಾರೆ ನೀನು ತಕ್ಷಣ ಹೊರಟು ಬರಬೇಕು' ಎಂದು ನಡೆದಿದ್ದ ಪೂರ್ತಿ ಸಂಗತಿಯನ್ನೆಲ್ಲ ಆತನಿಗೆ ತಿಳಿಸಿದ್ದಾರೆ. ಬೆಳಗಾವಿಯಿಂದ ಕೈಗೆ ಸಿಕ್ಕ ಬಸ್ ಹಿಡಿದುಕೊಂಡು ಧಾರವಾಡದ ಆಸ್ಪತ್ರೆಗೆ ಬಂದು ನೋಡಿದಾಗ ತಂದೆ ವಿಠ್ಠಲ ಮೃತಪಟ್ಟಿದ್ದನು. ತಂದೆಗಾದ ಪರಿಸ್ಥಿತಿ ನೆನೆದು ಮಗ ಸುನೀಲ ಎದೆ... ಎದೆ ಬಡಿದುಕೊಂಡು ಅತ್ತು ಬಿಟ್ಟನು.



ಹಂತಕರಾದ ಮೇಘವ, ವಿಮಲಾ ಹಾಗೂ ಭಗವಾನದಾಸರವರನ್ನು ಬಂಧಿಸಿ ಕರೆದೊಯ್ಯುತ್ತಿರುವ ಪೊಲೀಸರು

**ನವನಗರ ಪೊಲೀಸರಿಗೆ ದೂರು...**

ಆದದ್ದಾಗಿದೆ ಮುಂದಿನದನ್ನು ನೋಡು ಎಂದು ಸುನೀಲನಿಗೆ ಸಮಾಧಾನ ಮಾಡಿದ ಸಂಬಂಧಿಗಳು ಪೊಲೀಸರಿಗೆ ದೂರು ಕೊಡಲು ತಿಳಿಸಿದರು. ಸುನೀಲ ರಾಠೋಡ ನೇರವಾಗಿ ನವನಗರ ಪೊಲೀಸ್ ಠಾಣೆಗೆ ಧಾವಿಸಿದನು. ಅಂದು ಕರ್ತವ್ಯದಲ್ಲಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಜಯಂತ ಗೌಳಿಯವರನ್ನು ಕಂಡು ತಮ್ಮ ತಂದೆ ಕಟ್ಟಡದ ಮೇಲಿಂದ ಆಯತಪ್ಪಿ ಬಿದ್ದು ಮೃತಪಟ್ಟಿದ್ದಾರೆ. ಅವರ ಸಾವಿನ ತನಿಖೆಯಾಗಬೇಕೆಂದು ದೂರು ನೀಡಿದನು.

ಪ್ರಕರಣದ ಗಂಭೀರತೆಯನ್ನು ಅರಿತುಕೊಂಡ ಪೊಲೀಸ್ ಇನ್ಸ್‌ಪೆಕ್ಟರ್ ಜಯಂತ ಗೌಳಿ ಅವರು ಎಸಿಪಿ ಶಿವಪ್ರಕಾಶ ನಾಯಕ, ಡಿಸಿಪಿ ಮಾನಿಂಗ ನಂದಗಾಂವಿ, ಕಮೀಷನರ್ ಎನ್. ಶಶಿಕುಮಾರ್ ಅವರಿಗೆ ವಿಷಯ ತಿಳಿಸಿ, ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡು ಸುನೀಲ ರಾಠೋಡ ನೀಡಿದ ದೂರನ್ನು ದಾಖಲಿಸಿಕೊಂಡು ಸೂಕ್ಷ್ಮವಾಗಿ ಹೆಚ್ಚಿನ ತನಿಖೆಗೆ ಇಳಿದರು. ಆಸ್ಪತ್ರೆಗೆ ತೆರಳಿ ವಿಠ್ಠಲನ ಮೃತದೇಹವನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದರು. ನಂತರ ಶವದ ಪಂಚನಾಮೆ, ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆ, ಸಂಬಂಧಿಕರ ಹೇಳಿಕೆಗಳನ್ನು ಪಡೆದುಕೊಂಡರು. ನಂತರ ಶವದ ಮರಣೋತ್ತರ ಪರೀಕ್ಷೆ ಮಾಡಿಸಿ ವಾರಸುದಾರರಿಗೆ ಶವವನ್ನು ಒಪ್ಪಿಸಿದರು.



ಗುತ್ತಿಗೆದಾರ ವಿಠ್ಠಲ ರಾಠೋಡ ನಿರ್ಮಿಸುತ್ತಿದ್ದ ನವನಗರದ ಕಾನೂನು ವಿಶ್ವವಿದ್ಯಾಲಯದ ಕಟ್ಟಡ

**ಅಸಹಜ ಸಾವಲ್ಲ... ಇದೊಂದು ಕೊಲೆ...**

ಕುಡಿದು ಆಯತಪ್ಪಿ ವಿಠ್ಠಲ ರಾಠೋಡ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ಕಾನೂನು ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ ಕಟ್ಟಡದ ಪರಿಸರವನ್ನು ಇನ್ಸ್‌ಪೆಕ್ಟರ್ ಜಯಂತ ಗೌಳಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದರು. ನಿರ್ಮಾಣಗೊಳ್ಳುತ್ತಿರುವ ಕಟ್ಟಡದಿಂದ ಬಿದ್ದು ಪೆಟ್ಟಾದಂತಹ ಚಾನ್ಸ್ ಬಹಳ ಕಡಿಮೆ. ಆದರೆ ಇಲ್ಲಿ ವಿಮಲಾ ಮತ್ತವಳ ಗಂಡ, ಮಗ ಸೇರಿಕೊಂಡು ಇಂಜನೀಯರ್ ವಿಠ್ಠಲ ಕಟ್ಟಡದ ಮೇಲಿಂದ ಆಯತಪ್ಪಿ ಬಿದ್ದು ಚಿಕಿತ್ಸೆ ಫಲಿಸದೇ ಮೃತಪಟ್ಟ ಸುದ್ದಿ ಬಿಂಬಿಸಿದ್ದರು. ಇನ್ಸ್‌ಪೆಕ್ಟರ್ ಜಯಂತ್ ಗೌಳಿಗೆ ಯಾಕೋ... ಏನೋ... ಸಂಶಯ ಬಲವಾಗಿ ಬಂದಿದೆ. ಮೂವರ ಹೇಳಿಕೆಗಳು ಬಹಳಷ್ಟು ತದ್ವಿರುದ್ಧ ಆಗತೊಡಗಿದವು. ವಿಮಲಾಳ ಕುಟುಂಬ ವಾಸಿಸುತ್ತಿದ್ದ ಶೆಡ್ ಪರಿಶೀಲಿಸಲಾಗಿ ಮುಂಬಾಗಿಲಿನಲ್ಲಿ ರಕ್ತ ಮಡುಗಟ್ಟಿದ ಸ್ಪಷ್ಟ ಚಿತ್ರ ಗೊತ್ತಾಯಿತು. ಇದು ಅಸಹಜ ಸಾವಲ್ಲ... ಇದೊಂದು ಕೊಲೆ ಎಂದು ಇನ್ಸ್‌ಪೆಕ್ಟರ್ ಜಯಂತ ಅವರಿಗೆ ಕನ್‌ಫರ್ಮ್ ಆಗಿದೆ. ಈ ಕುರಿತು ಕಮೀಷನರ್ ಎನ್. ಶಶಿಕುಮಾರ್, ಡಿಸಿಪಿ ಮಹಾನಿಂಗ ನಂದಗಾಂವಿ, ಎಸಿಪಿ ಶಿವಪ್ರಕಾಶ್ ನಾಯಕ್ ಅವರೊಂದಿಗೆ ಸುದೀರ್ಘ ಸಮಾಲೋಚಿಸಿ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡಿದ್ದಾರೆ.

**ಹಂತಕರ ಬಂಧನ...**

ಇಂಜನೀಯರ್ ವಿಠ್ಠಲ ರಾಠೋಡನ ಜತೆಗೆ ಛತ್ತೀಸಗಡ ಮೂಲದ ವಿಮಲಾ ಸತನಾಮಿ ಕಳೆದ ನಾಲ್ಕೈದು ವರ್ಷಗಳಿಂದ ಅನೈತಿಕ ಸಂಬಂಧವಿರಿಸಿಕೊಂಡಿದ್ದಳು. ಇದಕ್ಕಾಗಿ ಆಕೆಯ ಗಂಡ ಮತ್ತು ಮಗ ಮೇಲಿಂದ ಮೇಲೆ ವಿಠ್ಠಲನ ಜತೆ ಜಗಳ ಕಾಯುತ್ತಿದ್ದರು. ದಿನಾಂಕ **10.01.2026** ಶನಿವಾರದಂದು ರಾತ್ರಿ ಏಕಾಂತದಲ್ಲಿ ವಿಠ್ಠಲ ಸಲುಗೆಯಿಂದ ಇರುವುದನ್ನು ಗಮನಿಸಿ ಜಗಳ ತೆಗೆದು ವಿಮಲಾಳ ಮಗ ಸನಿಕೆಯಿಂದ ವಿಠ್ಠಲನ ತಲೆಗೆ ಥಳಿಸಿ ಗಂಭೀರವಾಗಿ ಗಾಯಗೊಳಿಸಿದ್ದನು. ಈ ಸಂದರ್ಭದಲ್ಲಿ ವಿಮಲಾಳ ಗಂಡ ಕೂಡಾ ಭಾಗಿಯಾಗಿದ್ದನು. ವಿಮಲಾ ಕೂಡಾ ಗಂಡ ಮತ್ತು ಮಗನನ್ನು ಉಳಿಸಲು ಕಥೆ ಕಟ್ಟಿ ಅಸಹಜ ಸಾವು ಎಂದು ಬಿಂಬಿಸಲು ಯತ್ನಿಸಿದ್ದಳು. ವಿಠ್ಠಲ ರಾಠೋಡ ಹತ್ಯೆ ಪ್ರಕರಣದಲ್ಲಿ ಇನ್ಸ್‌ಪೆಕ್ಟರ್ ಜಯಂತ ಗೌಳಿ ಚಾಣಾಕ್ಷತನದಿಂದ ಕಾರ್ಯಾಚರಣೆ ಮಾಡಿ ಪ್ರಕರಣದಲ್ಲಿ ಭಾಗಿಯಾದ ವಿಮಲಾ ಮತ್ತವಳ ಗಂಡ, ಮಗನನ್ನು ಬಂಧಿಸಿ ಜೈಲಿಗಟ್ಟಿದ್ದಾರೆ. ಕೊಲೆ ಪ್ರಕರಣ ಪತ್ತೆ ಮಾಡುವಲ್ಲಿ ನವನಗರ ಇನ್ಸ್‌ಪೆಕ್ಟರ್ ಜಯಂತ ಗೌಳಿಗೆ ಕಮೀಷನರ್ ಎನ್. ಶಶಿಕುಮಾರ್, ಡಿಸಿಪಿ ಮಹಾನಿಂಗ ನಂದಗಾಂವಿ, ಎಸಿಪಿ ಶಿವಪ್ರಕಾಶ್ ನಾಯಕ್ ಅವರುಗಳು ಸೂಕ್ತ ನಿರ್ದೇಶನಗಳನ್ನು ನೀಡಿದ್ದರು.

**ಲೋಕಸಭಾ ಚುನಾವಣೆ ಬಳಿಕ ನಡೆದ ಎಲ್ಲ ಚುನಾವಣೆಗಳಲ್ಲಿಯೂ ಕಾಂಗ್ರೆಸ್ ಹೀನಾಯ ಸೋಲು ಕಾಣುತ್ತಿದೆ. ರಾಹುಲ್ ಗಾಂಧಿ ಸೇರಿದಂತೆ ಕೈ ನಾಯಕರು ಬಳಸುತ್ತಿರುವ ತಂತ್ರಗಳೆಲ್ಲವೂ ವಿಫಲವಾಗುತ್ತಿವೆ. ಏನೇ ಕಸರತ್ತು ಮಾಡಿದರೂ ಅದು ಮತವನ್ನು ತಂದುಕೊಡುತ್ತಿಲ್ಲ. ಹೀಗಿದ್ದರೂ ರಾಹುಲ್ ಗಾಂಧಿ ಮಾತ್ರ ಹಳೆಯ ಆ ತಂತ್ರಕ್ಕೆ ಜೋತು ಬಿದ್ದಿರುವುದು ಎದ್ದು ಕಾಣಿಸುತ್ತಿದೆ. ಮುಂದೆ ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ, ದೇಶದಾದ್ಯಂತ ಹಲವು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ಬರಲಿವೆ.. ಈ ಚುನಾವಣೆಗಳು ಕಾಂಗ್ರೆಸ್‌ಗೆ ಅಗ್ನಿಪರೀಕ್ಷೆಯಾಗಿದ್ದು, ಇದನ್ನು ಹೇಗೆ ಎದುರಿಸುತ್ತದೆ ಎನ್ನುವುದೇ ಕುತೂಹಲಕಾರಿಯಾಗಿದೆ.**



# ಕಾಂಗ್ರೆಸ್‌ಗೆ ಶುರುವಾಗಿದೆ ಅಗ್ನಿಪರೀಕ್ಷೆ!

✍ ಬಿ.ಎಂ. ಲವಕುಮಾರ್

ಕಾಂಗ್ರೆಸ್‌ಗೆ ಟಾರ್ಗೆಟ್ ಬಿಜೆಪಿನಾ? ನರೇಂದ್ರ ಮೋದಿನಾ? ಈ ಪ್ರಶ್ನೆ ಪ್ರತಿ ಚುನಾವಣೆ ನಡೆದಾಗಲೆಲ್ಲ ಕಾಡುತ್ತದೆ. ಏಕೆಂದರೆ ಇತ್ತೀಚೆಗಿನ 2024ರ ಲೋಕಸಭೆಯಿಂದ ಸ್ಥಳೀಯ ಸಂಸ್ಥೆ ಚುನಾವಣೆ ತನಕ ಕಾಂಗ್ರೆಸ್ ನ ಸಾಧನೆಯನ್ನು ಗಮನಿಸಿದರೆ ಕಾಂಗ್ರೆಸ್ ನಾಯಕರ ಅದರಲ್ಲೂ ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ತಂತ್ರಗಳೆಲ್ಲವೂ ವಿಫಲವಾಗಿವೆ. ಇದಕ್ಕೆ ಬಿಜೆಪಿ ಪಕ್ಷವನ್ನು ಟಾರ್ಗೆಟ್ ಮಾಡಿಕೊಂಡು ಅದಕ್ಕೆ ವಿರುದ್ಧವಾಗಿ ಸಂಘಟನೆ ಮಾಡಿಕೊಂಡು ಹೋಗುವ ಬದಲಿಗೆ ಕೇವಲ ಮೋದಿ, ಆರ್‌ಎಸ್‌ಎಸ್ ಎಂದು ಬಡಬಡಾಯಿಸಿಕೊಳ್ಳುತ್ತಿರುವುದೇ ಕಾರಣವಾಗಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷವಾಗಿ ಸುಮಾರು 70 ವರ್ಷಗಳ ಕಾಲ ದೇಶವನ್ನಾಳಿದ ಕಾಂಗ್ರೆಸ್ 99 ಸ್ಥಾನ ಗೆದ್ದಾಗ ಅದೇ ದೊಡ್ಡ ಸಾಧನೆ ಎಂಬಂತೆ ಬೀಗಿತ್ತು. ಇನ್ನೇನಿದ್ದರೂ ಕಾಂಗ್ರೆಸ್ ನದ್ದೇ ಜಮಾನ... ಮೋದಿ ವರ್ಚಸ್ ಕಡಿಮೆಯಾಯಿತು ಎಂದು ಹಲವರು ಮಾತನಾಡಿಕೊಂಡಿದ್ದರು. ಆದರೆ ಲೋಕಸಭಾ ಚುನಾವಣೆ ನಂತರ ಕಾಂಗ್ರೆಸ್ ತನ್ನ ಪಕ್ಷದ ಸಂಘಟನೆ ಕಡೆಗೆ ಗಮನ ಕೊಡಲೇ ಇಲ್ಲ. ಅಷ್ಟೇ ಅಲ್ಲದೆ ಲೋಕಸಭಾ ಚುನಾವಣೆಗೆ ಮಾಡಿಕೊಂಡಿದ್ದ ಇಂಡಿಯಾ ಒಕ್ಕೂಟದ ಕಡೆಗೂ ಲಕ್ಷ್ಯ ಕೊಡಲಿಲ್ಲ. ಅದನ್ನು ಮತ್ತೆ ಗಟ್ಟಿಗೊಳಿಸುವ ಪ್ರಯತ್ನಕ್ಕೂ ಮುಂದಾಗಲಿಲ್ಲ.

ಇದರ ಪರಿಣಾಮ ಲೋಕಸಭಾ ಚುನಾವಣೆ ಬಳಿಕ ಟಿಎಂಸಿ, ಎಎಪಿ ಹೀಗೆ ಹಲವು ಪಕ್ಷಗಳು ಇಂಡಿಯಾ ಒಕ್ಕೂಟದಲ್ಲಿದ್ದರೂ ಇಲ್ಲದಂತೆ ವರ್ತಿಸಲಾರಂಭಿಸಿದವು. ರಾಹುಲ್ ಗಾಂಧಿ ಎಲ್ಲರನ್ನು ಒಟ್ಟು ಮಾಡುವ ಪ್ರಯತ್ನದತ್ತ ಗಮನಹರಿಸಲೇ ಇಲ್ಲ. ಅದಕ್ಕಿಂತ ಹೆಚ್ಚಾಗಿ ರಾಹುಲ್ ಗಾಂಧಿಯನ್ನೇ ಬದಿಗಿಟ್ಟು ತಾನೇ ಇಂಡಿಯಾ ಒಕ್ಕೂಟದ ಸಾರಥ್ಯ ವಹಿಸಿಕೊಳ್ಳುವ ಪ್ರಯತ್ನಕ್ಕೆ ಮಮತಾ ಬ್ಯಾನರ್ಜಿ ಮುಂದಾದರು. ಆದರೆ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಇಂಡಿಕೂಟದ ನೇತೃತ್ವವನ್ನು ಬೇರೆಯವರಿಗೆ ಕೊಟ್ಟು ತಾವು ಅವರ ಕೈಕಳಗೆ ಮುಂದುವರೆಯಲು ಇಷ್ಟಪಡಲಿಲ್ಲ. ಹೀಗಾಗಿ ಇಂಡಿಯಾ ಒಕ್ಕೂಟ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಪರಿಸ್ಥಿತಿಗೆ ಬಂದು ನಿಂತಿದೆ.

2024ರ ಚುನಾವಣೆಗೂ ಮುನ್ನ ರಾಹುಲ್ ಗಾಂಧಿ ಮಾಡಿದ ಭಾರತ್ ಜೋಡೋ ಪಾದಯಾತ್ರೆ ಒಂದಷ್ಟು ಯಶಸ್ಸು ತಂದು ಕೊಟ್ಟಿತು. ಇದಾದ ನಂತರ ದೆಹಲಿ, ಬಿಹಾರ, ಮುಂಬೈ ಮುಂತಾದ ಕಡೆಗಳಲ್ಲಿ ಕಾಂಗ್ರೆಸ್‌ನ ಯಾವುದೇ ತಂತ್ರಗಳು ಫಲಿಸಿಲ್ಲ. ಇಲ್ಲಿ ಮುಖ್ಯವಾಗಿ ರಾಹುಲ್ ಗಾಂಧಿ ಮತ್ತು ಅವರ ಸುತ್ತು ಇರುವ ಕೆಲವು ಹಿರಿಯ ನಾಯಕರು ಮೋದಿಯನ್ನು ಬೈಯ್ಯುವುದೇ ರಾಜಕೀಯ ಎಂದುಕೊಂಡಿದ್ದಾರೆ. ಆಗಾಗ್ಗೆ ಮೋದಿ ಮತ್ತು ಆರ್‌ಎಸ್‌ಎಸ್ ಬಗ್ಗೆ ಮಾತನಾಡುವುದರಿಂದ ಒಂದು ಸಮುದಾಯದ ಮತವನ್ನು ಸೆಳೆಯಬಹುದು ಎಂಬುದು ಅವರ ಆಲೋಚನೆಯಾಗಿದ್ದು, ಅದರಿಂದ ಒಂದಷ್ಟು ಲಾಭವೂ ಆಗಿರಬಹುದು ಆದರೆ ನಿಜ ಹೇಳಬೇಕೆಂದರೆ ಇದ್ಯಾವುದೂ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಕೆಲಸ ಮಾಡಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.



ಕಾಂಗ್ರೆಸ್‌ಗೆ ಬರೀ ಸೋಲಾಗಿದ್ದರೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿರಲಿಲ್ಲ. ಆದರೆ ಕಾಂಗ್ರೆಸ್ ಆಗುತ್ತಿರುವುದು ಹೀನಾಯ ಸೋಲು. ಇದು ಪಕ್ಷದ ಅಸ್ತಿತ್ವದ ಪ್ರಶ್ನೆಯಾಗಿದೆ. ಪ್ರತಿ ಚುನಾವಣೆಗಳಲ್ಲಿ ಸೋಲನ್ನೇ ಕಾಣುತ್ತಿದ್ದರೆ, ರಾಜಕೀಯವಾಗಿ ಬೆಳೆಯ ಬೇಕೆಂದು ಕೊಳ್ಳುವ ಯುವ ಮುಖಂಡರಿಗೂ ಭಯ ಶುರುವಾಗುತ್ತದೆ. ಅವರು ಬೇರೆ ಪಕ್ಷಗಳತ್ತ ಮುಖ ಮಾಡಬಹುದು, ಹಾಗೆಯೇ ಕಾರ್ಯಕರ್ತರು ಕೂಡ ಹಿಂದೇಟು ಹಾಕುತ್ತಾರೆ. ಇವತ್ತು ಬಹುತೇಕ ಕಡೆಗಳಲ್ಲಿ ಕಾಂಗ್ರೆಸ್‌ಗೆ ಸ್ಪರ್ಧೆ ಮಾಡಲು ಅಭ್ಯರ್ಥಿಗಳೇ ಇಲ್ಲದಾಗಿದೆ. ಹಾಗೆಯೇ ಜೈಕಾರ ಕೂಗಲು ಕಾರ್ಯಕರ್ತರು ಸಿಗದಂತಾಗಿದೆ.

ಬಿಹಾರ ಚುನಾವಣೆ ಬಳಿಕ ಮುಂಬೈ ಬೃಹತ್ ಪಾಲಿಕೆ ಚುನಾವಣೆಯಲ್ಲಿಯೂ ಕಾಂಗ್ರೆಸ್ ಹೀನಾಯ ಸೋಲು ಕಂಡಿದೆ. ಇದಕ್ಕೆ ಕಾರಣವೇನು? ಎಂಬುದನ್ನು ರಾಹುಲ್ ಗಾಂಧಿ ಆಗಲೀ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯಾಗಲೀ ಯಾವತ್ತಾದರೂ ಆ ಬಗ್ಗೆ ಸಭೆ ನಡೆಸಿ ಚರ್ಚೆ ಮಾಡಿದ್ದಾರಾ? ಖಂಡಿತಾ ಇಲ್ಲ. ಪಕ್ಷದ ಸಂಘಟನೆ ಮಾಡದೆ ಹೋದರೂ ತೊಂದರೆಯಾಗುತ್ತಿರಲಿಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬೈಯ್ಯುವ ಭರದಲ್ಲಿ ದೇಶದ ಮಾನವನ್ನು ಹರಾಜು ಹಾಕುತ್ತಿರುವುದು ಬೇಸರದ ಸಂಗತಿಯಾಗಿದೆ. ಅದರಲ್ಲೂ ಹೊರದೇಶದಲ್ಲಿ ಹೋಗಿ ತಮ್ಮ ದೇಶದ ಬಗ್ಗೆ ಮಾತನಾಡುವ ರಾಹುಲ್ ಗಾಂಧಿಯ ವರ್ತನೆ ಸುತರಾಂ ಒಪ್ಪುವಂತಹದ್ದಲ್ಲ. ಇದೇ ಅವರಿಗೆ ಮುಳುವಾಗುತ್ತಿದೆ ಎಂಬುದನ್ನು ಅವರು ಮರೆಯುತ್ತಿದ್ದಾರೆ.



ಇದು ಎಲ್ಲೋ ಒಂದು ಕಡೆ ನಮ್ಮ ಆಂತರಿಕ ವಿಚಾರಗಳನ್ನು ಬಹಿರಂಗಗೊಳಿಸುವ ಮತ್ತು ದೇಶದ ಮಾನವನ್ನು ಹರಾಜು ಹಾಕುವ ಕೆಲಸವೆಂದೇ ಬಿಂಬಿತವಾಗುತ್ತಿದೆ. ಇದನ್ನು ರಾಹುಲ್ ಗಾಂಧಿ ಎಲ್ಲಿವರೆಗೆ ಅರಿಯುವುದಿಲ್ಲವೋ ಅಲ್ಲಿಯ ತನಕ ಅದರ ಪರಿಣಾಮಗಳು ಪಕ್ಷದ ಮೇಲೆ ಬೀರುತ್ತಲೇ ಇರುತ್ತದೆ. ರಾಹುಲ್ ಗಾಂಧಿ ನಾಯಕತ್ವದಲ್ಲಿ ಸೋಲಿನ ಸರಮಾಲೆಯೇ ಪಕ್ಷವನ್ನು ಸುತ್ತಿಕೊಂಡಿದೆ. ಹೀಗಾಗಿ ಮುಂದೆ ಯಾರಿಗೆ ಸಾರಥ್ಯ ನೀಡಿದರೆ ಪಕ್ಷ ಬೆಳೆಯಬಹುದು ಎಂಬ ಪ್ರಶ್ನೆಯೂ ಎದ್ದಿದೆ. ನೆಹರು ಕುಟುಂಬವನ್ನು ಹೊರತು ಪಡಿಸಿ ಮೂರನೇ ವ್ಯಕ್ತಿಗೆ ಪಕ್ಷದ ಹಿಡಿತ ಸಿಗಲಾರದು. ಇವತ್ತು ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾಗಿದ್ದರೂ ಅವರು ಯಾವುದೇ ನಿರ್ಧಾರ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ ಎಲ್ಲವನ್ನೂ ನಿಯಂತ್ರಿಸುತ್ತಿರುವುದು ಸೋನಿಯಾಗಾಂಧಿ ಮತ್ತು ರಾಹುಲ್ ಗಾಂಧಿ ಎಂಬುದು ಕಣ್ಮುಂದಿರುವ ಸತ್ಯವಾಗಿದೆ.



ನೆಹರು ಕುಟುಂಬದ ಹೊರತಾಗಿ ಕಾಂಗ್ರೆಸ್ ನ್ನು ನೋಡುವುದು ಕಷ್ಟವೇ... ಹೀಗಾಗಿ ಹಿರಿಯ ನಾಯಕರು ಕೂಡ ನೆಹರು ಕುಟುಂಬಕ್ಕೆ ನಿಷ್ಠರಾಗಿ ರಾಜಕೀಯ ಮಾಡುತ್ತಿದ್ದಾರೆ ವಿನಃ ಪಕ್ಷ ಸಂಘಟಿಸಿ ಗೆಲುವಿಗೆ ಹೋರಾಡಲು ತಯಾರಿಲ್ಲದಾಗಿದೆ. ಈಗಿರುವ ಹೈಕಮಾಂಡ್ ನಾಯಕರಲ್ಲಿ ಹೆಚ್ಚಿನವರಿಗೆ ತಮ್ಮನ್ನು ಹೊರತಾಗಿ ಬೇರೆಯವರನ್ನು ಗೆಲ್ಲಿಸಿಕೊಂಡು ಬರುವ ತಾಕತ್ ಇಲ್ಲದಾಗಿದೆ. ಹೀಗಾಗಿ ಅವರು ತಮ್ಮ ರಾಜಕೀಯ ಉಳಿವಿಗಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಆರ್‌ಎಸ್‌ಎಸ್‌ನ್ನು ಟೀಕೆ ಮಾಡುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬ ಆರೋಪವೂ ಇಲ್ಲದಿಲ್ಲ.

ಲೋಕಸಭಾ ಚುನಾವಣೆ ಬಳಿಕ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ರಾಹುಲ್ ಗಾಂಧಿ ಅವರು ನರೇಂದ್ರ ಮೋದಿ ವಿರುದ್ಧ ಮತಗಳ್ಳತನದ ಅಸ್ತ್ರ ಬಳಸಿದರು. ಅದನ್ನೇ ಮುಂದಿಟ್ಟುಕೊಂಡು ಸಮಾವೇಶ ಮಾಡಿದರು. ಪ್ರತಿ ಚುನಾವಣೆಗೂ ಅದನ್ನೇ ಅಸ್ತ್ರ ಮಾಡಿಕೊಂಡರು. ಆದರೆ ಅದು ಯಾವುದೇ ಚುನಾವಣೆಯಲ್ಲಿಯೂ ಅವರಿಗೆ ಅನುಕೂಲ ಮಾಡಿಕೊಡಲಿಲ್ಲ. ಹಾಗಿದ್ದ ಮೇಲೆ ಅದನ್ನು ಬಿಟ್ಟು ಬೇರೆ ಏನಾದರೂ ತಂತ್ರಗಳನ್ನು ಮಾಡಬಹುದಿತ್ತು. ಆದರೆ ಅವರು ಇವತ್ತಿಗೂ ಮತಚೋರಿಯನ್ನು ಬಿಟ್ಟು ಯಾವುದೇ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ. ಆ ವಿಚಾರ ಒಂಥರಾ ಸವಕಲು ನಾಣ್ಯದಂತಾಗಿದೆ.

ಇಷ್ಟಕ್ಕೂ ಕಾಂಗ್ರೆಸ್ ಗೆ ಭಯವಿರುವುದು ಬಿಜೆಪಿ ಪಕ್ಷದ ಮೇಲೆ ಅಲ್ಲ ಮೋದಿ ಮೇಲೆ. ಹೀಗಾಗಿಯೇ ಮೋದಿಯ ಬಗ್ಗೆ ಟೀಕೆ ಮಾಡಿ ಅವರನ್ನು ಕುಗ್ಗಿಸಿದರೆ ಆ ನಂತರ ಬಿಜೆಪಿಯನ್ನು ಸುಲಭವಾಗಿ ಗೆಲ್ಲಬಹುದು ಎಂಬುದು ಅವರ ಆಲೋಚನೆಯಾಗಿದೆ. ಹೀಗಾಗಿಯೇ ಮೋದಿ ಮತ್ತು ಆರ್ ಎಸ್ ಎಸ್ ಟಾರ್ಗೆಟ್ ಮಾಡಿ ಟೀಕೆ ಮಾಡುವುದನ್ನು ರಾಹುಲ್ ಗಾಂಧಿ ಮುಂದುವರೆಸಿದ್ದು, ಅದನ್ನೇ ಕಾಂಗ್ರೆಸ್ ನ ಇತರೆ ನಾಯಕರು ಮಾಡುತ್ತಿದ್ದಾರೆ. ರಾಹುಲ್ ಗಾಂಧಿ ಸುತ್ತಲೂ ಇರುವ ನಾಯಕರು ರಾಹುಲ್ ಗಾಂಧಿ ಗೆ ರಾಜಕೀಯವಾಗಿ ಉತ್ತಮ ಸಲಹೆಗಳನ್ನು ನೀಡಬಹುದು. ಆದರೆ ಸಲಹೆಗಳನ್ನು ಸ್ವೀಕರಿಸುವ ಮನಸ್ಥಿತಿ ರಾಹುಲ್ ಗಾಂಧಿ ಗಿಲ್ಲ. ಹೀಗಾಗಿಯೇ ಬಹುತೇಕ ನಾಯಕರು ಕಾಂಗ್ರೆಸ್ ಉಳಿಯ ಬೇಕಾದರೆ ಪ್ರಿಯಾಂಕ್ ವಾದ್ರಾ ಪಕ್ಷದ ಸಾರಥ್ಯ ವಹಿಸಿಕೊಳ್ಳಬೇಕು ಎಂದು ಬಯಸುತ್ತಿದ್ದಾರೆ.

ಇವತ್ತು ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದಲ್ಲಿದ್ದರೆ ಅದಕ್ಕೆ ರಾಹುಲ್ ಗಾಂಧಿ ಅಲ್ಲ. ಇಲ್ಲಿನ ನಾಯಕರೇ ಕಾರಣ. ಆದರೆ ರಾಜಕೀಯ ಶಹಬ್ಬಾಸ್ ಗಿರಿಗೋಸ್ಕರ ರಾಹುಲ್ ಗಾಂಧಿಯಿಂದಲೇ ಕಾಂಗ್ರೆಸ್ ಗೆಲುವು ಕಂಡಿದೆ ಎಂಬಂತಹ ಮಾತುಗಳನ್ನಾಡುತ್ತಿದ್ದಾರೆ. ಇಲ್ಲಿನ ಮತದಾರರು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ನಾಯಕರ ನಾಯಕತ್ವ ಮೆಚ್ಚಿ ಮತನೀಡುವ ಮೂಲಕ ಕಾಂಗ್ರೆಸ್ ನ್ನು ಗೆಲ್ಲಿಸಿದ್ದಾರೆ. ಅದಕ್ಕಿಂತ ಹೆಚ್ಚಾಗಿ ರಾಜ್ಯದಲ್ಲಿ ಪಕ್ಷ ಸಂಘಟನೆ ಉತ್ತಮವಾಗಿದೆ. ಇದು ಕಾಂಗ್ರೆಸ್‌ಗೆ ಗೆಲುವು ತಂದುಕೊಟ್ಟಿದೆ. ಆದರೆ ರಾಜ್ಯದಲ್ಲಿ ನಡೆಯುತ್ತಿರುವ ಅಧಿಕಾರದ ಹಸ್ತಾಂತರ ಜಟಾಪಟಿ, ಭ್ರಷ್ಟಾಚಾರದ ಆರೋಪಗಳು, ಕೆಲವು ಕೈ ನಾಯಕರ ದಬ್ಬಾಳಿಕೆ, ಸರ್ಕಾರಿ ನೌಕರರ ಆತ್ಮಹತ್ಯೆ, ಕುಂಠಿತಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಹೀಗೆ ಹತ್ತಾರು ಸಮಸ್ಯೆಗಳು ರಾಜ್ಯದಲ್ಲಿ ಕಾಡುತ್ತಿದೆ.

ಮುಂದಿನ ಜೂನ್ ಒಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯನ್ನು ನಡೆಸಲೇ ಬೇಕಾದ ಅನಿವಾರ್ಯತೆ ಎದುರಾಗಿದೆ. ಈ ಚುನಾವಣೆ ಕಾಂಗ್ರೆಸ್‌ಗೆ ಪ್ರತಿಷ್ಟೆಯಾಗಿದೆ. ಇಲ್ಲಿ ಗೆಲ್ಲಲೇ ಬೇಕಾಗಿದೆ. ಆದರೆ ಪಕ್ಷದೊಳಗೆ ಈಗಿರುವ ಭಿನ್ನಮತಗಳು, ಅಧಿಕಾರ ಹಸ್ತಾಂತರದ ಗೊಂದಲಗಳನ್ನೆಲ್ಲ ಬದಿಗಿಟ್ಟು ಗೆಲುವಿಗೆ ಹೋರಾಟ ಮಾಡಬೇಕಾಗಿದೆ. ಅತ್ತ ಕೇಂದ್ರದಲ್ಲಿ ಕಾಂಗ್ರೆಸ್ ಗೆ ಅಸ್ಸಾಂ, ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು ಹೀಗೆ ಒಂದರ ನಂತರ ಒಂದು ಎಂಬಂತೆ ಚುನಾವಣೆಗಳು ಬರುತ್ತಿವೆ. ಅದಕ್ಕೆ ಸಿದ್ದರಾಗಬೇಕಾಗಿದೆ. ಇತ್ತ ರಾಜ್ಯ ಕಾಂಗ್ರೆಸ್‌ಗೆ ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಎದುರಿಸಿ ಗೌರವ ಉಳಿಸಿಕೊಳ್ಳಬೇಕಾಗಿದೆ. ಇದೆಲ್ಲವನ್ನು ಗಮನಿಸಿದ್ದೇ ಆದರೆ ಕಾಂಗ್ರೆಸ್‌ಗೆ ಇನ್ಮುಂದೆ ಅಗ್ನಿಪರೀಕ್ಷೆ ಎನ್ನುವುದರಲ್ಲಿ ಎರಡು ಮಾತಿಲ್ಲ.

# ಶಿವಮೊಗ್ಗ: ಅತ್ತಿಗೆ ಜೊತೆ ಝುಮ್ಮ ಜುಮ್ಮ ಮಾಡಿದ ತಮ್ಮ ಅಣ್ಣನಿಂದಲೇ ಕೊಲೆ?!



ಆರೋಪಿ ಮಾಲತೇಶ್

**ಶಿವಮೊಗ್ಗ ಜಿಲ್ಲೆಯಲ್ಲಿ ಆಗಾಗ ಬೇರೆ ಬೇರೆ ವಿಷಯಗಳಿಗಾಗಿ ಕೊಲೆಯಾಗೋದು ಇತ್ತೀಚೆಗೆ ಸಾಮಾನ್ಯ ಅನ್ನೋಥರ ಆಗಿಬಿಟ್ಟಿದೆ. ಆದರೆ ಶಿವಮೊಗ್ಗದ ಸೊರಬ ತಾಲೂಕಿನಲ್ಲೊಂದು ಬೇರೆಯದೇ ರೀತಿಯ ಕೊಲೆಯಾಗಿದೆ.**

**ಶಿವಮೊಗ್ಗ**


✍ ಸಂತೋಷಕುಮಾರ

ಅವತ್ತು 11-12-2025 ಗುರುವಾರ ಸೊರಬ ಪೊಲೀಸ್ ಠಾಣೆಯ ಪಿಎಸ್ಐ ನವೀನ್ ಎನ್.ಎಚ್. ಕರ್ತವ್ಯದಲ್ಲಿದ್ದಾಗ ಹೊಸೂರ ಗ್ರಾಮ, ಕಾನಕೊಪ್ಪ ನಿವಾಸಿ ಗೌರಮ್ಮ ಗುಡ್ಡಪ್ಪ ಚೆಲುವಾದಿ (52) ಇವರು ಬಂದು ನನಗೆ ಎರಡು ಗಂಡು ಮಕ್ಕಳಿದ್ದು, ದೊಡ್ಡ ಮಗ ಮಾಲತೇಶ(35) ಇವನಿಗೆ ಕಳೆದ ಎಂಟು ವರ್ಷಗಳ ಹಿಂದೆ ಮಮದುವೆ ಮಾಡಿದ್ದು, ಅವರ ಸಂಸಾರ ಕಳೆದ ಐದು ವಷಗಳಗಳ ತನಕ ಹಿರೇಕೆರೂರು ತಾಲೂಕಿನ ಬೆಟಕೆರೂರನಲ್ಲಿದ್ದು ನಂತರ ಈಗ ನಮ್ಮೂರಲ್ಲೇ ವಾಸವಾಗಿದ್ದಾರೆ, ನನ್ನ ಎರಡನೇ ಮಗ ರಾಮಚಂದ್ರ(28) ಇವನಿಗೆ ಇನ್ನೂ ಮದುವೆ ಆಗಿಲ್ಲಾ. ಅವನು ಕೂಲಿ ಕೆಲಸಕ್ಕೆ ಬೇರೆ ಬೇರೆ ಕಡೆಗೆಲ್ಲಾ ಹೋಗುತ್ತಾ ಇದ್ದು, ಒಮ್ಮೆ ಹೋದರೆ ಹದಿನೈದು, ಇಪ್ಪತ್ತು ದಿನ ಕೆಲವೊಮ್ಮೆ ತಿಂಗಳಿಗೊಮ್ಮೆ ಮನೆಗೆ ಬರುತ್ತಾ ಇದ್ದ,



ಅಣ್ಣನಿಂದಲೇ ಕೊಲೆಯಾದ ರಾಮಚಂದ್ರ

ಆದರೆ 08-09-2025ರಂದು ಬೆಳಿಗ್ಗೆ ಕೆಲ್ಸಕ್ಕೆ ಹೋಗ್ಬರ್ತೀನೀಂತಾ ಮನೆಯಿಂದ ಹೋದ ನನ್ ಮಗಾ ಈವತ್ತಿಗೂ ಮನೆಗೆ ಬಂದಿಲ್ಲಾ ಎಲ್ಲಾ ಕಡೆ ಹುಡುಕಿಯಾಯ್ತು, ಕೆಲ್ಸಕ್ಕೆ ಎಲ್ಲೋ ದೂರ ಹೋಗಿರ್ಬೇಕು ಬರ್ತಾನೆ ಅಂತಾ ಕಾದು ಇನ್ನೂ ಮನೆಗೆ ಬಂದಿಲ್ಲಾ ಅಂತಾ ಆನವಟ್ಟಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದು, ಅದನ್ನೇ ಮನ್ಸಿಗೆ ಹಚ್ಕೊಂಡು ನಾನು ಕೊರಗ್ತಾ ಇದ್ದಾಗ ನನ್ನ ಹಿರಿ ಮಗನ ಹೆಂಡ್ತಿ ಭಾಗ್ಯ ನನ್ನ ಹತ್ರಾ ಬಂದು ಅತ್ತೆ ನಿಮ್ ಹತ್ರಾ ನಾನು ಏನೋ ಹೇಳ್ಬೇಕು ಹೇಳು ನನ್ನ ಮತ್ತು ನಿಮ್ ಕಿರಿ ಮಗ ರಾಮಚಂದ್ರನ ವಿಚಾರದಲ್ಲಿ ದ್ವೇಷದಿಂದ



ಡಿವೈಎಸ್ಪಿ ಕೇಶವ



ಸಿಪಿಐ ಮಾಲತೇಶ್ ಲಂಬಿ

ನನ್ ಗಂಡ ಮಾಲತೇಶ 8-9-2025ಕ್ಕೆ ಜೇಡಗೆರೆ ತೋಟದ ಹತ್ರಾ ಕರ್ಕೊಂಡ್ಹೋಗಿ ಕೊಂದಿದ್ದಾರೆ, ಅಂದಿದ್ದಾಳೆ. ಅದ್ಕೇ ನನ್ ಹಿರೀ ಮಗನ್ನ ವಿಚಾರ್ಸಿ ನಂಗೆ ನ್ಯಾಯ ಕೊಡ್ಸಿ ಅಂತಾ ಬೇಡ್ಕೊಂಡಿದ್ದಾರೆ. ಆಗಿನ ಎಸ್ಪಿ ಮಿಥುನ್‌ಕುಮಾರ್‌ಮಾರ್ಗದರ್ಶನದಲ್ಲಿಶಿಕಾರಿಪುರ ಡಿವೈಎಸ್ಪಿ ಕೇಶವ ನೇತೃತ್ವದಲ್ಲಿ ಸೊರಬ ಸಿಪಿಐ ಮಹಾಂತೇಶ ಲಂಬಿ ತಮ್ಮ ಸಿಬ್ಬಂದಿಗಳೊಂದಿಗೆ ಆರೋಪಿ ಮಾಲತೇಶನನ್ನ ಬಂಧಿಸಿ ವಿಚಾರಣೆ ನಡ್ಸಿದ್ದಾರೆ.

## ಹಾಗಾದ್ರೆ ಆಗಿದ್ದೇನು?

ಗೌರಮ್ಮ ಹಾಗೂ ಗುಡ್ಡಪ್ಪ ಇವರಿಗೆ ಎರಡು ಜನ ಗಂಡು ಮಕ್ಕಳು, ದೊಡ್ಡಮ್ನ ಮಾಲತೇಶ, ಎರಡನೇಯವನು ರಾಮಚಂದ್ರ. ಮಾಲತೇಶನಿಗೆ ಸುಮಾರು ಎಂಟು ವರ್ಷಗಳ ಹಿಂದೆ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ತುಡಿನೀರು ಎಂಬಲ್ಲಿನ ಭಾಗ್ಯ ಜೊತೆ ಮದುವೆ ಮಾಡಿದರು. ಇವರಿಗೆ ಒಂದು ಗಂಡು, ಒಂದು ಹೆಣ್ಣು ಮಗು. ಮಾಲತೇಶನ ತಮ್ಮ ರಾಮಚಂದ್ರನಿಗೆ ಇನ್ನೂ ಮದುವೆ ಆಗಿಲಿರಲಿಲ್ಲ. ಇವರೆಲ್ಲಾ ಕೂಲಿ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಮಾಲತೇಶ ಮದುವೆಯಾಗಿ ಎರಡು ಮೂರು-ತಿಂಗಳಲ್ಲೇ ಮನೆ ಬಿಟ್ಟು ತನ್ನ ಹೆಂಡತಿಯನ್ನು ಕರೆದುಕೊಂಡು ತಮ್ಮ ಮೂಲ ಊರಾದ ಬೆಟಕೆರೂರಿಗೆ ಬಂದು ವಾಸ ಮಾಡುತ್ತಿದ್ದ. ಅಲ್ಲಿಂದ ಸುಮಾರು ನಾಲ್ಕಾರು ವರ್ಷ ಕಳೆದ ನಂತರ ಮಾಲತೇಶ ತನ್ನ ಹೆಂಡತಿ, ಮಕ್ಕಳನ್ನು ಕರೆದುಕೊಂಡು ಮತ್ತೆ ತನ್ನ ತಂದೆ ತಾಯಿ ಇದ್ದಲ್ಲಿಗೆ ಬಂದು ಉಳಿದುಕೊಂಡ.

ಮಾಲತೇಶನ ತಮ್ಮ ರಾಮಚಂದ್ರ ಮದುವೆ ಆದಾಗಿನಿಂದಲೂ ತನ್ನ ಅಣ್ಣನ ಹೆಂಡತಿ ಭಾಗ್ಯಳ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ. ಭಾಗ್ಯ ಮತ್ತು ರಾಮಚಂದ್ರ, ಮಾಲತೇಶ ಊರಲ್ಲಿ ಇಲ್ಲದಾಗ ಚಸ್ಕಾ ಮಸ್ಕಾ ಮಾಡುತ್ತಿದ್ದ ವಿಷಯ ಅದ್ಹೇಗೋ ಮಾಲತೇಶನಿಗೆ ಗೊತ್ತಾಗಿ ತನ್ನ ತಮ್ಮ ರಾಮಚಂದ್ರ ಮತ್ತು ತನ್ನ ಧರ್ಮಪತ್ನಿ ಭಾಗ್ಯಳಿಗೆ ಇನ್ನು ಮುಂದೆ ಈ ತರ ಆಗದಂತೆ ಹುಷಾರು ಅಂತಾ ಎಚ್ಚರಿಕೆ ಕೊಟ್ಟ. ಆದರೂ ಅತ್ತಿಗೆ, ಮೈದುನನ ಡಿಂಗ್ ಡಾಂಗ್ ನಿಲ್ಲಲಿಲ್ಲ. ಅದರಿಂದ ಇನ್ನೂ ಕ್ರೋಧಗೊಂಡ ಅಣ್ಣ ಮಾಲತೇಶ ಹಿರಿಯರಾದ ಪರಮೇಶ್ವರಪ್ಪ ಪುಟ್ಟಪ್ಪ, ಹನುಮಂತಪ್ಪ ಸಿದ್ದಪ್ಪ, ನಾಗಪ್ಪ ಬಿನ್ ವೀರಭದ್ರಪ್ಪ ಇವರನ್ನೆಲ್ಲಾ ಸೇರಿಸಿ ರಾಜಿಪಂಚಾಯ್ತಿ ಮಾಡಿಕೊಂಡ. ಆದರೂ ರಾಮಚಂದ್ರ, ಭಾಗ್ಯ ತೆಪ್ಪಗಾಗಲಿಲ್ಲ. ಆಗ ಮನುಷ್ಯತ್ವವನ್ನೇ ಕಳೆದುಕೊಂಡ ಅಣ್ಣ ಮಾಲತೇಶ ತಾನು ಸಮಾಧಾನ ಮಾಡಿಕೊಂಡಿದ್ದವರ ಹಾಗೆ ಸ್ವಲ್ಪ ದಿನ ಕಳೆದಿದ್ದಾನೆ. ನಂತರ ಅದೊಂದು ದಿನ ಮಾಲತೇಶನ ತಂದೆ ತಾಯಿ ಇದ್ಯಾಕೋ ಸರಿ ಹೋಗಲ್ಲಾ ನೀನು ನಿನ್ ಹೆಂಡ್ತಿ, ಮಕ್ಕಳ್ನಾ ಕರ್ಕೊಂಡು ಬೇರೆ ಕಡೆ ಕೆಲ್ಸಕ್ಕೆ ಹೋಗು ಅಂತಾ ಸೊರಬ ತಾಲೂಕಿನ ಜೇಡಗೆರೆಯಲ್ಲಿರೋ ಶಿವಮೊಗ್ಗದ ಮಂಜುನಾಥ ನಾಯ್ಕ ಅನ್ನುವರ ತೋಟದ ಮನೆಗೆ ಕಳಿಸಿದ್ದಾರೆ. ಆಗಲೂ ಸಹ ಮಾಲತೇಶ ಇಲ್ಲದ ಸಮಯ ನೋಡಿ ರಾಮಚಂದ್ರ ಅಲ್ಲಿಗೂ ಬಂದು ಭಾಗ್ಯಳ ಜೊತೆ ಅಕ್ರಮ ಸಂಬಂಧ ಮಾಡಿ ಹೋಗುತ್ತಿದ್ದಾನೆ ಅನ್ನೋ ವಿಷಯ ಮಾಲತೇಶನ ಕಿವಿಗೆ ಬಿದ್ದಿದೆ. ಇವರನ್ನ ರೆಡ್ ಹ್ಯಾಂಡಾಗಿ ಹಿಡಿಯೋಕೆ ಕಾಯುತ್ತಿದ್ದ ಮಾಲತೇಶನಿಗೆ ಭಾಗ್ಯ ಮತ್ತು ರಾಮಚಂದ್ರ ಅದೊಂದು ದಿನ ಸಿಕ್ಕಿಬಿದ್ದಿದ್ದಾರೆ. ತಕ್ಷಣ ಮಾಲತೇಶ ತನ್ನ ತಮ್ಮ ರಾಮಚಂದ್ರನನ್ನ ತೋಟದ ಮನೇಲಿ ಕೂಡಿ ಹಾಕಿ ತನ್ನ ಹೆಂಡತಿ ಭಾಗ್ಯಗೆ ಸರಿಯಾಗಿ ನೀರಿಳಿಸಿದ್ದಾನೆ. ಆಗ ಭಾಗ್ಯ ಇನ್ನು ಮುಂದೆ ಈ ತರಾ ಮಾಡಲ್ಲಾ ಅಂತಾ ತನ್ನ ಗಂಡನ ಕಾಲು ಹಿಡಿದುಕೊಂಡು ಅಂಗಲಾಚಿದಾಗ ಅವರಿಬ್ಬರಿಗೂ ಬುದ್ಧಿ ಹೇಳಿ ಮಾಲತೇಶ ಕಳಿಸಿದ್ದಾನೆ.

ಈ ಸಲ ಇಷ್ಟಕ್ಕೇ ಸುಮ್ಮನಾಗದ ಮಾಲತೇಶ ತನ್ನ ಹೆಂಡತಿ ಮತ್ತು ತನ್ನ ತಮ್ಮ ತನಗೆ ಯಾವುದೇ ಸಮಯದಲ್ಲಿ ಕೈಕೊಡಬಹುದಂದೆಣಿಸಿ ತಕ್ಕ ಸಮಯಕ್ಕಾಗಿ ಹೊಂಚು ಹಾಕುತ್ತಿದ್ದ. ಕಳೆದ ಏಳು ತಿಂಗಳುಗಳಿಂದ ಭಾಗ್ಯ ಸಾಗರದ ಗಾರ್ಮೆಂಟ್ ಒಂದರಲ್ಲಿ ಕೆಲಸಕ್ಕೆ ಸೇರಿಕೊಂಡಳು. ಇದೇ ಸಂದರ್ಭದಲ್ಲಿ ರಾಮಚಂದ್ರನಿಗೆ ಮದುವೆ ಮಾಡೋಕೆ ಹೆಣ್ಣು ಹುಡುಕುತ್ತಿದ್ದರು. ಆದರೆ ರಾಮಚಂದ್ರನಿಗೆ ಎಲ್ಲೂ ಹೆಣ್ಣು ಸೆಟ್ ಆಗ್ತಾನೇ ಇರಲಿಲ್ಲ. ಇದನ್ನೇ ಬಂಡವಾಳವನ್ನಾಗಿಟ್ಟುಕೊಂಡ ಮಾಲತೇಶ ನಿನಗೇನೋ ದೋಷವಿರಬಹುದು ಅದ್ಕೇ ನಿಂಗೆ ಹೆಣ್ಣು ಸಿಗ್ತಾ ಇಲ್ಲಾ, ಅದ್ಕೇನಾದ್ರೂ ಪರಿಹಾರ ಮಾಡೋಣ ಅಂತಾ ನಂಬಿಸಿದ್ದ. ಇದೇ ತಕ್ಕ ಸಮಯ ಹಾಗೂ ಭಾಗ್ಯಾನೂ ಇರೋಲ್ಲಾ ಸಾಗರಕ್ಕೆ ಕೆಲಸಕ್ಕೆ ಹೋಗುತ್ತಾಳೆ. ರಾಮಚಂದ್ರನನ್ನ ಮುಗಿಸಿ ಹೂತುಬಿಡೋಣ ಅಂತಾ ಉಪಾಯ ಮಾಡಿ ಜೇಡಗೆರೆ ತೋಟದಲ್ಲೇ ಒಂದು ಗುಂಡೀನೂ ತೋಡಿಟ್ಟ.



ಎಸ್ಪಿ ಮಿಥುನ್‌ಕುಮಾರ್

ಒಂದು ದಿನ ಅಂದ್ರೆ 8/9/25ಕ್ಕೆ ತನ್ನ ತಮ್ಮ ರಾಮಚಂದ್ರನಿಗೆ ಫೋನ್ ಮಾಡಿ ತೊಗರ್ಸಿಗೆ ಬಾ ನಾನು ಅಲ್ಲಿಗೆ ಬಂದು ನಿನ್ನಾ ಕರ್ಕೊಂಡು ಹೋಗ್ತೇನಂತಾ ಹೇಳಿ ರಾಮಚಂದ್ರ ಬಂದ ನಂತರ ಮಾಲತೇಶ ತೊಗರ್ಸಿಗೆ ಹೋಗಿ, ಅಲ್ಲಿ ಕೊಳಗಿ ಗ್ರಾಮದ ಮಾರುತಿ ಅನ್ನೋ ಇವರ ಸ್ನೇಹಿತ ಟೈಲರಿಂಗ್ ಶಾಪ್ ಇಟ್ಟುಕೊಂಡಿದ್ದ. ಅವನನ್ನೂ ಮಾತಾಡಿಸಿ, ತನ್ನ ತಮ್ಮನ ಬೈಕನ್ನು ಮಾರುತಿಯ ಅಂಗಡಿ ಮುಂದೆ ನಿಲ್ಸಿಸಿ ಬೆಳಗಿನ 10.45ರ ಹೊತ್ತಿಗೆ ತನ್ನ ಬೈಕ್ ಹಿರೋಹೊಂಡಾ ಫ್ಯಾಷನ್ ಪ್ಲಸ್ (ಕೆಎ-20 ವಿ-2251) ನಲ್ಲಿ ರಾಮಚಂದ್ರನನ್ನ ಕೂರಿಸಿಕೊಂಡು ಸೊರಬಕ್ಕೆ ಬಂದು ಅಲ್ಲಿ ಎಗ್‌ರೈಸ್ ಮತ್ತು ಮಧ್ಯ ಪಾರ್ಸಲ್ ತೆಗೆದುಕೊಂಡು ಜೇಡಗೆರೆ ತೋಟದ ಮನೆಗೆ ಬಂದಿದ್ದಾರೆ. ಭಾಗ್ಯ ಕೆಲಸಕ್ಕೆ ಸಾಗರಕ್ಕೆ ಹೋಗಿದ್ದರೆ ಮಕ್ಕಳು ಶಾಲೆಗೆ ಹೋಗಿದ್ದಾರೆ. ಮಾಲತೇಶ ಮದ್ಯವನ್ನ ರಾಮಚಂದ್ರನಿಗೆ ಕುಡಿಯುವುದಕೆ ಕೊಟ್ಟಿದ್ದಾನೆ. ಆದರೆ ರಾಮಚಂದ್ರ ಅಣ್ಣಾ ನೀನೂ ಕುಡಿ ಅಂತಾ ಹೇಳಿದಕ್ಕೆ ಮಾಲತೇಶ ಸ್ವಲ್ಪ ಮಾತ್ರ ಕುಡಿದಿದ್ದಾನೆ. ನಂತರ ಎಲ್ಲ ಮದ್ಯವನ್ನೂ ರಾಮಚಂದ್ರನಿಗೇ ಕುಡಿಸಿದ್ದಾನೆ. ನಂತರ ಅಣ್ಣ-ತಮ್ಮ ಇಬ್ಬರೂ ಎಗ್‌ರೈಸ್ ತಿಂದಿದ್ದಾರೆ.

ಆಗ ಮಧ್ಯಾಹ್ನ 12.30ರ ಹೊತ್ತು ಮಾಲತೇಶ ತನ್ನ ತಮ್ಮ ರಾಮಚಂದ್ರನಿಗೆ ಬಾ ಪೂಜೆ ಮಾಡೋಣ ಅಂತಾ ಮನೇಲಿದ್ದ ನಿಂಬೆ ಹಣ್ಣು, ಹಸಿರು ಬಟ್ಟೆ ತೆಗೆದುಕೊಂಡು ತೋಟಕ್ಕೆ ಕರೆದುಕೊಂಡು ಹೋಗಿ ಅಲ್ಲೇ ಇದ್ದ ಮತ್ತಿ ಮರದ ಕೆಳಗೆ ಕೂರಿಸಿ ತನ್ನ ತಮ್ಮನ ಎರಡೂ ಕೈಗಳನ್ನ ಅಗಲವಾಗಿ ಚಾಚಿಸಿ ಒಂದು ಕೋಲನ್ನು ಅಡ್ಡವಾಗಿಟ್ಟು ಕೈಗಳನ್ನು ಕೋಲಿಗೆ ಸೇರಿಸಿ ಅಡ್ಡವಾಗಿ ತಾನು ಮೊದಲೇ ತಂದಿಟ್ಟಿದ್ದ ಹಗ್ಗದಿಂದ ಕಟ್ಟಿ ನಿಂಬೆ ಹಣ್ಣುಗಳನ್ನು ಹಸಿರು ಬಟ್ಟೆಯಿಂದ ಎರಡೂ ಕೈ ಮತ್ತು ಕಾಲುಗಳಿಗೆ ಕಟ್ಟಿ ನಂತರ ಪೂಜೆ ಮಾಡಿದ ಹಾಗೆ ನಟಿಸಿ ಮರಕ್ಕೆ ಸುತ್ತು ಹಾಕಿಸಿ ಮತ್ತೆ ಮರದ ಬುಡಕ್ಕೆ ಒರಗಿಸಿ ನಿಲ್ಲಿಸಿ ರಾಮಚಂದ್ರನ ಕಣ್ಣಿಗೂ ಟವೆಲ್‌ನಿಂದ ಕಟ್ಟಿ, ಅವನ ಬಾಯಿಗೆ ನಿಂಬೆ ಹಣ್ಣನ್ನು ತುರುಕಿ, ಮಾಲತೇಶ ತಾನು ಮೊದ್ಲೇ ತಂದಿಟ್ಕೊಂಡಿದ್ದ ಪ್ಲಾಸ್ಟಿಕ್ ಹಗ್ಗವನ್ನ ರಾಮಚಂದ್ರನ ಕುತ್ತಿಗೆಗೆ ಬಿಗಿದು ಮರಕ್ಕೆ ಸುತ್ತಿ ಅವನು ಸಾಯುವವರೆಗೂ ಬಿಗಿಯಾಗಿ ಹಿಡಿದೆಳೆದು ನಂತರ ರಾಮಚಂದ್ರ ಸತ್ತಿದ್ದಾನೋ ಬದುಕಿದ್ದಾನೋ ಅಂತಾ ನೋಡಿ ಮತ್ತೆ ಕುತ್ತಿಗೆಗೆ ಹಗ್ಗ ಹಾಕಿ ಎಳೆದು ಸಾಯಿಸಿ ಆಮೇಲೆ ಅವನ ಕೈಗಳಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿದ್ದಾನೆ. ಅಷ್ಟೇ ಅಲ್ಲ. ಅವನ ಪ್ಯಾಂಟ್, ಶರ್ಟ್ ಬಿಚ್ಚಿ ಅವನ ಮರ್ಮಾಂಗಕ್ಕೆ ಝಾಡಿಸಿ ಎರಡು ಮೂರು ಸಲ ಒದ್ದಿದ್ದಾನೆ. ನಂತರ ಕುತ್ತಿಗೆಗೆ ಹಗ್ಗ ಬಿಗಿದು ಧರಧರನೆ ಎಳೆದುಕೊಂಡು ಹೋಗಿ ತಾನು ಮೊದಲೇ ತೋಡಿಟ್ಟಿದ್ದ ಗುಂಡಿಯಲ್ಲಿ ಶವದ ಕುತ್ತಿಗೆಯಲ್ಲಿದ್ದ ಹಗ್ಗ, ಕೈಗಳಿಗೆ ಕಾಲುಗಳಿಗೆ ನಿಂಬೆ ಹಣ್ಣು ಕಟ್ಟಿದ್ದ ಹಸಿರು ಬಟ್ಟೆ, ಕಣ್ಣಿಗೆ ಕಟ್ಟಿದ್ದ ಟವೆಲ್ ಸಹಿತ ತನ್ನ ತಮ್ಮನ ದೇಹವನ್ನು ಗುಂಡಿಯಲ್ಲಿ ಹಾಕಿ ಮುಚ್ಚಿ ತನ್ನ ಮನೆಗೆ ಬಂದು ಅವನ ಪ್ಯಾಂಟ್, ಶರ್ಟ್, ಕೈಗೆ ಕಟ್ಟಿದ್ದ ದೊಣ್ಣೆ, ತಮ್ಮನ ಬೈಕ್‌ನ ಚಾವಿ, ಕೈಗಳಿಗೆ ಕಟ್ಟಿದ್ದ ಹಗ್ಗ ಇವಕ್ಕೆಲ್ಲಾ ಬೆಂಕಿ ಹಾಕಿ ಸುಟ್ಟಿದ್ದಾನೆ. ಆಗ ಮಧ್ಯಾಹ್ನ ಮೂರು ಘಂಟೆ ಸುಮಾರಾಗಿದೆ. ನಂತರ ಏನೂ ಆಗೇ ಇಲ್ಲಾ ಅನ್ನೋತರ ಮನೆಗೆ ಬಂದಿದ್ದಾನೆ.

ಸಾಯಂಕಾಲ ತನ್ನ ಹೆಂಡತಿ, ಮಕ್ಕಳು ಮನೆಗೆ ಬಂದರೂ ಏನೂ ನಡೆದೇ ಇಲ್ಲಾ ಅನ್ನೋ ಹಾಗೆ ಪ್ರತಿನಿತ್ಯ ಇರೋಹಾಗೇ ಇದ್ದ. ನಂತರ ಟೈಲರ್‌ಮಾರುತಿಗೆ

☞ 14

# ಸೌಜನ್ಯ ಫೈಲ್ಸ್



14

ನಿರೂಪಣೆ :

ಮೋಹನ್ ಬೋಳಂಗಡಿ

## ಐನೂರು ಮಂದಿ ಹುಡುಕಾಡಿದರೂ ಸೌಜನ್ಯ ಸಿಗಲೇ ಇಲ್ಲ!

ಸೌಜನ್ಯ ಪ್ರಕರಣದ ಮತ್ತೊಬ್ಬ ಪ್ರಮುಖ ಸಾಕ್ಷಿ ವಿಠಲಗೌಡ. ಸೌಜನ್ಯ ತಾಯಿ ಕುಸುಮಾವತಿ ಅವರ ಸಹೋದರ. ಸೌಜನ್ಯ ನಾಪತ್ತೆಯಾದ ದಿನದಂದು ಅಂದರೆ 9.10.2012ರಂದು ಸೌಜನ್ಯಳನ್ನು ಜೀವಂತವಾಗಿ ಕೊನೆಯಬಾರಿ ನೋಡಿದವರು. ವಿಠಲಗೌಡ ಅವರು ತನ್ನ ಸಹೋದರಿ ಯಶೋಧ ಮತ್ತು ಇತರರನ್ನು ತನ್ನ ಜೀಪಿನಲ್ಲಿ ಮನೆಯಿಂದ ನೇತ್ರಾವತಿ ಸ್ನಾನಘಟ್ಟದ ಬಳಿಯ ಬಸ್ ನಿಲ್ದಾಣಕ್ಕೆ ಬಿಟ್ಟು ಬರಲು ಬರುತ್ತಿದ್ದಾಗ ಸೌಜನ್ಯ ವಿರುದ್ಧ ದಿಕ್ಕಿನಲ್ಲಿ ಮನೆ ಕಡೆಗೆ ನಡೆದುಕೊಂಡು ಹೋಗುತ್ತಿದ್ದಳು. ಆಕೆಯನ್ನು ನೋಡಿ ವಿಠಲಗೌಡರು ಕೈಯಲ್ಲಿ ವಿಶ್ ಮಾಡಿದ್ದರು. ಸೌಜನ್ಯ ಸಂಜೆ 6 ಗಂಟೆಯಾದರೂ ಮನೆಗೆ ಬಾರದೇ ಇದ್ದಾಗ ತಾಯಿ ಕುಸುಮಾವತಿಯವರು ಮೊದಲು ಕರೆ ಮಾಡಿ ವಿಚಾರಿಸಿದ್ದೇ ತನ್ನ ಸಹೋದರನಾದ ವಿಠಲಗೌಡರನ್ನು. ಸಾಮಾನ್ಯವಾಗಿ ಕಾಲೇಜಿನಿಂದ ಬರುತ್ತಿದ್ದ ಸೌಜನ್ಯ ಸ್ನಾನಘಟ್ಟದ ಬಳಿ ಇದ್ದ ವಿಠಲಗೌಡರ ಹೊಟೇಲ್‌ನಲ್ಲಿ ಸ್ವಲ್ಪ ಹೊತ್ತು ಇರುತ್ತಿದ್ದಳು. ತದನಂತರ ಆಕೆಯನ್ನು ಮನೆಗೆ ಕರೆದುಕೊಂಡು ಹೋಗುತ್ತಿದ್ದದ್ದು ವಿಠಲಗೌಡರು. ಅವರ ಬಳಿ ಜೀಪು, ಬೈಕ್ ಇತ್ತು. ಆದರೆ ಆ ದಿನ ಮನೆಯಲ್ಲಿ ಹೊಸ ಅಕ್ಕಿ ಊಟ ಇದ್ದುದರಿಂದ ನೆಂಟರಿಷ್ಟರು ಬಂದಿದ್ದರು. ಅವರನ್ನು ಡ್ರಾಪ್ ಮಾಡಲು ಇದ್ದುದರಿಂದ ವಿಠಲಗೌಡರು ಜೀಪಿನಲ್ಲಿ ಬಂದಿದ್ದರು ಮತ್ತು ಸೌಜನ್ಯಳನ್ನು ಮನೆಗೆ ಕರೆದುಕೊಂಡು ಹೋಗಲು ಸಾಧ್ಯವಾಗಿರಲಿಲ್ಲ. ಸೌಜನ್ಯ ನಾಪತ್ತೆಯಾಗಿದ್ದಾಳೆ ಎಂಬ ಮಾಹಿತಿ ಸಿಕ್ಕಿದ ಕೂಡಲೇ ವಿಠಲಗೌಡರು ಭಾವ ಚಂದಪ್ಪಗೌಡರೊಂದಿಗೆ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಹೋಗಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರಿಗೆ ಮಾಹಿತಿ ನೀಡಿದ್ದರು. ಅವರು ಸೂಚಿಸಿದಂತೆ ಬೆಳ್ತಂಗಡಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದರು. ಚಂದಪ್ಪಗೌಡರು ತನ್ನ ಸ್ವ ಹಸ್ತಾಕ್ಷರದಲ್ಲಿ ಪೊಲೀಸ್ ಠಾಣೆಯಲ್ಲಿ ದೂರು ನೀಡುವ ಸಂದರ್ಭದಲ್ಲಿ ಉಪಸ್ಥಿತರಿದ್ದವರು ವಿಠಲಗೌಡರು. ಆದ್ದರಿಂದ ಈ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಅವರ ಹೇಳಿಕೆ ಪ್ರಮುಖವಾಗಿತ್ತು. ಆದ್ದರಿಂದ ಸ್ಥಳೀಯ ಪೊಲೀಸರು, ಸಿಓಡಿ ಅಧಿಕಾರಿಗಳು ಮತ್ತು ಸಿಬಿಐ ಅಧಿಕಾರಿಗಳು ಅವರ ಹೇಳಿಕೆಯನ್ನು ಪಡೆದುಕೊಂಡಿದ್ದರು ಮತ್ತು ಆ ಪ್ರಕರಣದಲ್ಲಿ ಅವರನ್ನು ಮೂರನೇ ಸಾಕ್ಷಿಯನ್ನಾಗಿ ಗುರುತಿಸಿದ್ದರು.



ಕುಸುಮಾವತಿ

2016 ಅಕ್ಟೋಬರ್ 24ರಂದು ವಿಠಲಗೌಡ ಅವರಿಗೆ ಸೌಜನ್ಯ ಪ್ರಕರಣದಲ್ಲಿ ಸಾಕ್ಷ್ಯ ದಾಖಲಿಸುವಂತೆ ಬೆಂಗಳೂರಿನ 50ನೇ ಹೆಚ್ಚುವರಿ ನಗರ ಮತ್ತು ಸಿವಿಲ್ ನ್ಯಾಯಾಲಯ ಸಮನ್ಸ್ ನೀಡಿತ್ತು. ಆ ನ್ಯಾಯಾಲಯದಲ್ಲಿ ಸ್ಪೆಷಲ್ ಸಿಸಿನಂಬ್ರ 203/2016ರ ವಿಚಾರಣೆ ಆರಂಭವಾಗಿತ್ತು. ಈಗಾಗಲೇ ಮೂಲ ದೂರುದಾರರಾದ ಚಂದಪ್ಪ ಗೌಡ ಮತ್ತು ಕೊಲೆ ಅತ್ಯಾಚಾರದ ಬಗ್ಗೆ ದೂರು ನೀಡಿದ್ದ ಜಗದೀಶ್ ಅವರ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲು ಒಂದು ಹಂತಕ್ಕೆ ಮುಗಿದಿತ್ತು. ಅವರಿಬ್ಬರು ಸಹ ಪ್ರಾಸಿಕ್ಯೂಷನ್‌ಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದರೂ ಸಹ ಅವರನ್ನು ಪ್ರಾಸಿಕ್ಯೂಷನ್ ಪರ ವಕೀಲರು ವಿಚಾರಣೆಗೆ ಗುರಿಪಡಿಸಿರಲಿಲ್ಲ. ಆದ್ದರಿಂದ ಆ ಪ್ರಕರಣದ ಮೂರನೇ ಸಾಕ್ಷಿ ವಿಠಲಗೌಡರ ಹೇಳಿಕೆ ಮುಖ್ಯವಾಗಿತ್ತು.

ವಿಠಲಗೌಡರು ತನ್ನ ಮುಖ್ಯ ವಿಚಾರಣೆಯಲ್ಲಿ 'ನಾನು ಕಳೆದ 12 ವರ್ಷಗಳಿಂದ ಧರ್ಮಸ್ಥಳದ ನೇತ್ರಾವತಿ ಬಸ್ ನಿಲ್ದಾಣದ ಬಳಿ ಸುಪ್ರಭಾತ ಎಂಬ ಹೆಸರಿನ ಹೊಟೇಲು ನಡೆಸುತ್ತಿದ್ದೇನೆ. ಈ ಪ್ರಕರಣದ ಮೊದಲ ಸಾಕ್ಷಿ ಚಂದಪ್ಪ ಗೌಡ ನನ್ನ ಅಕ್ಕನ ಗಂಡ. ಅವರ ಮಗಳು ಸೌಜನ್ಯ ನನ್ನ ಸೊಸೆ. ಉಜಿರೆಯ ಎಸ್.ಡಿ.ಎಂ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದಳು. ದಿನಾಂಕ 9.10.2012 ರಂದು ನಮ್ಮ ಮನೆಯಲ್ಲಿ ಹೊಸ ಅಕ್ಕಿ ಊಟ ಸಮಾರಂಭವಿತ್ತು. ನಮ್ಮ ಹೊಟೇಲು ಸಾಮಾನ್ಯವಾಗಿ ಬೆಳಿಗ್ಗೆ 5.00 ರಿಂದ ಸಂಜೆ 7.00 ಗಂಟೆಯುವರೆಗೆ ಇರುತ್ತದೆ. ಆದರೆ ಆ ದಿನ ಬೆಳಿಗ್ಗೆ 5.00 ಗಂಟೆಯಿಂದ 11.00 ಗಂಟೆಯವರೆಗೆ ಮಾತ್ರ ಹೊಟೇಲ್ ನಡೆಸಿದೆ. ನಾನು 11.00 ಗಂಟೆಗೆ ಹೊಟೇಲು ಮುಚ್ಚಿ ಮನೆಯ ಕಾರ್ಯಕ್ರಮಕ್ಕೆ ಹೋದೆ. ಸಮಾರಂಭ ಮುಗಿಸಿಕೊಂಡು ಸಂಜೆ 4.00 ಗಂಟೆಗೆ ಮನೆಯಿಂದ ನನ್ನ ಹೊಟೇಲಿಗೆ ನಾನು ನನ್ನ ಅಕ್ಕ ಯಶೋಧ ನನ್ನ ತಮ್ಮ ಪುರಂದರಗೌಡ ಅವರ ಮಕ್ಕಳು ಜೀಪಿನಲ್ಲಿ ಬಂದೆವು. ಈ ರೀತಿ ನಾವು ಬರುವಾಗ ಸೌಜನ್ಯ ನಮ್ಮ ಮನೆ ಕಡೆಗೆ ನಡೆದುಕೊಂಡು ಹೋಗುತ್ತಿದ್ದಳು. ಆ ದಿನ ಆಕೆ ನಮ್ಮ ಮನೆಗೆ ಸಮಾರಂಭಕ್ಕೆ ಬರುವವಳಿದ್ದಳು. ನಾನು ಸೌಜನ್ಯಳಿಗೆ ವಿಶ್ ಮಾಡಿದೆ. ನಮ್ಮ ಹೊಟೇಲಿಗೆ 4.15ರಿಂದ 4.30ರ ವೇಳೆಗೆ ಮುಟ್ಟಿದೆ, ಸಂಜೆ 6.00 ಗಂಟೆಗೆ ನನ್ನ ಅಕ್ಕ ಕುಸುಮಾವತಿ ಅಂದರೆ ಸೌಜನ್ಯಳ ತಾಯಿ ಫೋನ್ ಮಾಡಿ ಸಂಜೆ 6.00 ಗಂಟೆ ಆದರೂ ಸೌಜನ್ಯ ಮನೆಗೆ ಬಂದಿಲ್ಲ ಎಂದು ಹೇಳಿದಳು. ಆಗ ನಾನು ಸುಮಾರು 4.15 ಗಂಟೆಗೆ ಸೌಜನ್ಯಳಿಗೆ ವಿಶ್ ಮಾಡಿದೆ. ಆಕೆ ಮನೆ ಕ ಹೋಗಿದ್ದಳು ಎಂದು ಹೇಳಿದೆ. ನಂತರ ನಾವು ನಮ್ಮ ಹೊಟೇಲು ಮುಚ್ಚಿ ನೇತ್ರಾವತಿ ಸ್ನಾನಘಟ್ಟದಿಂದ ಮಣ್ಣಸಂಕದವರೆಗೆ ಸಂಜೆ 6.00ರಿಂದ ರಾತ್ರಿ 12.00 ಗಂಟೆಯುವರೆಗೆ ಹುಡುಕಾಡಿದೆವು. ನಮಗೆ ಯಾವುದೇ ಮಾಹಿತಿ ಸಿಗಲಿಲ್ಲ. ನಂತರ ಬೆಳ್ತಂಗಡಿ ಠಾಣೆಗೆ ಹೋಗಿ ಮಾಹಿತಿ ಕೊಟ್ಟೆವು. ಅವರು ಸೌಜನ್ಯಳ ಫೋಟೋ ತೆಗೆದುಕೊಂಡು ನಾಳೆ ಬನ್ನಿ ಎಂದು ಹೇಳಿದರು. ಮಾರನೇಯ ದಿನ ಬೆಳಿಗ್ಗೆ ನಾನು ಮತ್ತು ಜಗದೀಶ್ ಬೆಳ್ತಂಗಡಿ ಪೊಲೀಸ್ ಠಾಣೆಗೆ ಹೋಗಿ ಸೌಜನ್ಯಳ ಫೋಟೋ ಕೊಟ್ಟೆವು. ಅಲ್ಲಿಂದ ಸೀದಾ ಎಸ್‌ಡಿಎಂ ಕಾಲೇಜಿಗೆ ಬಂದೆವು. ಪ್ರಿನ್ಸಿಪಾಲರನ್ನು ವಿಚಾರಣೆ ಮಾಡಿದಾಗ ಸೌಜನ್ಯ ಒಳ್ಳೇ ಹುಡುಗಿ ಆಕೆ ಹಾಗೆಲ್ಲ ಹೋಗುವುದಿಲ್ಲ ಎಂದು ಹೇಳಿದರು. ಆಗ ಪಿಎಸ್‌ಐಯವರು ಫೋನ್ ಮಾಡಿ ಸೌಜನ್ಯಳ ಶವ ಸಿಕ್ಕಿದೆ ಎಂದು ಹೇಳಿದರು. ನಾವು ನಂತರ ಮಣ್ಣಸಂಕಕ್ಕೆ ಶವ ಇದ್ದ ಜಾಗಕ್ಕೆ ಹೋದೆವು. ಅಲ್ಲಿ ಬಹಳ ಜನ ಸೇರಿದ್ದರು. ಶವವನ್ನು ನೋಡಿದಾಗ ಅದು ಸೌಜನ್ಯಳದ್ದೇ ಶವ ಎಂದು ಗೊತ್ತಾಯಿತು. ಶವ ಅರೆನಗ್ನ ಸ್ಥಿತಿಯಲ್ಲಿತ್ತು. ಬಟ್ಟೆ ಹರಿದಿತ್ತು. ಸೌಜನ್ಯಳನ್ನು ಅತ್ಯಾಚಾರ ಮಾಡಿ ಆಕೆ ಧರಿಸಿದ್ದ ಐಡಿ ಕಾರ್ಡ್‌ನ ಟ್ಯಾಗ್‌ನಿಂದ ಕುತ್ತಿಗೆ ಬಿಗಿದಿದ್ದು, ಉಸಿರುಗಟ್ಟಿಸಿ ಕೊಲೆ ಮಾಡಿದ್ದರು.



ಚಂದಪ್ಪ ಗೌಡ



ವಿಠಲಗೌಡ

ನಂತರ ಶವವನ್ನು ಪೋಸ್ಟ್ ಮಾರ್ಟಂಗೆ ತೆಗೆದುಕೊಂಡು ಹೋದರು. ನಮಗೆ ಮಲ್ಲಿಕ್‌ಜೈನ್, ಧೀರಜ್ ಜೈನ್ ಮತ್ತು ಉದಯ್ ಜೈನ್, ನಿಶ್ಚಲ್ ಕುಮಾರ್‌ರವರುಗಳ ಮೇಲೆ ಅನುಮಾನ ಬಂತು. ಅವರೆಲ್ಲರೂ ಧರ್ಮಸ್ಥಳದವರು.

ದಿನಾಂಕ 9.10.2012 ರಂದು ನನ್ನ ಅಕ್ಕ ಯಶೋಧ ಮನೆಗೆ ಬರುತ್ತಿದ್ದಾಗ ಎರಡು ಬೈಕ್‌ಗಳಲ್ಲಿ ನಾಲ್ಕು ಜನ ಇದ್ದು ಆ ಪೈಕಿ ಧೀರಜ್ ಜೈನ್, ಮಲ್ಲಿಕ್ ಜೈನ್ ಮತ್ತು ಉದಯ್ ಜೈನ್ ಅವರುಗಳು ಸ್ಪಷ್ಟವಾಗಿ ಗೊತ್ತಾಗಿತ್ತು. ಅವರುಗಳು ಈಗ ಮಧ್ಯಾಹ್ನ ಆಗಿದೆ. ಈಗ ಆಗುವುದಿಲ್ಲ ಕಷ್ಟವಾಗಿದೆ ಎಂದು ಮಾತನಾಡಿಕೊಳ್ಳುತ್ತಿದ್ದು, ಅದು ಆಕೆಯ ಕಿವಿಗೆ ಬಿತ್ತು ಎಂದು ಹೇಳಿದರು. ಆ ದಿನ ಮಧ್ಯಾಹ್ನ ಎರಡು ಗಂಟೆಯಿಂದ ಶುರುವಾಗಿದ್ದ ಮಳೆ ರಾತ್ರಿ 12.00 ಗಂಟೆಯವರೆಗೂ ಹಿಂದಿನ ದಿನವೂ ಸಹ ನಾವು ಅದೇ ಸ್ಥಳದಲ್ಲಿ ಸುಮಾರು 500 ಜನ ಹುಡುಕಾಡಿದರೂ ಶವ ಸಿಕ್ಕಿರಲಿಲ್ಲ. ಆ ಸ್ಥಳದಲ್ಲಿ ಕಾಡು ಇತ್ತು. ಅಷ್ಟು ಮಳೆ ಬಂದಿದ್ದರೂ ಸಹ ಪುಸ್ತಕ ಮತ್ತು ಆಕೆಯ ಬಟ್ಟೆ ಒದ್ದೆಯಾಗಿರಲಿಲ್ಲ. ಈ ಎಲ್ಲಾ ಕಾರಣಗಳಿಂದ ನಮಗೆ ಆ ನಾಲ್ಕು ಜನರ ಮೇಲೆ ಅನುಮಾನ ಬಂತು. ನಾವು ಪೊಲೀಸರಿಗೆ ಆ ನಾಲ್ಕು ಜನರ ಹೆಸರು ಹೇಳಿದ್ದೆವು. ಆ ನಾಲ್ಕು ಜನರ ಬಗ್ಗೆ ಬೆಳ್ತಂಗಡಿ ಪೊಲೀಸರು ಯಾವುದೇ ತನಿಖೆ ಮಾಡಲಿಲ್ಲ. ನಂತರ ಆರೋಪಿಯ ಬಗ್ಗೆ ನಮಗೆ ಗೊತ್ತಾಯಿತು. ಘಟನೆಯ ಮೊದಲು ನಾವು ಆರೋಪಿಯನ್ನು ಅಲ್ಲಿ ಎಲ್ಲಿಯೂ ನೋಡಿರಲಿಲ್ಲ. ಆನಂತರ ಪೊಲೀಸ್ ಠಾಣೆಯಲ್ಲಿ ನೋಡಿದೆವು. ಮಲ್ಲಿಕ್ ಜೈನ್ ಮತ್ತು ಧೀರಜ್ ಜೈನ್ ಅವರುಗಳೇ ಆರೋಪಿಯನ್ನು ಧರ್ಮಸ್ಥಳದ ಬಾಹುಬಲಿ ಬೆಟ್ಟದ ಬಳಿ ಆರೋಪಿಯನ್ನು ಹಿಡಿದು ತಂದು ಪೊಲೀಸರಿಗೆ ಒಪ್ಪಿಸಿದರು. ಹನ್ನೊಂದನೇ ತಾರೀಕಿನಂದು ಆ ನಾಲ್ಕು ಜನರ ಹೆಸರನ್ನು ಪೊಲೀಸರಿಗೆ ಹೇಳಿದ್ದೆವು. ಬೆಳ್ತಂಗಡಿ ಪೊಲೀಸರು ಸಿಐಡಿ ಮತ್ತು ಸಿಬಿಐ ಪೊಲೀಸರು ನಮ್ಮ ವಿಚಾರಣೆ ಮಾಡಿದರು.'

ಈ ರೀತಿಯಾಗಿ ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ್ದ ವಿಠಲಗೌಡರನ್ನು ಆರೋಪಿ ಪರ ವಕೀಲರಾದ ಮೋಹಿತ್ ಕುಮಾರ್ ಪಾಟೀ ಸವಾಲಿಗೆ ಗುರಿಪಡಿಸಿದರು. ನಮ್ಮ ಮನೆ ನೇತ್ರಾವತಿ ಸ್ನಾನಘಟ್ಟದಿಂದ ಧರ್ಮಸ್ಥಳಕ್ಕೆ ಹೋಗುವ ದಾರಿಯಲ್ಲಿ ಬಲಗಡೆ ಎರಡು ಕಿ.ಮೀ. ಅಂತರದಲ್ಲಿದೆ. ನೇತ್ರಾವತಿ ಸ್ನಾನಘಟ್ಟದಿಂದ ಪ್ರಕೃತಿ ಚಿಕಿತ್ಸಾ ಕೇಂದ್ರ 600 ರಿಂದ 700 ಮೀಟರ್ ದೂರದಲ್ಲಿದೆ. ಪ್ರಕೃತಿ ಚಿಕಿತ್ಸಾಲಯದ ಗೇಟ್‌ನಲ್ಲಿ ವಾಚ್‌ಮೆನ್‌ಗಳು ಇದ್ದಾರೆ. ಅಲ್ಲಿ ಸಿಸಿ ಕ್ಯಾಮೆರಾಗಳು ಇರುವ ಬಗ್ಗೆ ಗೊತ್ತಿಲ್ಲ. ನಾವು 9ನೇ ತಾರೀಕಿನಂದು ಸುಮಾರು 500 ಜನ ಸೇರಿಕೊಂಡು ಕಾಡಿನಲ್ಲಿ ಸಂಪೂರ್ಣವಾಗಿ ಹುಡುಕಾಡಿದ್ದೆವು. ನಮ್ಮ ಅಕ್ಕ ಯಶೋದ ಆ ನಾಲ್ಕು ಜನ ವ್ಯಕ್ತಿಗಳು ಮಾತನಾಡುತ್ತಿದ್ದ ವಿಷಯವನ್ನು 11ನೇ ತಾರೀಕಿನಂದು ಬೆಳಿಗ್ಗೆ ಮತ್ತು ಮಧ್ಯಾಹ್ನದ ಮಧ್ಯೆ ಹೇಳಿದ್ದಾಳೆ. ಸೌಜನ್ಯಳ ಒಳ ಉಡುಪನ್ನು ಪೊಲೀಸರು ಮನೆಯಿಂದ ತರಿಸಿಕೊಂಡಿದ್ದರು. ಆ ದಿನ ಸೌಜನ್ಯ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ ಮಳೆ ಬರುತ್ತಿತ್ತು. ಆದರೆ ಆಕೆಯ ಬಳಿ ಕೊಡೆ ಇತ್ತು. ಮಣ್ಣಸಂಕದ ಡಿ.ಎಸ್. ಭಟ್ ಎನ್ನುವವರ ಮನೆ ಇದೆ. ಅವರು ಕೃಷಿ ಕೆಲಸ ಮಾಡುತ್ತಾರೆ.



ಧೀರಜ್ ಜೈನ್



ಮಲ್ಲಿಕ್ ಜೈನ್

ವಿಠಲಗೌಡರು ಹತ್ಯೆಯಾದ ಸೌಜನ್ಯಳ ಸೋದರ ಮಾವ. ಆಕೆ ನಾಪತ್ತೆಯಾದ ದಿನದಿಂದ ನಿರಂತರವಾಗಿ ಆಕೆಯ ಮನೆಯವರೊಂದಿಗೆ ಸಂಪರ್ಕದಲ್ಲಿ ಇದ್ದವರು. ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗಲೂ ಜತೆಯಲ್ಲೇ ಇದ್ದವರು. ಇವರು ಘಟನೆ ನಡೆದು ನಾಲ್ಕು ವರ್ಷಗಳ ನಂತರ ನ್ಯಾಯಾಲಯದಲ್ಲಿ ಮುಖ್ಯ ವಿಚಾರಣೆಯಲ್ಲಿ ನಾಲ್ಕು ಮಂದಿ ಯುವಕರ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಆದರೆ ಅವರು ಘಟನೆ ನಡೆದ ಸಂದರ್ಭದಲ್ಲಿ ಪೊಲೀಸರ ತನಿಖೆಯ ಹಂತದಲ್ಲಿ ಯಾವ ಹೇಳಿಕೆ ನೀಡಿದ್ದರು ಎನ್ನುವುದು ಪ್ರಸ್ತುತವಾಗುತ್ತಿದೆ. ಇಡೀ ಪ್ರಕರಣವನ್ನು ತಿರುಚಿ ಆರೋಪಿಯನ್ನು ಯಾವ ರೀತಿಯಲ್ಲಿ ರಕ್ಷಿಸಲು ಸೌಜನ್ಯ ಮನೆಯವರು ಸಂಚು ಹೂಡಿದ್ದರು ಎನ್ನುವುದಕ್ಕೆ ಇದು ಸಾಕ್ಷಿಯಾಗುತ್ತದೆ. ಹಾಗಾದರೆ ತನಿಖೆಯ ಸಂದರ್ಭದಲ್ಲಿ ವಿಠಲಗೌಡರು ಕೊಟ್ಟ ಹೇಳಿಕೆ ಏನು? ಎನ್ನುವುದನ್ನು ಬಹಿರಂಗಪಡಿಸಲಾಗುತ್ತಿದೆ.

ಮುಂದುವರಿಯುವುದು.....

# ಸಲಿಂಗಕಾಮಿ ರಿಕ್ಷಾ ಚಾಲಕನನ್ನು ಬಡಿದೇ ಕೊಂದರು!

**ದಕ್ಷಿಣ ಕನ್ನಡ ಜಿಲ್ಲೆಯ ಕೊನೆಯ ತಾಲೂಕು ಸುಳ್ಯ. ಇಲ್ಲಿನ ರಿಕ್ಷಾಚಾಲಕನೊಬ್ಬನ ಅಸಹಜ ರೀತಿಯ ಸಾವು ಹಲವು ಅನುಮಾನಗಳಿಗೆ ಕಾರಣವಾಗಿತ್ತು. ಪ್ರತಿಭಟನೆಗಳು ನಡೆದಿದ್ದವು. ಪೊಲೀಸರು ತನಿಖೆಯಲ್ಲಿ ದೃಢಪಡದೇ ಆರೋಪಿಗಳನ್ನು ಬಂಧಿಸುವ ಪ್ರಶ್ನೆಯೇ ಇಲ್ಲ ಎಂಬ ದೃಢ ನಿರ್ಧಾರಕ್ಕೆ ಬಂದಿದ್ದರು. ಕೊನೆಗೂ ಮೃತಪಟ್ಟ ರಿಕ್ಷಾ ಚಾಲಕನನ್ನು ಆರೋಪಿಗಳು ಬಡಿದೇ ಕೊಂದಿದ್ದಾರೆ ಎನ್ನುವುದು ದೃಢ ಪಟ್ಟಿದೆ. ಪರಿಣಾಮವಾಗಿ ಇಬ್ಬರು ಆರೋಪಿಗಳು ಪೊಲೀಸರಿಂದ ಬಂಧನಕ್ಕೊಳಗಾಗಿ ಜೈಲು ಸೇರಿದ್ದಾರೆ. ರಿಕ್ಷಾಚಾಲಕ ಮೃತಪಟ್ಟ ಸಂದರ್ಭದಲ್ಲಿಯೇ ಆತನ ಪತ್ನಿ ಸುಳ್ಯ ಪೊಲೀಸರಿಗೆ ಆರೋಪಿಯ ಹೆಸರು ವಿಳಾಸ ಸಹಿತ ದೂರು ನೀಡಿ ಕೊಲೆ ಮಾಡಿದ್ದಾರೆ ಎಂದೇ ಆಪಾದಿಸಿದ್ದಳು. ಆದರೆ ಪೊಲೀಸರು ಆ ಬಗ್ಗೆ ಸಂಶಯಾಸ್ಪದ ರೀತಿಯಲ್ಲಿ ಕೇಸು ದಾಖಲಿಸಿಕೊಂಡಿದ್ದರೇ ಹೊರತು ಕೊಲೆ ಪ್ರಕರಣ ದಾಖಲಿಸಿಕೊಳ್ಳಲಿಲ್ಲ. ಅದಕ್ಕಾಗಿ ಎಸ್‌ಡಿಪಿಐ ಪಕ್ಷದ ಪ್ರಮುಖರು ಪ್ರತಿಭಟನೆ ನಡೆಸಿದ್ದರು. ಕೊಲೆ ಆರೋಪ ಹೊತ್ತುಕೊಂಡವ ತಮ್ಮದೇ ಸಮುದಾಯದವ ಎಂದು ತಿಳಿದು ಬಳಿಕ ಸುಮ್ಮನಾಗಿದ್ದರು. ಮತ್ತು ಕೊಲೆ ಪ್ರಕರಣದ ಹಿನ್ನೆಲೆಯೂ ನಿಗೂಢವಾಗಿದ್ದರಿಂದ ಯಾರೂ ಒತ್ತಡ ಹೇರಿರಲಿಲ್ಲ. ಸುಳ್ಯದ ಸಾರ್ವಜನಿಕರು ಪ್ರಕರಣವನ್ನು ಮರೆತೇ ಬಿಟ್ಟಿದ್ದರಾದರೂ ಪೊಲೀಸರ ತನಿಖೆ ಮುಂದುವರಿದು ಇಬ್ಬರು ಆರೋಪಿಗಳು ಜೈಲು ಸೇರುವಂತಾಗಿದೆ.**

ಸುಳ್ಯ ತಾಲೂಕು ಕೇಂದ್ರದಲ್ಲಿಯೇ ಪತ್ನಿ ಮಕ್ಕಳೊಂದಿಗೆ ವಾಸವಿದ್ದ ರಿಕ್ಷಾ ಚಾಲಕ ಅಬ್ದುಲ್ ಜಬ್ಬಾರ್. ಸುಮಾರು 40ರ ಹರೆಯ. ಆತನ ಪತ್ನಿ ಸುಮಯ್ಯ. ಈ ಜಬ್ಬಾರ್‌ಗೆ ವಿಚಿತ್ರವಾದ ಲೈಂಗಿಕ ಬಯಕೆ ಇತ್ತು. ಆತ ಸಣ್ಣ ಪ್ರಾಯದ ಬಾಲಕರನ್ನು ಪುಸಲಾಯಿಸಿ ಲೈಂಗಿಕ ಕ್ರಿಯೆಗೆ ಬಳಸಿಕೊಳ್ಳುತ್ತಿದ್ದ. ಬಾಲಕರು ಈ ವಿಚಾರವನ್ನು ಯಾರೊಂದಿಗೂ ಬಾಯಿ ಬಿಡುತ್ತಿರಲಿಲ್ಲ. ಇದರಿಂದ ಉತ್ತೇಜಿತನಾಗಿದ್ದ ಅಬ್ದುಲ್ ಜಬ್ಬಾರ್ 2025 ಅಕ್ಟೋಬರ್‌ನಲ್ಲಿ ಸುಮಾರು 10ರ ಹರೆಯದ ಬಾಲಕನೊಬ್ಬನನ್ನು ತನ್ನ ರಿಕ್ಷಾದಲ್ಲಿ ಕರೆದೊಯ್ದು ಲೈಂಗಿಕ ಕಿರುಕುಳ ನೀಡಿದ್ದ. ಆ ಬಾಲಕ ಈ ವಿಚಾರವನ್ನು ತನ್ನ ಮನೆಯಲ್ಲಿ ಹೇಳಿದ್ದ ಆ ಸಂದರ್ಭದಲ್ಲಿ ಆತನ ಸೋದರ ಸಂಬಂಧಿ ಮಹಮ್ಮದ್ ರಫೀಕ್ ಯಾನೆ ಪಡು ರಫೀಕ್ ಎಂಬಾತ ಗಮನಿಸಿದ್ದ. ಆಟೋ ಚಾಲಕ ಅಬ್ದುಲ್ ಜಬ್ಬಾರ್ ಇಂತಹ ಹೀನಾತಿಹೀನ ಕೃತ್ಯ ನಡೆಸಿದ್ದಾನೆ ಎಂದು ತಿಳಿದ ಪಡು ರಫೀಕ್ ಈತನಿಗೆ ಬುದ್ಧಿ ಕಲಿಸಬೇಕು ಎಂದು ನಿಶ್ಚಯಿಸಿದ್ದ. ಅಕ್ಟೋಬರ್ 16ರಂದು ಮಧ್ಯಾಹ್ನದ ವೇಳೆಗೆ ಪಡು ರಫೀಕ್ ಮತ್ತು ಇತರ ಕೆಲವರು ಜಬ್ಬಾರ್‌ಗೆ ದೂರವಾಣಿ ಕರೆ ಮಾಡಿ ದುಗ್ಗಲಡ್ಕಕ್ಕೆ ಬಾಡಿಗೆಗೆ ಹೋಗಲಿಕ್ಕೆ ಇದೆ ಎಂದು ಕರೆದಿದ್ದರು. ಕರೆ ಮಾಡಿದ್ದ ಪಡು ರಫೀಕ್ ಪರಿಚಿತನೇ ಆಗಿದ್ದರಿಂದ ಮತ್ತು ದೂರದ ಬಾಡಿಗೆ ಎಂಬ ಕಾರಣಕ್ಕೆ ಮನೆಯಲ್ಲಿ ಊಟ ಮಾಡಿ ಮಲಗಿದ್ದ ಜಬ್ಬಾರ್ ರಿಕ್ಷಾ ಚಲಾಯಿಸಿಕೊಂಡು ಹೋಗಿದ್ದ. ಸಂಜೆ ವೇಳೆಯಾದರೂ ಜಬ್ಬಾರ್ ಬಾರದಿದ್ದಾಗ ಮತ್ತು ಯಾವುದೇ ಮಾಹಿತಿ ಇಲ್ಲದಾಗ ಆತನ ಪತ್ನಿ ಸುಮಯ್ಯ ಆತನ ಮೊಬೈಲ್‌ಗೆ ಫೋನ್ ಮಾಡಿದ್ದಳು. ಫೋನ್ ಸ್ವೀಕರಿಸಿದ ಪಡು ರಫೀಕ್ ರಿಕ್ಷಾ ಚಾಲಕ ಜಬ್ಬಾರ್ ತನ್ನೊಂದಿಗೆ ಇದ್ದಾನೆ ಆತ ಸ್ವಲ್ಪ ದೂರದಲ್ಲಿದ್ದಾನೆ ಮತ್ತೆ ದೂರವಾಣಿ ಕರೆ ಮಾಡುವಂತೆ ಹೇಳುತ್ತೇನೆ ಎಂದು ಹೇಳಿ ಕರೆ ಕಟ್ ಮಾಡಿದ್ದ. ತದನಂತರ ಪಡುರಫೀಕ್ ಮತ್ತು ಇತರರು ಜಬ್ಬಾರ್‌ನನ್ನು ದುಗ್ಗಲಡ್ಕದಿಂದ ಕಲ್ಲುಗುಂಡಿಗೆ ಕರೆದೊಯ್ದಿದ್ದು ಅಲ್ಲಿ ಮತ್ತೆ ಕೆಲವರು ಸೇರಿ ಹಲ್ಲೆ ನಡೆಸಿದ್ದರು. ಇದರಿಂದ ತೀವ್ರ ಅಸ್ವಸ್ಥಗೊಂಡ ಜಬ್ಬಾರ್‌ನನ್ನು ಪಡುರಫೀಕ್ ಮತ್ತು ಇತರರು ಆತನದ್ದೇ ರಿಕ್ಷಾದಲ್ಲಿ ಕರೆದುಕೊಂಡು ಬಂದು ಮನೆಗೆ ಬಿಟ್ಟಿದ್ದರು. ಗಂಡನ ಪರಿಸ್ಥಿತಿ ನೋಡಿ ಭಯಭೀತಳಾದ ಸುಮಯ್ಯ ಈ ಬಗ್ಗೆ ಪ್ರಶ್ನೆ ಮಾಡಿದಾಗ ಪಡು ರಫೀಕ್ ಜಬ್ಬಾರ್ ಮಾಡಿದ್ದ ತಪ್ಪಿಗಾಗಿ ಒಂದೆರಡು ಏಟು ಕೊಟ್ಟಿದ್ದೇವೆ ಈ ವಿಚಾರವನ್ನು ಬೇರೆಯುವರೊಂದಿಗೆ ಚರ್ಚಿಸುವುದು ಬೇಡ ಮರ್ಯಾದೆಯ ಪ್ರಶ್ನೆ ಎಂದು ಹೇಳಿ ಹೊರಟು ಹೋಗಿದ್ದರು.


ಕೊಲೆಯಾದ ಜಬ್ಬಾರ್

ದಕ್ಷಿಣ ಕನ್ನಡ

✍ ಮೋಹನ್ ಬೋಳಂಗಡಿ


ಮರುದಿನ ಅಂದರೆ ಅಕ್ಟೋಬರ್ 17ರಂದು ಜಬ್ಬಾರ್ ಮನೆಯಲ್ಲಿ ತೀವ್ರ ಅಸ್ವಸ್ಥಗೊಂಡ. ಈ ಸಂದರ್ಭದಲ್ಲಿ ಆತನ ಪತ್ನಿ ಸುಮಯ್ಯ ಆತನನ್ನು ಸುಳ್ಯದ ಆಸ್ಪತ್ರೆಗೆ ದಾಖಲಿಸಿದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಜಬ್ಬಾರ್ ಮೃತಪಟ್ಟ. ಆಸ್ಪತ್ರೆಯಿಂದ ಮಾಹಿತಿ ಪೊಲೀಸ್ ಠಾಣೆಗೆ ಹೋಗಿತ್ತು. ಪೊಲೀಸರು ಬಂದು ಆರಂಭದಲ್ಲಿ ವಿಚಾರಿಸಿದಾಗ ಜಬ್ಬಾರ್ ತನ್ನ ಮೇಲೆ ಹಲ್ಲೆ ನಡೆದಿದೆ ಎಂಬ ಅಂಶವನ್ನು ಹೇಳಿರಲಿಲ್ಲ. ಆತ ಮೃತಪಟ್ಟ ಬಳಿಕ ಮತ್ತೆ ಮಾಹಿತಿ ಪೊಲೀಸ್ ಠಾಣೆಗೆ ಹೋಗಿತ್ತು. ಪೊಲೀಸರು ಬಂದು ಆತನ ಪತ್ನಿ ಸುಮಯ್ಯ ಬಳಿ ವಿಚಾರಿಸಿದಾಗ ಪಡು ರಫೀಕ್ ಬಾಡಿಗೆಯ ನೆಪದಲ್ಲಿ ಕರೆದೊಯ್ದು ಹಲ್ಲೆ ನಡೆಸಿ ಕೊಲೆ ಮಾಡಿದ್ದಾನೆ ಎಂದು ದೂರು ನೀಡಿದ್ದಳು. ಈ ಬಗ್ಗೆ ಸುಳ್ಯ ಠಾಣೆಯಲ್ಲಿ ಅಪರಾಧ ಕ್ರಮಾಂಕ 125/2025ರಂತೆ ಕಲಂ 105 ಜೊತೆಗೆ 3(5) ಬಿಎನ್‌ಎಸ್‌ರಂತೆ ಪ್ರಕರಣ ದಾಖಲಾಗಿ ತನಿಖೆ ಕೈಗೊಂಡರು.


ರಫೀಕ್ ಪಡು

### ರಫೀಕ್ ವಿಚಾರಣೆ

ಪ್ರಕರಣ ದಾಖಲಾಗುತ್ತಿದ್ದಂತೆಯೇ ಸುಳ್ಯ ಪೊಲೀಸರು ಸುಮಯ್ಯ ನೀಡಿದ ದೂರಿನಲ್ಲಿ ಉಲ್ಲೇಖವಾಗಿದ್ದ ಸುಳ್ಯದವನೇ ಆಗಿದ್ದ ಪಡು ರಫೀಕ್‌ನನ್ನು ಪೊಲೀಸ್ ಠಾಣೆಗೆ ಕರೆಸಿ ವಿಚಾರಿಸಿದರು. ಆ ಸಂದರ್ಭದಲ್ಲಿ ರಫೀಕ್ ತನ್ನ ಸಂಬಂಧಿ ಬಾಲಕರ ಮೇಲೆ ಜಬ್ಬಾರ್ ಲೈಂಗಿಕ ಕಿರುಕುಳ ನೀಡಿದ್ದು, ಈ ಬಗ್ಗೆ ವಿಚಾರಿಸಿ ಆತನಿಗೆ ಥಳಿಸಿದ್ದಾಗಿ ಮಾಹಿತಿ ನೀಡಿದ್ದರು. ಜಬ್ಬಾರ್‌ಗೆ ಯಾವುದೇ ಮಾರಕಾಯುಧಗಳಿಂದ ಥಳಿಸಿದ ಕುರುಹುಗಳು ಇರಲಿಲ್ಲ. ಆತನ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರು ಸಹ ಬಾಹ್ಯ ಮತ್ತು ಆಂತರಿಕ ಗಾಯಗಳ ಬಗ್ಗೆ ಮಾಹಿತಿ ನೀಡಿರಲಿಲ್ಲ. ಆದ್ದರಿಂದ ಪೊಲೀಸರು ರಫೀಕ್‌ನನ್ನು ವಿಚಾರಿಸಿದರೂ ಇದೊಂದು ಉದ್ದೇಶಪೂರ್ವಕ ನಡೆದ ಹತ್ಯೆಯಲ್ಲ ಎಂಬ ಅಂಶ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಪಡು ರಫೀಕ್‌ನನ್ನು ಬಿಟ್ಟು ಕಳುಹಿಸಿದ್ದರು. ಪೊಲೀಸರು ಸರಿಯಾದ ರೀತಿಯಲ್ಲಿ ರಫೀಕ್‌ನನ್ನು ವಿಚಾರಣೆಗೆ ಒಳಪಡಿಸಿಲ್ಲ ಎಂಬ ಇಲ್ಲಿ ಮುಖ್ಯವಾಗಿತ್ತು. ಯಾವಾಗ ಪೊಲೀಸರು ರಫೀಕ್‌ನನ್ನು ಬಿಟ್ಟು ಕಳುಹಿಸಿದರೋ ಈ ಪ್ರಕರಣದ ಬಗ್ಗೆ ಅಮೂಲಾಗ್ರ ತನಿಖೆ ನಡೆಸಬೇಕು ಎಂದು ಜಬ್ಬಾರ್ ಪತ್ನಿ ಸುಮಯ್ಯ ಮತ್ತು ಸ್ಥಳೀಯ ಎಸ್‌ಡಿಪಿಐ ಪಕ್ಷದ ಮುಖಂಡರು ಒತ್ತಾಯಿಸಿದರು. ಅವರು ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿ ಅರುಣ್ ಅವರನ್ನು ಅವರ ಕಚೇರಿಯಲ್ಲಿ ಭೇಟಿಯಾಗಿ ಮನವಿ ಅರ್ಪಿಸಿದರು. ಆ ಸಂದರ್ಭದಲ್ಲಿ ಎಸ್ಪಿ ಅವರು ಈ ಬಗ್ಗೆ ತನಿಖೆ ನಡೆಸುತ್ತಿದ್ದು, ನ್ಯಾಯ ಒದಗಿಸಿಕೊಡುವ ಭರವಸೆ ನೀಡಿದ್ದರು.

ಕೆಲವು ದಿನಗಳ ಹಿಂದೆ ಜಬ್ಬಾರ್‌ನ ಮರಣೋತ್ತರ ಪರೀಕ್ಷಾ ವರದಿ ಪೊಲೀಸರ ಕೈ ಸೇರಿತ್ತು. ಈ ವರದಿಯ ಪ್ರಕಾರ ಜಬ್ಬಾರ್‌ನ ಸಾವಿಗೆ ಆತನ ಮೇಲೆ ನಡೆದಿದ್ದ ಹಲ್ಲೆಯೇ ಕಾರಣ. ಆಂತರಿಕವಾಗಿ ರಕ್ತಸ್ರಾವ ಆಗಿದ್ದರಿಂದ ಮೃತ್ಯು ಸಂಭವಿಸಿದೆ ಎಂದಿತ್ತು. ಪೊಲೀಸರು ತಕ್ಷಣ ಪಡು ರಫೀಕ್‌ನನ್ನು ಪೊಲೀಸ್ ಠಾಣೆಗೆ ಕರೆಸಿದರು. ಈ ಹಿಂದೆ ಬಿಎನ್‌ಎಸ್ ಸೆಕ್ಷನ್ 105ರ ಪ್ರಕಾರ ದಾಖಲಾಗಿದ್ದ ಪ್ರಕರಣವನ್ನು ಬದಲಾಯಿಸಿ ಬಿಎನ್‌ಎಸ್ ಸೆಕ್ಷನ್ 103ರ ಅಡಿಯಲ್ಲಿ ಕೇಸು ದಾಖಲಿಸಿಕೊಂಡು ಪಡುರಫೀಕ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ಮತ್ತೆ ಪೊಲೀಸ್ ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ ಜಬ್ಬಾರ್‌ನ ಮೇಲೆ ಹಲ್ಲೆ ನಡೆಸಿದ ಸಂದರ್ಭದಲ್ಲಿ ಕಲ್ಲುಗುಂಡಿಯ ಮನು ಯಾನೆ ಮನೋಹರ್ ಎಂಬಾತನು ಇದ್ದ ಎಂಬ ಮಾಹಿತಿಯನ್ವಯ ಆತನನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ನಂತರ ಇಬ್ಬರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ.


ಮನೋಹರ

### ಯಾರು ಈ ಮನು?

ಜಬ್ಬಾರ್ ಕೊಲೆ ಪ್ರಕರಣದ ಎರಡನೇ ಆರೋಪಿ ಕಲ್ಲುಗುಂಡಿಯ ಮನು ಯಾನೆ ಮನೋಹರ್. ಆತನಿಗೆ 42ರ ಹರೆಯ. ಸುಳ್ಯ ಪೊಲೀಸ್ ಠಾಣೆಯ ಹಳೆಯ ಕ್ರಿಮಿನಲ್. ಈತನ ಮೇಲೆ ಕೊಲೆ, ಕೊಲೆಯತ್ನ ಬೆದರಿಕೆ ಮೊದಲಾದ ಪ್ರಕರಣಗಳು ದಾಖಲಾಗಿವೆ. ಕೊಲೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ನ್ಯಾಯಾಲಯದಿಂದ ಜಾಮೀನು ಪಡೆದು ಬಿಡುಗಡೆಗೊಂಡಿದ್ದು, ಮತ್ತೆ ಮತ್ತೊಂದು ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದಾನೆ.

ಸಂಪಾಜೆಯ ಬಿಜೆಪಿ ಯುವ ಮುಖಂಡನಾಗಿದ್ದ ಕಳಗಿ ಬಾಲಚಂದ್ರ ಎಂಬವರನ್ನು ಮಾರ್ಚ್ 19, 2019ರಂದು ತಂಡವೊಂದು ಹತ್ಯೆ ಮಾಡಿತ್ತು. ಈ ಪ್ರಕರಣದಲ್ಲಿ ಸಂಪತ್ ಎಂಬಾತ ಪ್ರಮುಖ ಆರೋಪಿಯಾಗಿದ್ದ. ಸಂಪತ್ ಮತ್ತು ಬಾಲಚಂದ್ರ ಸ್ನೇಹಿತರಾಗಿದ್ದರು. ಬಾಲಚಂದ್ರ ಸಂಪಾಜೆ ಪರಿಸರದಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದ. ಸಂಪತ್ ಅಲ್ಲಿ ಅಕ್ರಮ ಕಲ್ಲಿನಕೋರೆ, ಮರಳುದಂಧೆ ನಡೆಸುತ್ತಿದ್ದ. ಅಲ್ಲದೇ ಸಂಪಾಜೆಯಲ್ಲಿ ಜುಗಾರಿ ಕ್ಲಬ್‌ವೊಂದನ್ನು ಆರಂಭಿಸಲು ಸಿದ್ಧತೆ ನಡೆಸಿದ್ದ. ಇದಕ್ಕೆ ಬಾಲಚಂದ್ರ ವಿರೋಧ ವ್ಯಕ್ತಪಡಿಸಿದ್ದ. ಈ ಹಿನ್ನೆಲೆಯಲ್ಲಿ ಮಡಿಕೇರಿಗೆ ಹೋಗಿದ್ದ ಬಾಲಚಂದ್ರನನ್ನು ಸಂಪತ್ ಸುಪಾರಿ ಕೊಟ್ಟು ಕೊಲೆ ಮಾಡಿಸಿದ್ದ. ಈ ಪ್ರಕರಣದಲ್ಲಿ ಆತ ಜೈಲಿಗೆ ಹೋಗಿ ಜಾಮೀನಿನ ಮೇರೆಗೆ ಬಿಡುಗಡೆಗೊಂಡು ಬಂದಿದ್ದ. ಸಂಪಾಜೆ ಪರಿಸರದಲ್ಲಿ ಬಾಲಚಂದ್ರ ಕೆಳಗಿಯ ಸ್ನೇಹಿತರು ದ್ವೇಷ ಸಾಧಿಸುವ ಹಿನ್ನೆಲೆ ಇದ್ದದ್ದರಿಂದ ಸಂಪತ್ ಸುಳ್ಯ ಬಳಿ ಬಾಡಿಗೆ ಮನೆ ಮಾಡಿಕೊಂಡು ವಾಸ ಮಾಡಿಕೊಂಡಿದ್ದ. ಈ ಮನೆಗೆ ದಾಳಿ ನಡೆಸಿದ ಬಾಲಚಂದ್ರ ಕೆಳಗಿಯ ಸ್ನೇಹಿತರು ಸಂಪತ್‌ನನ್ನು ಕೊಲೆ ಮಾಡಿದ್ದರು. ಈ ಪ್ರಕರಣದಲ್ಲಿ ಸಂಪಾಜೆಯ ಮನು ಯಾನೆ ಮನೋಹರ್ ಪ್ರಮುಖ ಆರೋಪಿಯಾಗಿದ್ದ. ಈತ ಇತ್ತೀಚೆಗೆ ಜೈಲಿನಿಂದ ಜಾಮೀನಿನ ಮೇರೆಗೆ ಬಿಡುಗಡೆಗೊಂಡು ಬಂದು ಇದೀಗ ಜಬ್ಬಾರ್ ಹತ್ಯೆಯಲ್ಲಿ ಶಾಮೀಲಾಗಿ ಜೈಲು ಸೇರಿದ್ದಾನೆ.

# ಜ್ಯೋತಿಷಿ ನುಡಿದ ಭವಿಷ್ಯ ಸುಳ್ಳಾಯ್ತು!






5 ☞ ಮಟ್ಟಿಗೆ ಗಿಲ್ಲಿ ಪರವಾಗಿ ಬ್ಯಾಟ್ ಬೀಸಿದ್ದರು. ಕೊನೆಗೂ ಅಭಿಮಾನಿಗಳಿಗೆ ಗೆಲುವು ಸಿಕ್ಕಿದೆ. ಗಿಲ್ಲಿ ನಟ ವಿಜಯದ ಮಾಲೆ ಧರಿಸಿದ್ದಾರೆ. ಜ್ಯೋತಿಷಿ ಪ್ರಶಾಂತ್ ಕಿಣಿ ಬಿಟ್ಟ ಬುರುಡೆ ಭವಿಷ್ಯ ಸುಳ್ಳಾಗಿದೆ.



**ನವರಸ ನಾಯಕ ಜಗ್ಗೇಶ್ ಮಾತು ಸತ್ಯವಾಯ್ತು!**

'ಬಿಗ್ ಬಾಸ್'ಗೂ ಮುನ್ನ ಸುಮಾರು 5-6 ರಿಯಾಲಿಟಿ ಶೋಗಳಲ್ಲಿ ಗಿಲ್ಲಿ ನಟ ತನ್ನ ಛಾಪು ಮೂಡಿಸಿದ್ದರು. ಅದರಲ್ಲಿ ಮುಖ್ಯವಾಗಿ 'ಕಾಮಿಡಿ ಕಿಲಾಡಿಗಳು' ವೇದಿಕೆ. ಗಿಲ್ಲಿ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ಶೋ ಅದು. ಆ ಶೋನ ಜಡ್ಜ್ ಆಗಿದ್ದ ನವರಸ ನಾಯಕ ನಟ ಜಗ್ಗೇಶ್ ಅವರು 2 ವರ್ಷಗಳ ಹಿಂದೆಯೇ ಗಿಲ್ಲಿ ಕುರಿತು ಭವಿಷ್ಯ ನುಡಿದ್ದರು. ''ಮುಂಬರುವ ವರ್ಷಗಳಲ್ಲಿ ಛತ್ರಿ ಹಿಡಿಯೋಕೆ ಒಬ್ಬ, ಜೊತೆಗೆ ನಾಲ್ಕು ಜನ ಬಾಡಿಗಾರ್ಡ್ ಹಾಕೊಂಡು ತಿರುಗಾಡೋ ಯೋಗ ಬರುತ್ತೆ ಗಿಲ್ಲಿ ನಟನಿಗೆ'' ಎಂದಿದ್ದರು. ಅದೀಗ ನಿಜವಾಗಿದೆ! ಅವರ ಮಾತಿನಂತೆ ಗಿಲ್ಲಿ, ಬಿಗ್ ಬಾಸ್ ಮನೆಯಿಂದ ಆಚೆ ಬರೋವಾಗ ಪೊಲೀಸ್ ಸಿಬ್ಬಂದಿಗಳು, ಬಾಡಿಗಾರ್ಡ್‌ಗಳಿದ್ದರು. ಅಷ್ಟರ ಮಟ್ಟಿಗೆ ಗಿಲ್ಲಿ ನಟನ ಹವಾ ಸೃಷ್ಟಿಯಾಗಿರೋದು ಮಳವಳ್ಳಿ ಹೈದನ ಪ್ರತಿಭೆಗೆ ವೀಕ್ಷಕರು ಕೊಟ್ಟ ಮನ್ನಣೆಗೆ ಸಾಕ್ಷಿಯಾಗಿದೆ.....

ಟ್ರೋಫಿ ಗೆದ್ದು ಮಂಡ್ಯ ಜಿಲ್ಲೆಗೆ ಕಾಲಿಟ್ಟ ಹುಡುಗನಿಗೆ ಅದೇನು ಸ್ವಾಗತ ಸಿಕ್ಕಿದೆ ಅಂತೀರಿ.... ಜಾತಿ ಧರ್ಮ ಮತ ಬೇಧವಿಲ್ಲದೆ ಸಾವಿರಾರು ರೈತ ಮನಸ್ಸುಗಳು ಆರತಿ ಬೆಳಗಿ, ಹಾರ ಹಾಕಿ, ಮುತ್ತಿಕ್ಕಿ ಹರಸಿದ್ದಾವೆ! ದಡದಪುರದ ಈ ಹುಡುಗ ಗಿಲ್ಲಿ ಈ ಹಿಂದೆ ಮಳವಳ್ಳಿಯಲ್ಲಿ ಐಟಿಐ ಓದಲು ಬರುತ್ತಿದ್ದ. ಅದ್ಯಾವ ಅಂಗಡಿಯಲ್ಲಿ ಕಳ್ಳೆ ಮಿಠಾಯಿ ತಿಂದುಕೊಂಡು ಬಸ್ ಸ್ಟ್ಯಾಂಡ್‌ನಲ್ಲಿ ನಿಂತಿರುತ್ತಿದ್ದನೋ, ಈವತ್ತು ಅದೇ ಬೀದಿಯಲ್ಲಿ, ಪೊಲೀಸ್ ಬಂದೋಬಸ್ತ್ ನಲ್ಲಿ ಮೆರವಣಿಗೆ... ಅವನ ಅಪ್ಪ ಅಮ್ಮರನ್ನೂ ಹತ್ತಿರಕ್ಕೆ ಬಿಡದೆ ಸಹಸ್ರಾರು ಸಂಖ್ಯೆಯಲ್ಲಿ ಮುತ್ತಿಕೊಂಡು ಜೈಕಾರ ಹಾಕಿದ ಫ್ರೆಂಡ್ಸ್ ಮತ್ತು ಅಭಿಮಾನಿ ಬಳಗ... ಒಟ್ಟಾರೆ, ಅವನ ಜನ್ಮ ಸಾರ್ಥಕವಾದಂತಾಗಿದೆ!! ☯

# ಝುಮ್ಮ ಜುಮ್ಮ ಮಾಡಿದ ತಮ್ಮ ಅಣ್ಣನಿಂದಲೇ ಕೊಲೆ?!

11 ☞ ಫೋನ್ ಮಾಡಿ ನನ್ನ ತಮ್ಮ ಬಂದು ಬೈಕ್ ತೆಗೆದುಕೊಂಡು ಹೋದ್ನಾ ಅಂತಾ ಕೇಳಿದ್ದಾನೆ. ಅದಕ್ಕೆ ಮಾರುತಿ ಇಲ್ಲಾ ಇನ್ನೂ ಬಂದಿಲ್ಲ ಅಂತ ಹೇಳಿದ್ದಾನೆ. ಹೌದಾ ಹಾಗಾದ್ರೆ ಆ ಬೈಕ್‌ನ ಇನ್ನೊಂದು ಚಾವಿ ಕೊಡುವುದಕ್ಕೆ ನಮ್ಮಪ್ಪಂಗೆ ಹೇಳ್ತೀನೆ ಆಮೇಲೆ ನೀನು ಬೈಕ್ ತಂದು ನಮ್ಮನೇಲಿಡು ಅಂದಿದ್ದಾನೆ. ಹಾಗೇ ಮಾರುತಿನೂ ಬೈಕ್ ತಂದು ಬಿಟ್ಟು ಹೋಗಿದ್ದಾನೆ.

ಈಗ ಮಾಲತೇಶನಿಗೆ ಭಯ ಹುಟ್ಟಿ ತನ್ನ ಹೆಂಡತಿ, ಮಕ್ಕಳನ್ನ ಕರೆದುಕೊಂಡು ಹೆಂಡತಿಯ ತೌರುಮನೆ ತುಡಿನೀರುಗೆ ಹೋಗಿ ಉಳಿದುಕೊಂಡಿದ್ದಾನೆ, ಇಷ್ಟಕ್ಕೇ ಸುಮ್ಮನಿರದ ಈ ಪುಣ್ಯಾತ್ಮ ಮಾರನೇ ದಿನ ಕೂಲಿ ಕೆಲಸಕ್ಕಂತಾ ರಾಕೇಶ ಮತ್ತು ರಮೇಶ ಅನ್ನೋರ್ನ ತನ್ನದೇ ಬೈಕ್‌ನಲ್ಲಿ ತೊಗ್ಗರ್ಸಿಯಿಂದ ಕರೆದುಕೊಂಡು ಬಂದು ಅದೇ ತೋಟಕ್ಕೆ ಮಣ್ಣು ಹಾಕೋದಿದೆ ಅಂತ ಹೇಳಿ ತನ್ನ ತಮ್ಮನನ್ನ ಹೂತು ಹಾಕಿದ್ದ ಸ್ಥಳಕ್ಕೂ ಮಣ್ಣು ಹಾಕ್ಸಿದ್ದಾನೆ. ಮತ್ತೆ ರಾಮಚಂದ್ರನನ್ನ ಹೂತು ಹಾಕಿದ್ದ. ಜಾಗ ತೋರ್ಸಿ ತಂತಿಬೇಲಿ, ಕಲ್ಲಿನ ಖಂಬಗಳು ಕುಸ್ದು ಬೀಳ್ತಾ ಇದ್ದಾವೆ ಅಲ್ಲೂ ಮಣ್ಣುಹಾಕಿ ಅಂತಾ ಮಣ್ಣು ಹಾಕಿಸಿದ್ದಾನೆ. ಇದಾಗಿ ಸುಮಾರು ಇಪ್ಪತ್ತು ದಿನಗಳೇ ಕಳೆದಿವೆ. ಆ ನಂತರ ಮಾಲತೇಶ ನಂದನ್ ಅನ್ನೋರ ಟ್ರ್ಯಾಕ್ಟರ್‌ನಲ್ಲಿ ತನ್ನ ಮನೆ ಸಾಮಾನುಗಳನ್ನ ಹತ್ತಿರದ ಹಸ್ವಿ ಗ್ರಾಮದಲ್ಲಿರೋ ತನ್ನ ದೊಡ್ಡಮ್ಮನ ಮಗ ಕೆರಿಯಪ್ಪ ಅನ್ನೋರ ಮನೇಲಿರಿಸಿದ್ದಾನೆ.

ರಾಮಚಂದ್ರನ ಕೊಲೆಯಾಗಿ ಸುಮಾರು ಒಂದೂವರೆ ತಿಂಗಳುಗಳು ಕಳ್ದಿವೆ, ಇಷ್ಟು ದಿನಗಳ ತನಕ ತನ್ನ ಮಗ ಎಲ್ಲೂ ಹೋಗಲ್ಲ, ಇನ್ನೂ ಬಂದಿಲ್ವಲ್ಲಾಂತ ರಾಮಚಂದ್ರನ ತಾಯಿ ಮಾಲತೇಶನಿಗೆ ಮತ್ತು ತನ್ನ ಸಂಬಂಧಿಕರಿಗೆಲ್ಲಾ ಹೇಳಿ ತುಂಬಾನೇ ಕಣ್ಣೀರು ಹಾಕಿದ್ದಾರೆ, ಕಡೆಗೆ ಯಾರದ್ದೋ ಮಾತು ಕೇಳಿ ಗೌರಮ್ಮ ಸೊರಬ ತಾಲೂಕಿನ ಆನವಟ್ಟಿ ಪೊಲೀಸ್ ಠಾಣೆಯಲ್ಲಿ ತನ್ನ ಮಗ ಕಾಣೆಯಾದ ಬಗ್ಗೆ ದೂರು ನೀಡಿದ್ದಾರೆ. ಅಗ ಅಂಡು ಸುಟ್ಟ ಬೆಕ್ಕಿನಂತಾದ ಮಾಲತೇಶ ಅವನ್ನೆಲ್ಲಿಗೆ ಹೋಗ್ತಾನೆ? ಅವನಿಗೇನು ಮದುವೆ ಆ ಟೈಮ್‌ಟೈಮಿಗೆ ಮನೆಗೆ ಬರೋಕೆ. ಎಲ್ಲಿಗೋ ದೂರ ಕೆಲಸಕ್ಕೆ ಹೋಗಿರಬೇಕುಕು ಬರ್ತಾನೆ ಅಂತಾ ತನ್ನ ತಂದೆತಾಯಿಯನ್ನ ಸಮಾಧಾನ ಪಡಿಸಿದ್ದಾನೆ, ಆಗ ಮಾಲತೇಶನ ಹೆಂಡ್ತಿ ಭಾಗ್ಯಳಿಂದಲೇ ಈ ಕೊಲೆ ಸತ್ಯದ ಹೂರಣ ಹೊರಗೆ ಬಿದ್ದಿದೆ. ☯

# ಉಮ್ಮತ್ತೂರಿನ ಪೊರ್ಕಿ ಬಸವನ ಮರ್ಡರ್!

9 ☞

**26 ವರ್ಷದ ಶಿವಕುಮಾರ** ತಮ್ಮಯ್ಯ ಹಾಗೂ ಮತ್ತೊಬ್ಬ ಆರೋಪಿ ಉಮ್ಮತ್ತೂರು ಗ್ರಾಮದ ನಂಜುಂಡಶೆಟ್ಟಿ ಮಗ 25 ವರ್ಷದ ಚಂದು ಎನ್. ಎಂಬುದು ಖಾತ್ರಿಯಾಗುತ್ತದೆ.



ಕೊಲೆ ಪ್ರಕರಣವನ್ನು ಕೇವಲ ಒಂದು ದಿನದಲ್ಲಿ ಭೇದಿಸಿದ ಪೊಲೀಸರು ಕೊಲೆ ಮಾಡಿ ಉಮ್ಮತ್ತೂರು ಗ್ರಾಮದ ಜಮೀನುಗಳಲ್ಲಿ ತಲೆಮರೆಸಿಕೊಂಡಿದ್ದ ಈ ಇಬ್ಬರು ಆರೋಪಿಗಳನ್ನು ಹೆಡೆಮುರಿ ಕಟ್ಟಿ ಠಾಣೆಗೆ ಕರೆತಂದು ವಿಚಾರಣೆಗೊಳಪಡಿಸಿದ್ದಾರೆ. ಮೊದಮೊದಲು ಈ ಕೊಲೆಯನ್ನು ಮಾಡಿಯೇ ಇಲ್ಲ ಎಂದು ವಾದಿಸುತ್ತಿದ್ದ ಆರೋಪಿಗಳಿಗೆ ಪೊಲೀಸರು ಗ್ರಾಮದಿಂದ ಬಸವನನ್ನು ಕರೆದುಕೊಂಡು ಹೋಗಿರುವ ಸಿ ಟಿವಿ ದೃಶ್ಯವನ್ನು ತೋರಿಸಿ ಪೊಲೀಸ್ ಭಾಷೆಯಲ್ಲಿ ಮಾತನಾಡಿಸಿದಾಗ ಬಸವನಿಗೆ ಮದ್ಯ ಕುಡಿಸಿ ಕಬ್ಬಿಣದ ರಾಡಿನಿಂದ ಹೊಡೆದು ಹತ್ಯೆ ಮಾಡಿರುವುದಾಗಿ ವಿಚಾರಣೆಯ ವೇಳೆ ಒಪ್ಪಿಕೊಂಡಿದ್ದಾರೆ ಹಾಗೂ ಬಸವನ ಹತ್ಯೆ ನಡೆಸಿದ ರೋಚಕ ಕಥೆಯನ್ನು ಪೊಲೀಸರೆದುರು ಎಳೆಎಳೆಯಾಗಿ ಬಾಯಿ ಬಿಟ್ಟಿದ್ದಾರೆ.

**ಇಲ್ಲಿದೆ ನೋಡಿ ಆ ಇಂಟರೆಸ್ಟಿಂಗ್ ಸ್ಟೋರಿ...**

ಕುಡಿಯಲು ಕೊಟ್ಟರೆ ಯಾವ ಕೆಲಸವನ್ನಾದರೂ... ಮಾಡಲು ಹೇಸಿಕೊಳ್ಳದ ಬಸವ ಕುಡಿದಾಗ ವಿಕೃತವಾಗಿ ನಡೆದುಕೊಳ್ಳುತ್ತಿದ್ದ. ಈತ ಒಮ್ಮೊಮ್ಮೆ ಅರೆಬೆತ್ತಲೆಯಲ್ಲಿ ಅಡ್ಡಾಡುತ್ತಾ ಮಹಿಳೆಯರಿಗೆ ಚಡ್ಡಿಬಿಚ್ಚಿ ತೋರಿಸಿ ಅಸಭ್ಯವಾಗಿ ವರ್ತಿಸುತ್ತಿದ್ದ. ಅದೇ ಇಂದು ಅವನ ಜೀವಕ್ಕೆ ಕುತ್ತಾಗಿದೆ ಎನ್ನುತ್ತಾರೆ ಸ್ಥಳಿಯರು. ಪ್ರಕರಣದ ಪ್ರಮುಖ ಆರೋಪಿ ಉಮ್ಮತ್ತೂರು ಗ್ರಾಮದ ಪುಟ್ಟಸ್ವಾಮಿ ಮಗ ಶಿವಕುಮಾರ ಗ್ರಾಮದಲ್ಲಿ ವೆಲ್ಡಿಂಗ್ ಕೆಲಸ ಮಾಡಿಕೊಂಡಿದ್ದ. ಬಸವನ ಹತ್ಯೆಗೆ ಮೂಲ ಕಾರಣವೇ ಶಿವಕುಮಾರನ ತಾಯಿ ಶಾಂತಮ್ಮ ಹಾಗೂ ಹೆಂಡತಿಗೆ ಕುಡಿದ ಅಮಲಿನಲ್ಲಿ ಬಸವ ಅವಾಚ್ಯವಾಗಿ ಬೈದು ದಾರಿಯಲ್ಲಿ ಚಡ್ಡಿ ಬಿಚ್ಚಿ ತೋರಿಸಿ ಅಸಭ್ಯವಾಗಿ ವರ್ತಿಸಿ ಮರ್ಯಾದೆ ಕಳೆದಿದ್ದ. ಇದು ಶಿವಕುಮಾರನಿಗೆ ತಡೆದುಕೊಳ್ಳಲಾರದಷ್ಟು ರೋಷ ಬರುವಂತೆ ಮಾಡಿತ್ತು. ವಿಷಯ ತಿಳಿದ ಕೂಡಲೆ ಅಂದೇ ಹೋಗಿ ಕೇಳುತ್ತೇನೆ ಎಂದು ಹೊರಟಿದ್ದ. ಆದರೆ ಆತನ ತಾಯಿ ತಡೆದಿದ್ದಳು. ಆದರೂ ಈ ಘಟನೆಯ ಬಗ್ಗೆ ತುಂಬಾ ತಲೆಕೆಡಿಸಿಕೊಂಡಿದ್ದ ಶಿವಕುಮಾರ್ ಬಸವನ ಹತ್ಯೆಗೆ ಸಂಚು ರೂಪಿಸಿದ್ದ. ಅದಕ್ಕಾಗಿ ಈತ ಮೈಸೂರಿನ ಕಡಕೊಳ ಕೈಗಾರಿಕಾ ಪ್ರದೇಶದ ಸಾಂಧಾರ್ ಆಟೋ ಕಾಸ್ಟಿಂಗ್‌ನಲ್ಲಿ ಕೆಲಸ ಮಾಡಿಕೊಂಡಿದ್ದ. ತನ್ನ ಸ್ನೇಹಿತ ಅದೇ ಗ್ರಾಮದ ನಂಜುಂಡಶೆಟ್ಟಿಯ ಮಗ ಚಂದ್ರುವನ್ನು ಬರಮಾಡಿಕೊಂಡಿದ್ದ. ಆದರೆ ಶಿವಕುಮಾರ್ ಸ್ನೇಹಿತ ಚಂದುಗೆ ಈ ವಿಚಾರ ಹೇಳಿರಲಿಲ್ಲ.

ಘಟನೆ ನಡೆದ ದಿನ ಇಬ್ಬರು ಬೈಕ್‌ನಲ್ಲಿ ಆತನನ್ನು ಹುಡುಕಿದ್ದಾರೆ. ಮಧ್ಯಾಹ್ನ ಗ್ರಾಮದ ಅಂಗಡಿ ಬೀದಿಯಲ್ಲಿ ಟೀ ಕುಡಿಯುತ್ತ ಕುಳಿತಿದ್ದ ಬಸವನನ್ನು ಈ ಇಬ್ಬರು ಹತ್ತಿರ ಹೋಗಿ ಕರೆದಿದ್ದಾರೆ. ಬಣ್ಣ ಬಳಿಯುವ ಕೆಲಸವಿದೆ ಬರುತ್ತೀಯ ಎಂದು. ಬರಲು ಒಪ್ಪಿದ ಆತನನ್ನು ಕರೆದು ತಮ್ಮ ಬೈಕ್‌ನಲ್ಲಿ ಕೂರಿಸಿಕೊಂಡಿದ್ದಾರೆ. ಅಂದು ಮಧ್ಯಾಹ್ನ ಒಂದು ಗಂಟೆ ಮೀರಿದ್ದ ವೇಳೆಯಲ್ಲಿ ಗ್ರಾಮದಿಂದ ತೆಂಕಲಮೋಳೆಯ ಪಣಿರಾಜ್ ಕ್ವಾರಿಗೆ ಕರೆದುಕೊಂಡು ಹೋಗುತ್ತಿದ್ದಾಗ ದಾರಿ ಮಧ್ಯದಲ್ಲಿ ಬಸವ ಎಣ್ಣೆ ಕುಡಿಯಬೇಕು ಎಂದು ಕೇಳಿಕೊಂಡಿದ್ದಾನೆ. ಈ ವೇಳೆ ಬಸವನನ್ನು ಬೈಕ್‌ನಿಂದ ಕೆಳಗಿಳಿಸಿ ನಡೆದು ಹೋಗಲು ಹೇಳಿ ಶಿವಕುಮಾರ್ ಮತ್ತು ಚಂದ್ರು ವೈನ್ ಷಾಪ್‌ಗೆ ಎಣ್ಣೆ ತರಲು ಬಂದಿದ್ದಾರೆ. ಇಲ್ಲಿ ಮದ್ಯದ ಪೌಚ್, ನೀರಿನ ಬಾಟಲಿ, ಚಕ್ಲಿ ಖರೀದಿಸಿದ್ದಾರೆ. ಈ ದೃಶ್ಯ ವೈನ್ ಷಾಪ್‌ನಲ್ಲಿರುವ ಸಿಸಿ ಕ್ಯಾಮರದಲ್ಲಿ ಸೆರೆಯಾಗಿದೆ.

ವೈನ್ ಷಾಪ್‌ನಲ್ಲಿ ಮದ್ಯದ ಪೌಚ್, ನೀರಿನ ಬಾಟಲಿ, ಚಕ್ಲಿ ಖರೀದಿಸಿದ ಹಂತಕರು ಹಿಂತಿರುಗಿ ಬರುವವರೆಗೆ ಬಸವ ಕುದೇರು ಗ್ರಾಮದ ಸುಂದ್ರಯ್ಯರವರ ಪಾಳು ಬಿದ್ದಿರುವ ಜಮೀನಿನ ಹತ್ತಿರ ನಡೆದುಕೊಂಡು ಬಂದಿದ್ದಾನೆ. ಅಲ್ಲಿ ಮೂವರು ಮದ್ಯ ಸೇವಿಸಿದ್ದಾರೆ. ಈ ವೇಳೆ ಕ್ಯಾತೆ ತಗೆದ ಶಿವಕುಮಾರ್ ಮೊದಲೇ ಪೂರ್ವ ನಿಯೋಜಿತವಾಗಿ ತಂದಿದ್ದ ಕಬ್ಬಿಣದ ರಾಡಿನಿಂದ ಬಸವನ ತಲೆಗೆ ಬಲವಾಗಿ ಹೊಡೆದು ಹತ್ಯೆ ಮಾಡಿ ಉಸಿರು ನಿಲ್ಲಿಸಿದ್ದಾರೆ. ಶಿವಕುಮಾರ್ ವೆಲ್ಡಿಂಗ್ ಕೆಲಸ ಮಾಡಿಕೊಂಡಿದ್ದೂ ಈತನೆ ಕಬ್ಬಿಣದ ರಾಡು ತಂದಿರುವುದಾಗಿ ಹೇಳಿಕೊಂಡಿದ್ದಾನೆ. ಕೊಲೆ ಮಾಡಿದ ಹಂತಕರು ಬಸವನ ಶವ ನೋಡಲು ಇವರು ಊರಿನಲ್ಲೆ ಉಳಿದುಕೊಂಡು ಏನೂ ಗೊತ್ತಿಲ್ಲದಂತೆ ಪೊಲೀಸರ ಮುಂದೆ ಅಡ್ಡಾಡಿಕೊಂಡಿದ್ದರು. ಆದರೆ ಕೊಲೆ ಮಾಡಿ ಅರಗಿಸಿಕೊಳ್ಳುವುದು ಸುಲಭದ ಮಾತಲ್ಲ. ಕೊಲೆ ಆರೋಪಿಗಳ ಹೆಡೆಮುರಿ ಕಟ್ಟುವಲ್ಲಿ ಕುದೇರು ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಈ ಪ್ರಕರಣದಲ್ಲಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಗಳ ಪತ್ತೆಕಾರ್ಯದಲ್ಲಿ ಭಾಗಿಯಾಗಿದ್ದ ಸಂತೇಮರಳ್ಳಿ ವೃತ್ತ ನಿರೀಕ್ಷಕ ಎಸ್.ಎಲ್. ಸಾಗರ್‌ರವರು ಆರೋಪಿಗಳ ಪತ್ತೆಗೆ ಕುದೇರು ಪಿಎಸ್‌ಐ ಠಾಣೆ ಶ್ರೀಮತಿ ಕುಮುದ ಮತ್ತು ಸಂತೇಮರಳ್ಳಿ ಠಾಣೆ ಪಿಎಸ್‌ಐ ಟಿ.ಎಂ. ತಾಜುದ್ದೀನ್, ಸಿಬ್ಬಂದಿಗಳಾದ ಅಕ್ಬರ್ ಆಲಿ, ಮೋಹನ್, ಜಗದೀಶ್, ಯಶ್ವಂತ್, ಪ್ರದೀಪ, ಮಹದೇವ, ರಮೇಶ ಮತ್ತು ನಿಂಗರಾಜುರವರು ಗಳನ್ನೊಳಗೊಂಡ ತಂಡವನ್ನು ಮಾನ್ಯ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಂ. ಮುತ್ತುರಾಜು ರವರು ಶ್ಲಾಘಿಸಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಕೊಲೆ ಹಂತಕರನ್ನ ಜೈಲಿಗಟ್ಟಿ ಬಂದಿರುವ ಸಂತೇಮರಳ್ಳಿ ವೃತ್ತನಿರೀಕ್ಷಕ ಸಾಗರ್ ಪ್ರಕರಣದ ತನಿಖೆ ಕೈಗೆತ್ತಿಕೊಂಡಿದ್ದಾರೆ.



☯

# ಅಭಿನಯ ಶಾರದೆಯ ಸವಿ ನೆನಪಿನಲ್ಲಿ...

**ಜನವರಿ 06 ಅಭಿನಯ ಶಾರದೆ ಜಯಂತಿ ಜನುಮ ದಿನ. ಆದರೆ ಅಕ್ಟೋಬರ್ 11 ಅವರ ನಿಜವಾದ ಬರ್ತ್ ಡೇಟ್ ಅಂತ ಜಯಂತಿ ಅವರೇ ಹೇಳುತ್ತಿದ್ದರು. ಆಗಿದ್ದೇನೆಂದರೆ, ಅವರನ್ನು ಸ್ಕೂಲಿಗೆ ಸೇರಿಸುವಾಗ ಅವರ ಪೋಷಕರು ಆ ಶೈಕ್ಷಣಿಕ ವರ್ಷಕ್ಕೆ ಹೊಂದುವಂತೆ ಜನವರಿ 06 ಅಂತ ಬರೆಸಿದ್ದರಂತೆ! ಇದೇನೇ ಇರಲಿ, ಜಯಂತಿ ಅವರ ಅಧಿಕೃತ ದಾಖಲೆಯಂತೆ ಜನವರಿ 06 ಅವರ ಜನ್ಮ ದಿನ. ಕಳೆದ ಜನವರಿ 06 ಕ್ಕೆ ಅವರಿಗೆ 81 ವರ್ಷ ತುಂಬುತ್ತದೆ... ಇಸವಿ 2012ರಲ್ಲಿ ಗೆಳೆಯ ಪ್ರಕಾಶ್‌ಬಾಬು ಕೃಪೆಯಿಂದ ನನಗೆ ಅವರನ್ನು ನೋಡುವ, ಮಾತನಾಡಿಸುವ ಅದೃಷ್ಟ ಸಿಕ್ಕಿತ್ತು! ಬಾಬು ಮಾಡಿದ ಸಂದರ್ಶನವನ್ನ ಜಯಂತಿ ಸ್ವಗತದಲ್ಲೇ ಪ್ರಸ್ತುತಿ ಪಡಿಸಿದ್ದೇನೆ, ದಯವಿಟ್ಟು ಓದಿಕೊಳ್ಳಿ...**

‘ಜಯಂತಿ ಅವರೇ ನಿಮಗೆಷ್ಟು ವಯಸ್ಸು ಅಂತ ಯಾರಾದ್ರೂ ಕೇಳಿದ್ರೆ, ನಾನು ತಾಳ್ಮೆಯಿಂದ 35 ವರ್ಷ ಅಂತೀನಿ’ ಖಚಿತವಾಗಿ ಹೇಳ್ರಿ ಅಂತ ಅವರು ಮತ್ತೆ ಒತ್ತಿ ಒತ್ತಿ ಕೇಳಿದರೆ, ನನಗೆ ‘ಸರ್ರ್’ ಅಂತ ಸಿಟ್ಟು ಬರುತ್ತೆ, ಹಾಗಂತ ಅವರ ಮೇಲೇನೂ ನಾನು ಬೇಜಾರು ಮಾಡಿ ಕೊಳ್ಳುವುದಿಲ್ಲ, ನನ್ನ ಮನಸಿಗೆ ಇಷ್ಟವಾಗದ ಪ್ರಶ್ನೆ ಅಂದ್ರೆ ಅದು ವಯಸ್ಸಿನ ವಿಚಾರ!! ನನಗೆ ವಯಸ್ಸಾಗಿದೆ ಅಂತ ಮನಸಿಗೆ ತಂದ್ಕೊಂಡ್ರೆ, ಏನೊ ಒಂಥರ ಜಿಗುಪ್ಸೆ ಆಗುತ್ತೆ. ಅದಕ್ಕಾಗೆ ನನ್ನ ದೇಹಕ್ಕೆ ಎಷ್ಟು ವಯಸ್ಸಾಗಿದೆಯೊ ಗೊತ್ತಿಲ್ಲ. ಆದರೆ, ನನ್ನ ಮನಸು ಮಾತ್ರ 35. ಅದು ಆಗಲೂ ಈಗಲೂ ಯಾವಾಗಲೂ... ಆಚೀಚೆಗೆ ಈ ಸಂಖ್ಯೆ ಅಲ್ಲಾಡುವುದಿಲ್ಲ.



ಯಾಕೆ 35 ಅಂತಾನೇ ಹೇಳ್ಕೊಂಡ್ರಿ, ಇಪ್ಪತ್ತೊ, ಇಪ್ಪತ್ತೆಂದೊ ಅಂತ ಇನ್ನೂ ಕಡಿಮೆ ವಯಸ್ಸು ಇಟ್ಕೊಬಹುದಿತ್ತಲ್ಲ ಅಂತ ಯಾರಾದರೂ ಕೇಳಬಹುದು. ಅದಕ್ಕೆ ನಾನು ಕೊಡೊ ಉತ್ತರ 35ನೇ ವಯಸ್ಸು ಪ್ರತಿಯೊಬ್ಬ ಮನುಷ್ಯನಿಗೂ ಪರ್ಫೆಕ್ಟ್ ಆಗಿ ಇರೊ ವಯಸ್ಸು. 25ರೊಳಗಿನ ಚಂಚಲತೆಯಾಗಲಿ, 45 ರಾಚೆಗಿನ ಸಂಚಯನವಾಗಲಿ ಇಲ್ಲದ ಪರಿಪೂರ್ಣತೆ ಸಾಧಿಸಿದ ವಯಸ್ಸು 35 ಅಂತ ನಾನು ಭಾವಿಸಿದ್ದೀನಿ. ಹೀಗಿದ್ದರೂ, ನಾನೇನು ಜನ್ಮ ದಿನಾಂಕದ ರಹಸ್ಯ ಇಟ್ಟುಕೊಳ್ಳುವುದಿಲ್ಲ. ಬಳ್ಳಾರಿಯಲ್ಲಿ 1945ರ ಅಕ್ಟೋಬರ್ 11ರಂದು ಹುಟ್ಟಿದೆ ಅಂತ ಹೇಳ್ಬಿಡ್ತೀನಿ. ನನ್ನ ತಂದೆ ಬಾಲಸುಬ್ರಮಣ್ಯಂ ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದರು. ತಾಯಿ ಸಂತಾನಲಕ್ಷ್ಮಿ ಗೃಹಿಣಿ. ನನ್ನ ಮೂಲ ಹೆಸರು ಕಮಲಾಕುಮಾರಿ. ಚಿತ್ರರಂಗಕ್ಕೆ ಬಂದು ಜಯಂತಿಯಾದೆ. ಚಿತ್ರರಂಗದಲ್ಲಿ ಅಭಿನಯಿಸುತ್ತಾ ‘ಅಭಿನಯ ಶಾರದೆ’ಯೂ ಆದೆ. ನನಗಿಬ್ಬರು ತಮ್ಮಂದಿರು. ನನ್ನ ಬಾಲ್ಯ ಸಂತೋಷವಾಗೇನೂ ಇರಲಿಲ್ಲ, ಅಪ್ಪಅಮ್ಮನ ಜಗಳದಲ್ಲಿ ಕೂಸು ಬಡವಾಯಿತೆಂಬಂತೆ ನೊಂದು ಬೆಳೆದೆ. ತಾಯಿಯೊಂದಿಗೆ ನಾನು ಮದರಾಸಿಗೆ ಹೋದಾಗ ಅಲ್ಲಿನ ಖ್ಯಾತ ನೃತ್ಯಪಟು ಚಂದ್ರಕಲಾ ಬಳಿ ನೃತ್ಯಭ್ಯಾಸ ಮಾಡಿದೆ. ಆಗ ನನ್ನೊಂದಿಗೆ ನೃತ್ಯ ಕಲಿಯುತ್ತಿದ್ದವರಲ್ಲಿ ತಮಿಳಿನ ಹೆಸರಾಂತ ನಟಿ ಮನೋರಮಾ ಕೂಡ ಇದ್ದರು. 1961ರಲ್ಲಿ ಮದರಾಸಿನ ಸ್ಟುಡಿಯೋದಲ್ಲಿ ಅಂದು ನನ್ನ ನೆಚ್ಚಿನ ನಟರಾಗಿದ್ದ ಎನ್.ಟಿ. ರಾಮರಾವ್‌ರನ್ನು ನೋಡಲು ಹೋಗಿದ್ದೆ. ನನ್ನ ನೋಡಿದ ಅವರು ತಮ್ಮ ಮುಂದಿನ ಚಿತ್ರಕ್ಕೆ ನಾಯಕಿ ಪಾತ್ರ ನೀಡಿದರು!

16 ವರ್ಷವೂ ಆಗಿರದ ನಾನು ‘ಜಯಂತಿ’ ಎಂಬ ಮರುನಾಮಕರಣದ ಹೆಸರಲ್ಲಿ ಅವರಿಗೆ ನಾಯಕಿಯಾದೆ. ಜಯಂತಿಯಾಗಿ ಮೊದಲು ಬಣ್ಣ ಹಚ್ಚಿದ ಚಿತ್ರ ತೆಲುಗಿನ ಸೂಪರ್ ಸ್ಟಾರ್ ಎನ್.ಟಿ. ರಾಮರಾವ್ ಅಭಿನಯದ ‘ಜಗದೇಕ ವೀರುನಿ ಕಥಾ’. ಆ ಚಿತ್ರ ಯಶಸ್ವಿಯಾದ ನಂತರ ಎನ್.ಟಿ. ರಾಮರಾವ್‌ರೊಂದಿಗೆ ಕುಲಗೌರವಂ, ಕೊಂಡವೀಟಿ ಸಿಂಹಂ ಮತ್ತು ಜಸ್ಟೀಸ್ ಚೌಧರಿ ಚಿತ್ರಗಳನ್ನು ಮಾಡಿದೆ. ತೆಲುಗು ಚಿತ್ರರಂಗ ಪ್ರವೇಶಿಸಿದ ವರ್ಷದಲ್ಲೇ ಕನ್ನಡ ಚಿತ್ರರಂಗದಲ್ಲಿ ಅಭಿನಯಿಸುವ ಅವಕಾಶ ಬಂತು. ‘ಜೇನುಗೂಡು’ ನಾನು ಅಭಿನಯಿಸಿದ ಮೊದಲ ಕನ್ನಡ ಚಿತ್ರ. ನನ್ನ ನೆಚ್ಚಿನ ನಟ ಡಾ.ರಾಜ್‌ರೊಂದಿಗೆ ಮೊದಲು ಅಭಿನಯಿಸಿದ ಚಿತ್ರ ‘ಚಂದವಳ್ಳಿಯ ತೋಟ’. ಆ ಚಿತ್ರದಿಂದ ‘ಬಹದ್ದೂರ್ ಗಂಡು’ ಚಿತ್ರದವರೆಗೆ ಒಟ್ಟು 33 ಚಿತ್ರಗಳಲ್ಲಿ ಅಭಿನಯಿಸಿ ಡಾ. ರಾಜ್‌ರೊಂದಿಗೆ ಅತಿ ಹೆಚ್ಚು ಅಭಿನಯಿಸಿದ ನಾಯಕಿ ಎಂಬ ಹೆಗ್ಗಳಿಕೆ ಸಂಪಾದಿಸಿದ್ದೇನೆ. ಡಾ.ರಾಜ್‌ರೊಂದಿಗೆ ಅಭಿನಯಿಸುವವರೆಗೂ ನನಗೆ ಅವರಾರೆಂಬುದೇ ಗೊತ್ತಿರಲಿಲ್ಲ. ಅವರೊಬ್ಬ ಕನ್ನಡ ಚಿತ್ರರಂಗದ ದೊಡ್ಡ ನಟರೆಂಬುದೂ ಗೊತ್ತಿರಲಿಲ್ಲ.

ಏಕೆಂದರೆ, ನಾನು ಮದರಾಸಿನಲ್ಲಿ ಬೆಳೆದಿದ್ದರಿಂದ ಡಾ. ರಾಜ್‌ರನ್ನು ಫೋಟೋದಲ್ಲಾಗಲಿ, ಚಲನಚಿತ್ರದಲ್ಲಾಗಲಿ ನೋಡಿರಲಿಲ್ಲ. ಹೀಗಿರುವಾಗ ಸಿಂಗ್ ಠಾಕೂರ್ ನಿರ್ದೇಶನದ ‘ತರಾಸು’ ಕಾದಂಬರಿ ಆಧಾರಿತ ‘ಚಂದವಳ್ಳಿಯ ತೋಟ’ ಚಿತ್ರಕ್ಕೆ ಆಯ್ಕೆಯಾದೆ. ಆಗ ಆ ಚಿತ್ರಕ್ಕೆ ಸಹ ನಿರ್ದೇಶಕರಾಗಿದ್ದ ಎಸ್.ಕೆ. ಭಗವಾನ್ ಮದರಾಸಿನಲ್ಲಿ ಬಿಡುಗಡೆಯಾಗಿದ್ದ ‘ಬೇಡರ ಕಣ್ಣಪ್ಪ’ ಚಿತ್ರಕ್ಕೆ ಕರೆದೊಯ್ದರು. ಇವರೆ ರಾಜ್‌ಕುಮಾರ್ ನಿನ್ನ ಮುಂದಿನ ಚಿತ್ರದ ನಾಯಕ ಅಂದಿದ್ದರು. ‘ಬೇಡರ ಕಣ್ಣಪ್ಪ’ದಲ್ಲಿ ಕಾಡು ಮನುಷ್ಯನ ಪಾತ್ರ ಮಾಡಿದ್ದರಿಂದ ಆಗ ಅವರ ನಿಜವಾದ ಮುಖ ಪರಿಚಯ ನನಗಾಗಲಿಲ್ಲ. ಇದರಿಂದ ಚಂದವಳ್ಳಿಯ ತೋಟದ ಚಿತ್ರೀಕರಣ ಸಂದರ್ಭದಲ್ಲಿ ಮಾಡ್ರನ್ ಡ್ರೆಸ್‌ನಲ್ಲಿ ಆಗಮಿಸಿದ್ದ ಡಾ. ರಾಜ್‌ರನ್ನು ಗುರುತಿಸಲು ನನ್ನಿಂದ ಸಾಧ್ಯವೇ ಆಗಲಿಲ್ಲ. ಕಲಾವಿದರಾಗಿ ಪಾತ್ರದಿಂದ ಪಾತ್ರಕ್ಕೆ ಹೇಗೆ ಹೊಂದಿಕೊಳ್ಳುತ್ತಾರೆಂಬುದು ಮೊದಲ ಪರಿಚಯದಲ್ಲೇ ಡಾ. ರಾಜ್ ಕಲಾಗುಣದಿಂದ ನನಗೆ ಗೊತ್ತಾಗಿ ಬಿಟ್ಟಿತ್ತು. ‘ಚಂದವಳ್ಳಿಯ ತೋಟ’ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಬಂತು. ನನ್ನ ಮತ್ತು ರಾಜ್ ನಡುವಣ ಮಧುರ ಬಾಂಧವ್ಯಕ್ಕೂ ನಾಂದಿ ಹಾಡಿತು. ನನ್ನ ನಾಲ್ಕನೇ ಚಿತ್ರ ಖ್ಯಾತ ನಿರ್ದೇಶಕ ಎಂ.ಆರ್. ವಿಠಲ್‌ರ ‘ಮಿಸ್ ಲೀಲಾವತಿ’. ಅದರಲ್ಲಿ ಬಹಳ ಬೋಲ್ಡ್ ಹುಡುಗಿ ಪಾತ್ರವನ್ನು ಮಾಡಿದೆ. ಜನ ಭಾರಿ ಮೆಚ್ಚಿಕೊಂಡರು. ಅದರಲ್ಲಿನ ಆಧುನಿಕ ಹುಡುಗಿ ಪಾತ್ರಕ್ಕೆ ರಾಷ್ಟ್ರ ಮಟ್ಟದಲ್ಲಿ ಶ್ರೇಷ್ಠ ನಟಿ ಪ್ರಶಸ್ತಿ ಬಂತು. ಅಂದು ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಮಂತ್ರಿಮಂಡಲದಲ್ಲಿ ವಾರ್ತಾ ಮಂತ್ರಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿ ನನಗೆ ಪ್ರಶಸ್ತಿ ಪ್ರಧಾನ ಮಾಡಿದ್ದಲ್ಲದೆ, ನನ್ನನ್ನು ಮೆಚ್ಚಿ ಹೂ ಮುತ್ತೊಂದನ್ನು ನನ್ನ ಕೆನ್ನೆಗೆ ನೀಡಿದರು.

ಆ ಕ್ಷಣದ ಮಧುರ ಘಳಿಗೆಯನ್ನು ನನ್ನ ಜೀವಮಾನದಲ್ಲೆಂದು ಮರೆಯಲಾರೆ. ನನ್ನ ವೃತ್ತಿ ಜೀವನಕ್ಕೆ ಮಹತ್ವದ ತಿರುವು ಕೊಟ್ಟ ಚಿತ್ರ ಮತ್ತು ಕನ್ನಡ ಚಿತ್ರರಂಗದಲ್ಲಿ ಭದ್ರವಾಗಿ ನೆಲೆ ನಿಲ್ಲಲು ಅವಕಾಶ ಕಲ್ಪಿಸಿಕೊಟ್ಟ ಚಿತ್ರ ‘ಮಿಸ್ ಲೀಲಾವತಿ’ ಎಂದೇ ಭಾವಿಸಿದ್ದೇನೆ. ಅದರ ನಂತರ ಅಂತಹದೇ ಬೋಲ್ಡ್ ಪಾತ್ರಗಳು ಹುಡುಕಿಕೊಂಡು ಬಂದವು. ಕಲಾವಿದೆಯಾಗಿ ಅದಕ್ಕೆ ಜೀವ ತುಂಬುವ ಪ್ರಾಮಾಣಿಕ ಕೆಲಸ ಮಾಡಿದೆ, ಜನ ನನ್ನ ‘ಅಭಿನಯ ಶಾರದೆ’ ಅಂತ ಹರಸಿ ಬೆಳೆಸಿದರು.



ಡಾ. ರಾಜ್ ಮತ್ತು ನನ್ನದು ಅಳಿಸಲಾಗದ ಮಧುರ ಬಾಂಧವ್ಯ. ಅವರನ್ನ ‘ರಾಜ್’ ಅಂತ ಸಂಭೋಧಿಸಿ ಕರೆಯೊ ಏಕೈಕ ವ್ಯಕ್ತಿ ನಾನೊಬ್ಬಳೆ! ಅವರೂ ಅಷ್ಟೇ ನನ್ನ ಬಗ್ಗೆ ಅಪಾರವಾದ ಗೌರವ, ಪ್ರೀತಿ ಇಟ್ಟುಕೊಂಡಿದ್ದರು. ಅವರದು ನಿಷ್ಕಲ್ಮಶ ಹೃದಯ. ಅವರು ಯಾವತ್ತೂ ಯಾರ ಬಗೆಗೂ ಮನಸಿನಲ್ಲಿ ಕೆಟ್ಟ ಭಾವನೆ ತುಂಬಿಕೊಳ್ಳುತ್ತಿರಲಿಲ್ಲ. ಎಲ್ಲರನ್ನೂ ಒಳ್ಳೆ ಭಾವದಿಂದಲೆ ನೋಡ್ತಿದ್ರು, ಒಳ್ಳೆ ಭಾವನೆಯಿಂದಲೆ ಮಾತಾಡಿಸ್ತಿದ್ರು. ಅವರು ನಿಜಕ್ಕೂ ಹೆಸರಿಗೆ ತಕ್ಕಂತೆ ಅಪ್ಪಟ ಮುತ್ತು. ಅದಕ್ಕಾಗೆ ಅವರನ್ನು ‘ಮುತ್ತುರಾಜ್’ ಅಂತಾನೂ ಬಾಯ್ತುಂಬ ಕರೆಯುತ್ತಿದ್ದೆ. ‘ಚಕ್ರತೀರ್ಥ’ ಚಿತ್ರದಲ್ಲಿ ಅವರು ಸಾಯುವ ದೃಶ್ಯ ಬರುತ್ತದೆ, ಅದನ್ನು ಕಂಡು ರೋಧಿಸುವ ಪಾತ್ರ ನಾನು ಮಾಡಬೇಕಿತ್ತು. ನಿಜಕ್ಕೂ ಆ ಸನ್ನಿವೇಶ ನನ್ನಲ್ಲಿ ನೋವು ತರಿಸಿ ಬಿಕ್ಕಿ ಬಿಕ್ಕಿ ಅತ್ತೆ. ಶಾಟ್ ಕಟ್ ಆಗಿದ್ದರೂ ನನ್ನ ಅಳು ನಿಲ್ಲಲಿಲ್ಲ. ಡಾ. ರಾಜ್‌ರೆ ನನ್ನ ಸಮಾಧಾನಿಸಿ ಮೇಕಪ್ ರೂಂಗೆ ಕರೆದೊಯ್ದರೂ ನನ್ನ ಅಳು ನಿಂತಿರಲಿಲ್ಲ. ಸಿನಿಮಾದಲ್ಲಿ ಡಾ. ರಾಜ್ ಸಾಯುವುದನ್ನು ಸಹಿಸಲಾಗಲಿಲ್ಲ ಅಂದ ಮೇಲೆ, ಅವರು ನಿಜವಾಗಿಯು ಸತ್ತಾಗ ನಾನೆಷ್ಟು ದುಃಖ ಪಟ್ಟಿರಬೇಕೆಂದು ಅಂದಾಜಿಸಿ. ಈಗಲೂ ರಾಜ್ ನೆನಪಾದಾಗಲೆಲ್ಲ ಮನಸ್ಸು ಕದಡುತ್ತೆ. ಅವರಂಥ ಒಳ್ಳೆ ವ್ಯಕ್ತಿ ಮತ್ತೆ ಹುಟ್ಟಲಾರರೇನೊ ಅನಿಸುತ್ತೆ. ನಾನು ನೆಚ್ಚಿದ ನಟ ರಾಜ್ ಆಗಿದ್ದರೆ, ನಾನು ಮೆಚ್ಚಿದ ನಿರ್ದೇಶಕ ಪುಟ್ಟಣ್ಣ ಕಣಗಾಲ್. ಅವರು ನನಗೆ ಮೂರೇ ಚಿತ್ರದಲ್ಲಿ ಅವಕಾಶ ಕೊಟ್ಟಿದ್ದರು. ಅವು ಪ್ರಮುಖ ಪಾತ್ರವೇನೂ ಆಗಿರಲಿಲ್ಲ. ಹೀಗಿದ್ದರೂ ನನ್ನ ಐನೂರು ಚಿತ್ರಗಳಲ್ಲಿ ಜನರ ಗಮನ ಸೆಳೆವ ಚಿತ್ರ, ಅಂದರೆ ಪುಟ್ಟಣ್ಣನವರ ಆ ಮೂರು ಚಿತ್ರಗಳೆ. ಮೊದಲಿಗೆ 1972ರಲ್ಲಿ ‘ನಾಗರಹಾವು’ ಚಿತ್ರದಲ್ಲಿ ಹಾಡೊಂದಕ್ಕೆ ಒನಕೆ ಓಬವ್ವನ ಪಾತ್ರ ಮಾಡಿದೆ. ಆ ಪಾತ್ರವನ್ನು ಕಲ್ಪನಾ ಮಾಡಬೇಕಿತ್ತು. ಆದರೆ ಆಕೆ, ಇಂಥ ತುಕುಡಾ ಪಾತ್ರ ಮಾಡಲ್ಲ ಅಂದಿದ್ದರಿಂದ ಅದು ನನ್ನನ್ನು ಹುಡುಕಿ ಕೊಂಡು ಬಂದಿತ್ತು!

ಮನಸ್ಸಿಲ್ಲದ ಮನಸ್ಸಿನಿಂದ ಪುಟ್ಟಣ್ಣನವರ ಅಭಿಮಾನಕ್ಕೆ ಮತ್ತು ನಿರ್ಮಾಪಕ ವೀರಸ್ವಾಮಿಯವರ ಔದಾರ್ಯಕ್ಕೆ ಕಟ್ಟುಬಿದ್ದು ಆ ಪಾತ್ರ ಮಾಡಿದೆ. ಅದು ಭಾರಿ ಜನಪ್ರಿಯತೆ ತಂದುಕೊಟ್ಟಿತು. ಇವತ್ತಿಗೂ ಚಿತ್ರದುರ್ಗದ ಜನ ನನ್ನ ‘ಓಬವ್ವ’ ಎಂದೇ ಗುರುತಿಸಿ ಕರೆಯುತ್ತಾರೆ. ಇತ್ತೀಚೆಗೆ ದಾವಣಗೆರೆ ಪುಟ್ಟ ಪೋರನೊಬ್ಬ ನನಗೆ ದೋಸ್ತಿ ಆಗ್ಬಿಟ್ಟಿದ್ದಾನೆ. ದಿನಾ ನನಗೆ ಫೋನ್ ಮಾಡದೆ ಅವನು ಮಲಗುವುದಿಲ್ಲ. ಪುಟ್ಟಣ್ಣ ನನಗೆ ಕೊಟ್ಟ ಎರಡನೇ ಅವಕಾಶ 1974ರಲ್ಲಿ ಬಂದ ‘ಎಡಕಲ್ಲು ಗುಡ್ಡದ ಮೇಲೆ’ ಚಿತ್ರ. ಭಾರತಿಸುತ ಕಾದಂಬರಿ ಆಧಾರಿತವಾದ ಆ ಚಿತ್ರದ ಕತೆ ಕೇಳಿದಾಗ ನಾನು ಆ ಪಾತ್ರ ಮಾಡಲಾರೆ ಎಂದು ಹಿಂಜರಿದೆ. ಪುಟ್ಟಣ್ಣನವರು ಪರಿಪರಿಯಾಗಿ ಕೋರಿಕೊಂಡಿದ್ದರಿಂದ ಒಪ್ಪಿದೆ. ಇಂಗ್ಲಿಷ್‌ನ ಖ್ಯಾತ ಕಾದಂಬರಿಕಾರ ಡಿ.ಎಚ್. ಲಾರೆನ್ಸ್ ಬರೆದ ‘ಲೇಡಿ ಚಾಟರ್ಲೀಸ್ ಲವರ್’ ಭಾರೀ ವಿವಾದಾತ್ಮಕ ಕೃತಿಯಾಗಿತ್ತು. ಕ್ರಿ.ಶ.1928ರಲ್ಲಿ ಇಟಲಿಯಲ್ಲಿ ಮೊಟ್ಟಮೊದಲಿಗೆ ಮುದ್ರಣ ಕಂಡ ಈ ಕೃತಿ 1929 ರಲ್ಲಿ ಫ್ರಾನ್ಸ್‌ನಲ್ಲಿ ಪ್ರಕಟವಾಯಿತು. ಆದರೆ ಇಂಗ್ಲೆಂಡಿನಲ್ಲಾಗಲಿ, ಅಮೇರಿಕಾದಲ್ಲಾಗಲೀ ಈ ಕಾದಂಬರಿ ಪ್ರಕಟವಾಗಲಿಲ್ಲ. 1960ರವರೆಗೂ ಇಂಗ್ಲೆಂಡ್-ಅಮೇರಿಕಾದಲ್ಲಿ ಪ್ರಕಟವಾಗಲು ನಿಷೇಧವಿತ್ತು. ಇಂಗ್ಲೆಂಡ್ ವಸಾಹತು ದೇಶಗಳಾಗಿದ್ದ ಭಾರತ, ಆಸ್ಟ್ರೇಲಿಯಾದಲ್ಲೂ ‘ಲೇಡಿ ಚಾಟರ್ಲೀಸ್ ಲವರ್’ ಕಾದಂಬರಿ ಪ್ರಕಟಿಸದಂತೆ ನಿರ್ಬಂಧ ವಿಧಿಸಲಾಗಿತ್ತು. ಶ್ರೀಮಂತ ಮಹಿಳೆಯೊಬ್ಬಳು ಯುದ್ಧದಿಂದ ಪುರುಷತ್ವ ಕಳೆದುಕೊಂಡಿದ್ದ ಪತಿಯಿಂದ ಸಿಗದ ಲೈಂಗಿಕ ಸುಖವನ್ನು ತನ್ನ ಮನೆಯ ಕೆಲಸಗಾರನಿಂದ ಪಡೆಯುವ ಕತೆಯುಳ್ಳ ಆ ಕಾದಂಬರಿ ಇಂಗ್ಲೆಂಡ್-ಅಮೇರಿಕಾದ ಆಳುವ ನಾಯಕರ ಕಣ್ಣು ಕೆಂಪಗಾಗಿಸಿತ್ತು.

ಆ ಕೃತಿಯನ್ನು ಪ್ರಕಟಿಸಿದ ಖ್ಯಾತ ಪ್ರಕಾಶನ ಸಂಸ್ಥೆ ‘ಪೆಂಗ್ವಿನ್ ಪಬ್ಲಿಕೇಷನ್’ ಮೇಲೆ ನ್ಯಾಯಾಲಯದಲ್ಲಿ ದೂರು ದಾಖಲಾಗಿತ್ತು. 1960ರಲ್ಲಿ ನ್ಯಾಯಾಲಯದ ಮೂಲಕ ಗೆದ್ದ ಪೆಂಗ್ವಿನ್ ಸಂಸ್ಥೆ ನಂತರ ‘ಲೇಡಿ ಚಾಟರ್ಲೀಸ್ ಲವರ್’ ಕಾದಂಬರಿ ಪ್ರಕಟಿಸಿ, ಭಾರಿ ಹೆಸರು, ಹಣ ಸಂಪಾದಿಸಿತು. ಆ ಕಾದಂಬರಿಯನ್ನೇ ಆಧರಿಸಿ ಕೊಡಗು ಮೂಲದ ಕಾದಂಬರಿಕಾರ ಭಾರತಿಸುತ ಅವರು ‘ಎಡಕಲ್ಲು ಗುಡ್ಡದ ಮೇಲೆ’ ಕಾದಂಬರಿಯನ್ನು ಬರೆದರು. ಸಂಪೂರ್ಣ ಭಾರತೀಕರಣಗೊಳಿಸಿದ್ದ ಈ ಕಾದಂಬರಿಯಲ್ಲಿ ಇಂಗ್ಲೀಷ್ ಕಾದಂಬರಿಯಲ್ಲಿದ್ದ ಕೆಟ್ಟ ಕಾಮನೆಗಳಿಲ್ಲದೆ, ಶುದ್ಧ ಭಾವನೆಗಳನ್ನು ತುಂಬಲಾಗಿತ್ತು. ಹೀಗಿದ್ದೂ, ‘ಎಡಕಲ್ಲು ಗುಡ್ಡದ ಮೇಲೆ’ ಕಾದಂಬರಿ ಕನ್ನಡ ಸಾಹಿತ್ಯ ಲೋಕದಲ್ಲಿ ಲೈಂಗಿಕ ಕಾಮನೆಯ ಗುಲ್ಲೆಬ್ಬಿಸಿತ್ತು. ಹೀಗಾಗಿ ಲೇಡಿ ಚಾಟರ್ಲೀಸ್ ಪಾತ್ರವಾದ ಸೈನಿಕನ ಮಡದಿಯ ಪಾತ್ರ ನಿರ್ವಹಿಸಲು ಹೆದರಿದ್ದೆ. ನಿರ್ದೇಶಕ ಪುಟ್ಟಣ್ಣ ಕಣಗಾಲರ ಪ್ರೋತ್ಸಾಹದಿಂದ ಅತ್ಯುತ್ತಮವಾಗಿ ಅಭಿನಯಿಸಿದೆ.

ಅದರಲ್ಲೂ ಚಿತ್ರದಲ್ಲಿ ಭಗ್ನ ಮನಸಿನ ವಿರಹಿ ಮಹಿಳೆಯಾಗಿ ಅಭಿನಯಿಸಿದ ‘ವಿರಹ ನೂರು ನೂರು ತರಹ’ ಹಾಡು, ಅದರಲ್ಲಿನ ನನ್ನ ಪಾತ್ರಕ್ಕೆ ನಾನು ಜೀವ ತುಂಬಿ ಅಭಿನಯಿಸಿದ್ದು, ಭಾರಿ ಹೆಸರು ತಂದುಕೊಟ್ಟಿತು. ಕಲಾವಿದೆಯಾಗಿ ‘ಎಡಕಲ್ಲು ಗುಡ್ಡದ ಮೇಲೆ’ ಚಿತ್ರದ ಪಾತ್ರದ ಬಗ್ಗೆ ಬಹಳ ಖುಷಿಪಟ್ಟೆ. ನಂತರ ಪುಟ್ಟಣ್ಣನವರ ಕೊನೆ ಚಿತ್ರ ‘ಮಸಣದ ಹೂವು’ ಚಿತ್ರಕ್ಕೆ ನಾನು ಆಯ್ಕೆಯಾಗಿದ್ದು ಆಕಸ್ಮಿಕ. 1985ರಲ್ಲಿ ತರಾಸು ಕಾದಂಬರಿ ಆಧಾರಿತ ‘ಮಸಣದ ಹೂವು’ ಚಿತ್ರ ಮಾಡುವಾಗ ಚಿತ್ರದ ಘರ್‌ವಾಲಿ ಪಾತ್ರ ಯಾರಿಗೆ ಕೊಡಬೇಕೆಂಬ ಗೊಂದಲದಲ್ಲಿ ಪುಟ್ಟಣ್ಣ ಇದ್ದರಂತೆ. ಚಿತ್ರದ ಮುಹೂರ್ತ ಪೂಜೆ ಸಂದರ್ಭದಲ್ಲಿ ಅರ್ಚಕರು ‘ಜಯಂತ್ಯೇ ನಮಃ’ ಅಂತ ಉಚ್ಚರಿಸಿದಾಗ ನನ್ನ ಜ್ಞಾಪಕ ಬಂತಂತೆ. ಅವರು ತಕ್ಷಣವೆ ನನಗೆ ಫೋನ್ ಮಾಡಿ ‘ಕಾಲ್‌ಶೀಟ್’ ಪಡೆಯಲು ಮನೆಗೆ ಬರ್ತಿದ್ದೀನಿ ಅಂದ್ರು. ಅಷ್ಟರಲ್ಲಾಗಲೆ ಅವರ ಆರೋಗ್ಯ ಸರಿ ಇಲ್ಲ ಅಂತ ತಿಳಿದಿದ್ದೆ. ಬೇಡ ಪುಟ್ಟಣ್ಣಾಜಿ, ನಾನೇ ನಿಮ್ಮಲ್ಲಿಗೆ ಬರ... ಅಂತ ಹೋದೆ ಖುಷಿಯಾಗಿ. ಆದರೆ ಪಾತ್ರದ ವಿವರ ಕೇಳಿದಾಗ ನನಗೆ ಬಹಳ ನಿರಾಶೆಯಾಯಿತು. ಪುಟ್ಟಣ್ಣ ಈ ಹಿಂದೆ ಕರೆದು ಕೊಟ್ಟ ಎರಡು ಪಾತ್ರಗಳು ಸಣ್ಣವೆನಿಸಿದರೂ ದೊಡ್ಡ ಮಟ್ಟದಲ್ಲಿ ಹೆಸರು ತಂದು ಕೊಟ್ಟಿತ್ತು. ಏನ್ ಮಾಡೋದು, ಪುಟ್ಟಣ್ಣ!

ಆದದ್ದು ಆಗಲಿ ಅಂತ ಒಪ್ಪಿದೆ. ಗೊತ್ತಲ್ಲ, ಮಸಣದ ಹೂವು ಚಿತ್ರದಲ್ಲಿ ನನ್ನದು ಘರ್‌ವಾಲಿ ಪಾತ್ರ. ನನ್ನ ಸಹಾಯಕನ ಪಾತ್ರಧಾರಿಯಾಗಿ ಅಂಬಿ (ಅಂಬರೀಶ್) ಅದ್ಭುತ ಅಭಿನಯ ನೀಡಿದ್ದ. ಚಿತ್ರ ಪೂರ್ಣಗೊಳ್ಳುವ ಮುನ್ನವೇ ಪುಟ್ಟಣ್ಣ ಅಸ್ತಂಗತರಾದರು. ಆಗ ಕಣ್ಣೆವೆಗಳು ಮುಚ್ಚಿದ್ದರೂ ದುಃಖದ ಕೋಡಿ ಹರಿದು ಬರುತ್ತಲೇ ಇತ್ತು. ಅಪೂರ್ಣಗೊಂಡಿದ್ದ ‘ಮಸಣದ ಹೂವು’ ಚಿತ್ರವನ್ನು ಪುಟ್ಟಣ್ಣರ ಶಿಷ್ಯ ಕೆ.ಎಸ್.ಎಲ್. ಸ್ವಾಮಿ (ರವಿ) ಚಿತ್ರ ಪೂರ್ಣಗೊಳಿಸಿದರು.

ಆ ಚಿತ್ರದ ಪಾತ್ರ ನನ್ನ ಈಗಲೂ ಕಾಡುತ್ತಿರುತ್ತದೆ. 1961ರ ‘ಜಗದೇಕ ವೀರುಡು’ ಚಿತ್ರದಿಂದ ಇತ್ತೀಚಿನ ‘ನರಸಿಂಹ’ ಚಿತ್ರದವರೆಗೆ 51 ವರ್ಷಗಳಲ್ಲಿ ಬಗೆ ಬಗೆಯ ಪಾತ್ರ ಮಾಡಿದ್ದೇನೆ. ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಹಿಂದಿ ಹಾಗೂ ‘ಪತಿತ ಪಾವನೆ’ ಎಂಬ ಒಂದು ಮರಾಠಿ ಚಿತ್ರ ಸೇರಿದಂತೆ 500ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದೇನೆ.

☞16




# ಜನ ನಾಯಗನ್‌ಗೆ ಯಾರ ಕಂಟಕ?!

ದಳಪತಿ ವಿಜಯ್ ಅವರ ಕೊನೆಯ ಸಿನಿಮಾ ಎಂಬ ಲೇಬಲ್ ಅಂಟಿಸಿಕೊಂಡೆ ಚಿತ್ರಣಗೊಂಡದ್ದು ಜನ ನಾಯಗನ್! ಈ ಸಿನಿಮಾವನ್ನ ನಮ್ಮ ಕೆವಿನ್ ಪ್ರೊಡಕ್ಷನ್ಸ್‌ನ ವೆಂಕಟ್ ನಾರಾಯಣ್ 500 ಕೋಟಿ ಸುರಿದು ನಿರ್ಮಿಸಿದ್ದಾರೆ. ಈ ಸಿನಿಮಾ ಮೊನ್ನೆ ಜನವರಿ 9ರಂದು ಬಿಡುಗಡೆ ಆಗಬೇಕಿತ್ತು.

ವಾರದ ಮುಂಚೆಯೇ ಥೀಯೇಟರ್ಸ್ ಅನೌನ್ಸ್ ಆಗಿ, ಅಡ್ವಾನ್ಸ್ ಬುಕಿಂಗ್ ಕೂಡ ಮುಗಿದು ಹೋಗಿತ್ತು! ಹೀಗಿರುವಾಗ, ಜನವರಿ 8 ರಂದೇ ಸೆನ್ಸಾರ್ ಮಂಡಳಿ 'ಜನ ನಾಯಗನ್' ಬಿಡುಗಡೆಗೆ ಬ್ರೇಕ್ ಹಾಕಿ ಬಿಟ್ಟಿತು! ಸಿನಿಮಾದಲ್ಲಿ ಆ ಭಾಗ ಸರಿಯಿಲ್ಲ, ಈ ಭಾಗ ಸರಿಯಿಲ್ಲ ಕತ್ತರಿಸಿಕೊಂಡು ಬನ್ನಿ ಅಂತ ನಿರ್ಮಾಪಕರನ್ನ ವಾಪಸ್ ಕಳುಹಿಸಲಾಯ್ತು. ಅವರು ಹೇಳಿದಂತೆಯೇ ಕಟ್ ಮಾಡಿಕೊಂಡು ಹೋದ್ರೆ, ಆಗಲ್ಲ... U/A ಸರ್ಟಿಫಿಕೇಟ್ ಕೊಡ್ತೇವೆ ಅಂತು ಸೆನ್ಸಾರ್ ಮಂಡಳಿ! ಪರ್ವಾಗಿಲ್ಲ ಕೊಡ್ರಿ ಅಂದ್ರೆ, ಅಷ್ಟೊತ್ತಿಗೆ ಯಾರೋ ಹೈಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಿ ಅದನ್ನೂ ಕೊಡದಂತೆ ಕಡ್ಡಿ ಆಡಿಸಿಬಿಟ್ರು! ರಜೆಗಳು ಹಬ್ಬಗಳೆಲ್ಲ ಮುಗಿದ ಮೇಲೆ ಜನವರಿ 21ರ ಮೇಲೆ ಪರಿಶೀಲನೆ ಮಾಡೋಣ ಅಂತು, ಹೈ ಕೋರ್ಟ್!



ಇದರಿಂದ, ಜನವರಿ 14 ಪೊಂಗಲ್‌ಗಾದ್ರೂ ರಿಲೀಸ್ ಮಾಡಿ ಅಭಿಮಾನಿಗಳನ್ನು ತಣಿಸೋಣ ಅಂದುಕೊಂಡಿದ್ದ ನಿರ್ಮಾಪಕರಿಗೆ, ವಿತರಕರಿಗೆ ಭಾರಿ ನಿರಾಸೆ ಆಗಿದೆ! ಅಂದಹಾಗೆ, ತೆಲುಗಿನ 'ಭಗವಂತ ಕೇಸರಿ' ಸಿನಿಮಾದ ರಿಮೇಕ್ ಆಗಿರುವ 'ಜನ ನಾಯಗನ್' ಬಿಡುಗಡೆ ನಿಜವಾಗಿ ನಿಂತಿದ್ದೇಕೆ? ಅಲ್ಲಿ ಆಗದ ತೊಂದರೆ ಇಲ್ಲೇಕೆ ಆಯ್ತು?? ವಿಜಯ್ ರಾಜಕೀಯ ರಂಗ ಸೇರಿದ್ದೇ ತಪ್ಪಾಗಿ ಹೋಯಿತಾ??? ತಮಿಳುನಾಡು ಕರ್ನಾಟಕ ಎಲ್ಲಾ ಕಡೆ ಇವೇ ಮುಂತಾದ ಪ್ರಶ್ನೆಗಳು ಜನರ ಬಾಯಲ್ಲಿ ಉಲಿಯುತ್ತಿವೆ, ಎಲೆ ಅಡಿಕೆ ಸುಣ್ಣ ಮಿಶ್ರಣದಂತೆ... ☯

# ನಟಿಖುಷಿ ಮುಖರ್ಜಿ ವಿರುದ್ಧ 100 ಕೋಟಿ ಮಾನನಷ್ಟ ಮೊಕದ್ದಮೆ!



ಟೀಂ ಇಂಡಿಯಾದ ಟಿ20 ನಾಯಕ ಸೂರ್ಯ ಕುಮಾರ್ ಯಾದವ್ ಕುರಿತು ಬಾಲಿವುಡ್ ನಟಿ ಖುಷಿ ಮುಖರ್ಜಿ ನೀಡಿದ್ದ ಹೇಳಿಕೆ ಭಾರಿ ವಿವಾದಕ್ಕೆ ಕಾರಣವಾಗಿತ್ತು. ಈ ಹೇಳಿಕೆಯೇ ನಟಿಯನ್ನೀಗ ಕಾನೂನು ಸಂಕಷ್ಟಕ್ಕೆ ಸಿಲುಕಿಸಿದೆ! ಖುಷಿ ವಿರುದ್ಧ 100 ಕೋಟಿ ರೂಪಾಯಿ ಮಾನನಷ್ಟ ಮೊಕದ್ದಮೆ ಹೂಡಲಾಗಿದೆ.




ಮುಂಬೈ ಮೂಲದ ಅನ್ಸಾರಿ ಕಳೆದ ಜನವರಿ 13 ರಂದು ಖುಷಿ ಮುಖರ್ಜಿ ವಿರುದ್ಧ 100 ಕೋಟಿ ರೂಪಾಯಿ ಮಾನನಷ್ಟ ಮೊಕದ್ದಮೆ ಹೂಡಿ ಘಾಜಿಪುರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ಕೂಡಲೇ ನಟಿಯ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಮನವಿ ಮಾಡಿದ್ದಾರೆ. ನಟಿ ಖುಷಿಯ ಹೇಳಿಕೆಗಳು ಸೂರ್ಯಕುಮಾರ್ ಯಾದವ್ ಅವರ ಘನತೆಗೆ ಧಕ್ಕೆ ತರುವಂತಿವೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಖುಷಿ ಮುಖರ್ಜಿ ಅವರು ಕ್ರಿಕೆಟಿಗರೊಂದಿಗೆ ಡೇಟ್ ಮಾಡುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸುವಾಗ ಈ ವಿವಾದ ಅವ್ರೇ ಸೃಷ್ಟಿಸಿದ್ರು. ಯಾವುದೇ ಕ್ರಿಕೆಟಿಗರನ್ನ ಡೇಟ್ ಮಾಡಲು ತನಗೆ ಇಷ್ಟವಿಲ್ಲ ಎಂದ ಅವರು, ಅನೇಕ ಕ್ರಿಕೆಟಿಗರು ತನಗೆ ಆಸಕ್ತಿ ತೋರಿಸುತ್ತಿದ್ದರು. ಸೂರ್ಯಕುಮಾರ್ ಯಾದವ್ ಅವರು ಹಿಂದೆ ತನಗೆ ತುಂಬಾ ಮೆಸೇಜ್ ಮಾಡುತ್ತಿದ್ದರು. ಆದರೆ ಈಗ ಅವರು ಮಾತಾಡುತ್ತಿಲ್ಲ ಮತ್ತು ತನ್ನ ಹೆಸರನ್ನ ಅವರೊಂದಿಗೆ ಜೋಡಿಸಬಾರದು ಎಂದೂ ಅವರು ಹೇಳಿದ್ದರು. ಈ ಬಳಿಕ ಭಾರಿ ವಿವಾದವೆದ್ದು ಇದೀಗ ದೂರು ದಾಖಲಾಗಿದೆ. ☯

# ಅಂತರಂಗದ ಅಣ್ಣನಿಗೆ ರಾಜ್ಯ ಪ್ರಶಸ್ತಿಯ ಗರಿ!

ಚಂದನವನದ ಹಿರಿಯ ನಿರ್ದೇಶಕ, ಬರಹಗಾರ ಪ್ರಕಾಶ್‌ರಾಜ್ ಮೇಹು ಅವರ 'ಅಂತರಂಗದ ಅಣ್ಣ' ಕೃತಿಗೆ ರಾಜ್ಯ ಚಲನಚಿತ್ರ ಸಾಹಿತ್ಯ ಪ್ರಶಸ್ತಿ ಲಭಿಸಿದೆ! ಪ್ರಶಸ್ತಿ ಪಡೆದ ರಾಜ್‌ಗೆ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದೆ. ಈ ಬಗ್ಗೆ ಅವರ ಮಾತಿನಲ್ಲೇ ಕೇಳಿ....


ಪ್ರಕಾಶರಾಜ್ ಮೇಹು

ನಾನು ಸಿನಿಮಾ ನಟನಾಗಬೇಕು ಅಂದುಕೊಂಡವನು ಆನಂತರ ನಿರ್ದೇಶಕನಾಗಬೇಕು ಅಂತ ತೀರ್ಮಾನಿಸಿ ಆ ನಿಟ್ಟಿನಲ್ಲಿ ಕೆಲಸ ಮಾಡಲು ಪ್ರಾರಂಭಿಸಿದೆ. ಆದರೆ ಕನಸುಮನಸಿನಲ್ಲಿಯೂ ನಾನು ಪುಸ್ತಕ ಬರೆಯಬೇಕು, ಸಾಹಿತಿಯಾಗಬೇಕು, ಅಂದುಕೊಂಡವನಲ್ಲ! ಸೌಮ್ಯ ಆಜಿಯ ಒತ್ತಾಯದಿಂದ, 'ನಿನ್ನ ಬರವಣಿಗೆ ಚೆನ್ನಾಗಿದೆ, ಬರೀ ಬರೀ' ಅಂತ ಪೀಡಿಸಿದ್ದರಿಂದ 2001ರಲ್ಲಿ ನನ್ನೂರಿನ ಕಥೆ (ಕಾದಂಬರಿ) 'ತಿಮ್ಮಜ್ಜಿಯ ಮ್ಯಾಗ್ಲುಂಡಿ' ಬರೆದೆ. ಆ ವರ್ಷ ಅದಕ್ಕೆ ಅನಿರೀಕ್ಷಿತವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂತು. ಮಾತ್ರವಲ್ಲ ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಲ್ಪಟ್ಟಿತು. ಅದು ನನಗೆ ಹೆಸರನ್ನೂ ತಂದುಕೊಟ್ಟಿತು. ಇನ್ನೂ, ಅಣ್ಣಾವ್ರ ಅಪ್ಪಟ ಅಭಿಮಾನಿಯಾದ ನನಗೆ ಅವರ ಜೊತೆ ಸತತ ಹತ್ತು ವರ್ಷಗಳ ಕಾಲ ಒಡನಾಡುವ ಅವಕಾಶ ಸಿಕ್ಕ ಫಲವಾಗಿ, ಹೊರ ಜಗತ್ತಿಗೆ ಅಷ್ಟಾಗಿ ಗೊತ್ತಿಲ್ಲದ ಒಬ್ಬ ರಾಜ ಕುಮಾರ್ ನನಗೆ ಗೋಚರಿಸುತ್ತ ಹೋದರು! ಅವರು ತೀರಿಕೊಂಡ 15 ವರ್ಷಗಳಲ್ಲಿ ಅವರ ಬಗ್ಗೆ ನೂರಾರು ಪುಸ್ತಕಗಳು ಬಂದವು, ಅವುಗಳನ್ನು ಗಮನಿಸಿದೆ, ಅವುಗಳಲ್ಲಿ ನಾ ಕಂಡ ರಾಜಕುಮಾರ್ ಅಷ್ಟಾಗಿ ಕಾಣಲಿಲ್ಲ!!



ಹಾಗಾಗಿ 'ಆ' ರಾಜಕುಮಾರರನ್ನು ಜಗತ್ತಿನ ಮುಂದೆ ಅನಾವರಣ ಮಾಡಬೇಕು, ಅನ್ನುವ ಕಾರಣಕ್ಕೆ 2021ರಲ್ಲಿ 'ಅಂತರಂಗದ ಅಣ್ಣ' ಪುಸ್ತಕ ಬರೆದೆ, ಬಹಳ ಬಹಳ ಜನ ಓದಿದರು, ಮೆಚ್ಚಿದರು, ಅವರೆಲ್ಲರಿಗೂ ಸಹ ಧನ್ಯವಾದಗಳು. ಆ ತೃಪ್ತಿಯ ಜೊತೆಗೆ ಈ ಪ್ರಶಸ್ತಿ. ಈ ಎರಡೂ ಪುಸ್ತಕಗಳು ನನ್ನಿಂದ ಬರೆಸಿಕೊಂಡವು ಅಷ್ಟೇ, ಇಲ್ಲಿ ನನ್ನ ಹೆಚ್ಚುಗಾರಿಕೆ ಏನಿಲ್ಲ 'ತಿಮ್ಮಜ್ಜಿಯ ಮ್ಯಾಗ್ಲುಂಡಿ'ಯ ಯಶಸ್ಸು ನಮ್ಮ ಊರಾದ ಮೇಗಲಹುಂಡಿ (ಮೇಹು)ಗೆ, ಅಲ್ಲಿನ ಜನ ಜೀವನಕ್ಕೆ ಸಲ್ಲಬೇಕು. 'ಅಂತರಂಗದ ಅಣ್ಣ' ಪುಸ್ತಕದ ಯಶಸ್ಸು ಸಾಕ್ಷಾತ್ ಡಾ. ರಾಜಕುಮಾರ್ ಅವರಿಗೇ ಸಲ್ಲಬೇಕು ಅನ್ನುವುದು ನನ್ನ ಮನದಾಳದ ಅಭಿಪ್ರಾಯ... ☯

15 ☞

ತರುಣಿ ಪಾತ್ರದಿಂದ ಮುದುಕಿ ಪಾತ್ರದವರೆಗೆ, ನಾಯಕಿಯಿಂದ ಖಳನಾಯಕಿವರೆಗೆ ವಿಭಿನ್ನವಾದ ಪಾತ್ರ ಮಾಡಿದ್ದೇನೆ. ಜೀವನ ಚಕ್ರ ಉರುಳಿದಂತೆ ನನ್ನ ಪಾತ್ರಗಳು ಬದಲಾಗಿವೆ. ಆದರೆ ನಾನು ಬದಲಾಗಿಲ್ಲ. ನನ್ನ ಮನಸು ಬದಲಾಗಿಲ್ಲ. ಈಗಲೂ ನನಗೆ ವೈವಿಧ್ಯಮಯವಾದ ಪಾತ್ರ ಮಾಡಬೇಕೆಂಬಾಸೆ. ವಯಸಿಗೆ ತಕ್ಕಂತೆ ಹಣ್ಣು ಹಣ್ಣು ಮುದುಕಿಯ ಪಾತ್ರ ಮಾಡಬೇಕೆಂಬ ಕನಸಿದೆ. ಅಂತಹ ಪಾತ್ರ ಕೊಡುವ ನಿರ್ದೇಶಕರಿಗಾಗಿ ನಾನೀಗಲೂ ಕಾತರದಿಂದ ಎದುರು ನೋಡುತ್ತಿದ್ದೇನೆ ಕನ್ನಡ ಚಿತ್ರರಂಗ ಬಹಳ ಬೆಳೆದಿದೆ. ಇದನ್ನು ಉಳಿಸಿ ಮತ್ತಷ್ಟು ಬೆಳೆಸಬೇಕಾದುದು ಚಿತ್ರೋದ್ಯಮದವರ ಕರ್ತವ್ಯ. ಮೊದಲಿಗೆ ನಿರ್ಮಾಪಕ ಚೆನ್ನಾಗಿರಬೇಕು. ಏಕೆಂದರೆ ಆತ ಫಲ ಬಿಡುವ ಮರ ಇದ್ದಂತೆ. ಅವರ ನೆರಳಲ್ಲಿ ಕಲಾವಿದರು, ತಂತ್ರಜ್ಞರು ನೆಮ್ಮದಿಯಾಗಿ ಬಾಳಬಹುದು. ಆ ಮರವೇ ಬಿದ್ದು ಹೋದರೆ ನಮಗೆ ನೀರು, ನೆರಳಾದರೂ ಎಲ್ಲಿ ಸಿಗುತ್ತೆ ಅಂತ ಸಣ್ಣದಾಗಿ ಯೋಚಿಸಿದರೂ ನಮ್ಮ ಕನ್ನಡ ಚಿತ್ರರಂಗ ಉಳಿಯುತ್ತೆ. ಈ ನಿಟ್ಟಿನಲ್ಲಿ ಚಿತ್ರೋದ್ಯಮದವರೆಲ್ಲ ಒಂದೇ ಮನಸ್ಸಿನಿಂದ, ಒಂದು ಕುಟುಂಬದವರಂತೆ ಒಗ್ಗೂಡಿ ಕೆಲಸ ಮಾಡಿ, ನಿರ್ಮಾಪಕರನ್ನು ನಿರ್ಮಾಪಕರನ್ನು ಉಳಿಸಿ, ಕನ್ನಡ ಚಿತ್ರರಂಗ ಬೆಳೆಸಿ ಅಂತ ಕನ್ನಡ ಚಿತ್ರರಂಗದ ಉಪ್ಪುಂಡ ಕಲಾವಿದೆಯಾಗಿ ಕೋರಿಕೊಳ್ಳುತ್ತೇನೆ. ಇತ್ತೀಚೆಗೆ 2012 ರ ಏಪ್ರಿಲ್ ತಿಂಗಳಿನಲ್ಲಿ ಮೈಸೂರು ವಿಶ್ವವಿದ್ಯಾಲಯದವರು ಈ ಜಯಂತಿಯ ಕಲಾಸೇವೆ ಗುರುತಿಸಿ ಡಾಕ್ಟರೇಟ್ ಗೌರವ ಕೊಟ್ಟಿದ್ದಾರೆ. ದೇಶದಲ್ಲೇ 5ನೇ ಪ್ರತಿಷ್ಠಿತ ವಿಶ್ವವಿದ್ಯಾನಿಲಯದಿಂದ ಈ ಗೌರವ ಸಿಕ್ಕಿದ್ದು ಜೊತೆಗೆ ರಾಜ್‌ರಂಥ ಮೇರು ನಟರಿಗೆ ಡಾಕ್ಟರೇಟ್ ಕೊಟ್ಟ ಮೈಸೂರು ವಿವಿಯಿಂದಲೇ ರಾಜ್‌ಜಯಂತಿ ತಿಂಗಳಲ್ಲಿ ಕೊಟ್ಟಿರುವುದು ನನ್ನನ್ನು ಪುಳಕಿತಳನ್ನಾಗಿಸಿದೆ.... (ಅಂದಹಾಗೆ ಜಯಂತಿ ಅವರು ದಿನಾಂಕ: 26.07.2021ರಂದು ತಮ್ಮ 76ನೇ ವಯಸ್ಸಿನಲ್ಲಿ ನಿಧನರಾದರು) ☯

Vol. 41 No. 33 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 ttps://www.instagram.com/police_news?igsh=MWJ6bHJwZDRmZDc1aQ==